
ಗೌರಿ ಲಂಕೇಶರ

ಲಂಕೇಶ್


ಫೆಬ್ರವರಿ 7, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



'ಬಂ' ಮತ್ತೆ ಕಾಂಗ್ರೆಸ್‌ಗೆ!



ರಿಯಲ್ ಎಸ್ಟೇಟ್ ದುಡ್ಡು






ಸನ: ಡ್ಡಿ ದಂಧೆಗೆ ಂಶವೇ ಬಲಿ!



ಚಿವ ಸಂಪುಟ: ಾತೆ ಕ್ಯಾತೆ

ೆಡ್ಡಿಗಳು ನೆ ುರುಕರು' ಂಗೇರಾ





50 ಕೋಟಿ ಲಾಸ್!


ಪದ್ಮ ಪ್ರಶಸ್ತಿಗಳು

ವಸಾಹತುಶಾಹಿಗಳೇ ಹೆಚ್ಚಿರುವುದೇಕೆ?


ಈ ಬಾರಿಯ ಗಣರಾಜ್ಯೋತ್ಸವದ ಪದ್ಮ ಪ್ರಶಸ್ತಿಗಳು ಘೋಷಿತವಾಗಿವೆ. ಸತತವಾಗಿ ಮೂರನೇ ಬಾರಿಯೂ ಭಾರತಕ್ಕೆ ರತ್ನಪ್ರಾಯರು ಯಾರೂ ಇಲ್ಲವೆಂಬುದು ಸಾಬೀತಾಗಿದೆ. ಆದರೂ ಈ ಬಾರಿ 10 ಪದ್ಮವಿಭೂಷಣ, 32 ಪದ್ಮ ಭೂಷಣ, ಮತ್ತು 79 ಪದ್ಮಶ್ರೀಗಳನ್ನು ಒಳಗೊಂಡಂತೆ 121 ನಾಗರಿಕ ಪ್ರಶಸ್ತಿಗಳನ್ನು ಕೊಡಮಾಡಲಾಗಿದೆ. ಗಣರಾಜ್ಯೋತ್ಸವ ದಿನದಂದು ಕೊಡುವ ಈ ಪ್ರಶಸ್ತಿಗಳ ಹಿಂದಿರುವ ತಿಳವಳಿಕೆ ಏನು?

ಈ ಸ್ವತಂತ್ರ ಭಾರತವನ್ನು ಕಟ್ಟಿದ್ದು - ಸಂವಿಧಾನದ ಮೊದಲ ಸಾಲುಗಳೆ ಹೇಳುವಂತೆ - ಈ ದೇಶದ ಜನ. "ನಾವು ಈ ದೇಶದ ಜನ, ಈ ದೇಶವನ್ನು ಒಂದು ಧರ್ಮ ನಿರಪೇಕ್ಷ, ಸಮಾಜವಾದಿ, ಪ್ರಜಾತಾಂತ್ರಿಕ ಗಣರಾಜ್ಯವನ್ನಾಗಿ ನಿರ್ಮಿಸಲು ಪಣತೊಟ್ಟಿದ್ದೇವೆ" ಎಂದು ಈ ದೇಶದ ಜನ ಮಾಡಿರುವ ಪ್ರತಿಜ್ಞೆ. ಹೀಗಾಗಿ ಪ್ರತಿ ಗಣರಾಜ್ಯೋತ್ಸವ ದಿನದಂದು ಈ ಆಶಯಗಳನ್ನು ಈಡೇರಿಸಲು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶ್ರಮಿಸಿದ ನಾಗರಿಕರಿಗೆ ಸರ್ಕಾರ ಪದ್ಮ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸುತ್ತದೆ. ಒಂದು ಸಮಾಜವಾದಿ ಗಣತಂತ್ರ ನಿರ್ಮಾಣವಾಗುವುದು ಆ ದೇಶದ ಸಂಪನ್ಮೂಲಗಳ ಮೇಲೆ ಆ ದೇಶದ ಜನಕ್ಕೆ ಪರಮಾಧಿಕಾರ ದೊರೆತಾಗ, ಮತ್ತು ಅದರ ನಿರ್ಮಾಣದಲ್ಲಿ ಪ್ರಧಾನ ಪಾತ್ರವನ್ನು ಆ ದೇಶದ ದುಡಿಯುವ ಜನ ವಹಿಸಿದಾಗ. ಹೀಗಾಗಿ ಒಂದು ದೇಶ ತನ್ನನ್ನು ಗಣತಂತ್ರವನ್ನಾಗಿ ನಿರ್ಮಿಸುವಲ್ಲಿ ಕೊಡಬೇಕಾದ ಪದ್ಮ ಪ್ರಶಸ್ತಿಗೆ ನಿಜವಾಗಿ ಭಾಜನರಾಗಬೇಕಿರುವುದು ಆ ದೇಶದ ದುಡಿಯುವ ಜನ, ಅಥವಾ ಆ ನಿಟ್ಟನಲ್ಲಿ ಚಿಂತಿಸುವ, ಶ್ರಮಿಸುವ ವಿವಿಧ ಕ್ಷೇತ್ರಗಳ ಗಣ್ಯರು.

ಆದರೆ ನಮ್ಮ ಭಾರತದ ಗಣರಾಜ್ಯೋತ್ಸವದ ದಿನದಂದು ಕೊಡ ಮಾಡಿರುವ ಪ್ರಶಸ್ತಿಗಳಲ್ಲಿ ಅತಿ ಹೆಚ್ಚು ಪದ್ಮ ಪ್ರಶಸ್ತಿಗಳು ಸಿಕ್ಕಿರುವುದು ಖಾಸಗಿ ಉದ್ಯಮಿಕ ಕ್ಷೇತ್ರಕ್ಕೆ. ಉದಾಹರಣೆಗೆ ಪ್ರಶಸ್ತಿ ಪಡೆದವರ ಪಟ್ಟಿ ನೋಡಿ. ಪದ್ಮ ಭೂಷಣ ಪ್ರಶಸ್ತಿಗಳು ಏರ್ ಟೆಲ್‌ನ ಮುಖ್ಯಸ್ಥ ಸುನಿಲ್ ಭಾರ್ತಿ ಮಿತ್ತಲ್, ಪೆಪ್ಸಿ ಕಂಪನಿಯ ಅಂತರರಾಷ್ಟ್ರೀಯ ಮುಖ್ಯಸ್ಥೆ ಭಾರತೀಯ ಮೂಲದ ಇಂದ್ರ ನೂಯಿ, ಸುಜುಕಿ ಮೋಟಾರ್ಸ್ ಕಂಪನಿಯ ಓ ಸುಜುಕಿಗೆ ಲಭಿಸಿದ್ದರೆ, ಪದ್ಮಶ್ರೀ ಪ್ರಶಸ್ತಿಗಳಲ್ಲಿ ಹೆಚ್.ಎಸ್.ಬಿ.ಸಿ. ಕಂಪನಿಯ ಭಾರತ ಮುಖ್ಯಸ್ಥೆ ನೈನಾ ಕಿದ್ವಾಯಿ ಮತ್ತು ಸಾಸ್ಕಾವಸ್ ಮುಖ್ಯಸ್ಥ ಕಿರಣ ಕಾರ್ತಿಕ್‌ರವರೂ ಸೇರಿದಂತೆ ದೊಡ್ಡ ಪಟ್ಟಿ ಇದೆ. ಈ ಎಲ್ಲ ಮಹಾಶಯರು ಈ ದೇಶವನ್ನು ಒಂದು ಸಮಾಜವಾದಿ ಗಣತಂತ್ರ ಮಡಲು ಶ್ರಮಿಸಿದವರಾ? ಖಂಡಿತಾ ಅಲ್ಲ.







ಇವರೆಲ್ಲರೂ ಈ ದೇಶವನ್ನು ಸಮಾಜವಾದಿ ಗಣತಂತ್ರಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ, ಒಂದು ನವ ವಸಾಹತುಶಾಹಿ ದಿಕ್ಕಿನಲ್ಲಿ ಕೊಂಡೊಯ್ಯುತ್ತಿರುವ ಪ್ರಭೃತಿಗಳು! ಈ ದೇಶದಲ್ಲಿ ಇನ್ನೂ ತೀವ್ರತರವಾದ ಜನವಿರೋಧಿ ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ತರಲು ಒತ್ತಡ ಹಾಕುತ್ತಿರುವವರು ಮತ್ತು ಆ ನೀತಿಗಳ ಪ್ರಥಮ ಫಲಾನುಭವಿಗಳು! ಅವರೇ ಈ ದೇಶದ ಪದ್ಮ ಶ್ರೀಗಳು, ಪದ್ಮ ಭೂಷಣರು ಮತ್ತು ವಿಭೂಷಣರು! ಈ ಪ್ರಶಸ್ತಿಗಳು ನಮ್ಮ ದೇಶ ಸಮಾಜವಾದಿ ಗಣತಂತ್ರವೆಂದು ಹೇಳುವುದಿಲ್ಲ, ಬದಲಿಗೆ ಈ ದೇಶ ಅಮೆರಿಕದ ಕೃಪಾಛತ್ರದಡಿ ಇರುವ ಒಂದು ನವ ವಸಾಹತುವಾಗುವ ದಿಕ್ಕಿನೆಡೆ ಮುಂದುವರೆದಿದೆ ಎಂಬುದಕ್ಕೆ ಮತ್ತೊಂದು ಸಾಕ್ಷಿ ಈ ಪದ್ಮಪ್ರಶಸ್ತಿಗಳು.

ಚಾರ್ವಾಕ

- ಶಿವಸುಂದರ್-

ಭಾರತದಲ್ಲಿ ಕ್ರಿಕೆಟ್ ಒಂದು ಧರ್ಮದಂತಾಗಿದೆ ಎಂದು ಹಲವರು ಬರೆಯುತ್ತಾರೆ. ಆದರೆ ಅದು ಅಷ್ಟು ಸರಿಯಾದ ವಿವರಣೆಯಲ್ಲ. ಅದನ್ನು ಒಂದು ಪ್ರಭುತ್ವ ಧರ್ಮವನ್ನಾಗಿ ಮಾಡಿ ಖಾಸಗಿ ಕಂಪನಿಗಳು — ಅದರಲ್ಲೂ ಬೃಹತ್ ವಿದೇಶಿ ಕಂಪನಿಗಳು — ಕಾಸು ಮಾಡುತ್ತಿವೆ ಎಂಬುದೇ ಸರಿಯಾದ ವಿವರಣೆಯಾಗುತ್ತದೆ. ಏಕೆಂದರೆ ಕ್ರಿಕೆಟ್ ಅನ್ನು ಈ ದೇಶದಲ್ಲಿ ಸರ್ಕಾರ ಮತ್ತು ಎಲ್ಲಾ ಖಾಸಗಿ ಮತ್ತು ವಿದೇಶಿ ಜಾಹಿರಾತು ಕಂಪನಿಗಳು ಅತ್ಯಂತ ವಿಸ್ತೃತವಾಗಿ ಮತ್ತು ವ್ಯವಸ್ಥಿತವಾಗಿ ಪ್ರಚಾರ ಮಾಡಿವೆ. ಸರ್ಕಾರಿ ಕಾರ್ಯಕ್ರಮಕ್ಕೂ, ಖಾಸಗಿ ಕಂಪನಿಗಳ ಜಾಹಿರಾತಿಗೂ ಎಲ್ಲಕ್ಕೂ ಕ್ರಿಕೆಟಿಗರೇ, ಎಲ್ಲಕ್ಕೂ ಕ್ರಿಕೆಟ್ಟೇ. ಹೀಗೆ ವ್ಯವಸ್ಥಿತವಾಗಿ ಕ್ರಿಕೆಟ್ಟನ್ನು ಒಂದು ರಾಷ್ಟ್ರೀಯ ಉದ್ಯಮವನ್ನಾಗಿ ಮಾಡಲಾಗಿದೆ. ಈಗ ಸರ್ಕಾರವೇ ಉದಾರೀಕರಣದ ಹೆಸರಲ್ಲಿ ದೇಶಕ್ಕಿಂತ, ಸಂವಿಧಾನಕ್ಕಿಂತ ಮಾರುಕಟ್ಟೆ ನಿಯಮಗಳೇ ಮುಖ್ಯ ಎಂಬ ಕಾನೂನು ತಂದಿದೆ. ಈಗ ಅದು ಸರ್ಕಾರಿ ಉದ್ಯಮಗಳಿಗೆ ಅರ್ಥಾತ್ ಅದರ ಪರೋಕ್ಷ ಫಲಾನುಭವಿಗಳಾದ ಈ ದೇಶದ ಜನರಿಗೇ ಮಾರಕವಾಗುತ್ತಿದೆ.

ಈ ದೇಶದಲ್ಲಿ ಕ್ರಿಕೆಟ್ ಜ್ವರ ಪ್ರಾರಂಭವಾಯಿತೆಂದರೆ ಕೋಟಿ ಕೋಟಿ ಜನ ಟಿವಿ ಸೆಟ್‌ಗಳ ಮುಂದೇ ಕೂತಿರುತ್ತಾರೆ. ಅಂದರೆ ಅಷ್ಟು ಕೋಟಿ ಜನಕ್ಕೆ ತಮ್ಮ ಸರಕುಗಳನ್ನು ಮಾರಲು ಉತ್ತಮ ಅವಕಾಶವೆಂದು ಖಾಸಗಿ ಉದ್ಯಮಗಳು ಭಾವಿಸುತ್ತವೆ. ಹೀಗಾಗಿ ಕೋಟಿ ಕೋಟಿ ಖರ್ಚು ಮಾಡಿ ಕ್ರಿಕೆಟ್ ಪ್ರಸಾರದ ನಡುವೆ ತಮ್ಮ ಜಾಹಿರಾತನ್ನು ಪ್ರಚಾರ ಮಾಡಲು ನೂರಾರು ಕಂಪನಿಗಳು ತಾಮುಂದು ನೀಮುಂದು ಎಂದು ಪೈಪೋಟಿಗೆ ಬೀಳುತ್ತವೆ ಮಾತ್ರವಲ್ಲ ಕ್ರಿಕೆಟ್ ಪ್ರಸಾರ ಮಾಡುವ ಖಾಸಗಿ ಚಾನೆಲ್‌ಗಳು ಕೋಟಿ ಕೋಟಿ ಕೊಟ್ಟು ಅದರ ಹಕ್ಕನ್ನು ಪಡೆಯುತ್ತವೆ.ಇದರಿಂದ ಕ್ರಿಕೆಟ್ ಆಟದ ದೂರದರ್ಶನದ ಪ್ರಸಾರದ ಹಕ್ಕನ್ನು ಹೊಂದಿರುವವರಿಗೆ ಈ ಪ್ರಸಾರ ಉದ್ಯಮ ಅಪಾರ ಲಾಭ ತರುತ್ತದೆ. ಇದರಲ್ಲಿ ಸಾವಿರಾರು ಕೋಟಿ ಲಾಭ ಇದೆ.



ಈವರೆಗೆ ಈ ಪ್ರಸಾರದ ಸಂಪೂರ್ಣ ಸ್ವಾಮ್ಯ ಸರ್ಕಾರಿ ಒಡೆತನದ ದೂರದರ್ಶನದ್ದಾಗಿತ್ತು. ಅಂದರೆ ಸರ್ಕಾರಕ್ಕೆ ಪರೋಕ್ಷವಾಗಿ ಜನತೆಗೆ ಸಾವಿರಾರು ಕೋಟಿ ಲಾಭವಾಗುತ್ತಿತ್ತು.

ಆದರೆ ಉದಾರೀಕರಣದ ಪ್ರಕ್ರಿಯೆಯಲ್ಲಿ ಈ ಪ್ರಸಾರದ ಹಕ್ಕೂ ಸಹ ಖಾಸಗೀಕರಣ

ನಿಂಬಸ್ ವರ್ಸಸ್ ದೂರದರ್ಶನ್:

ದೇಶವೂ ಇಲ್ಲ ಪ್ರೇಮವೂ ಇಲ್ಲ!


ಗೊಂಡಿದೆ. ನಿಂಬಸ್, ವರ್ಲ್ಡ್ ಟೆಲ್, ರಿಲಯನ್ಸ್‌ನಂತ ವಿದೇಶಿ ಮತ್ತು ಸ್ವದೇಶಿ ಕಂಪನಿಗಳು ಆ ಸಾವಿರಾರು ಕೋಟಿ ಲಾಭಕ್ಕಾಗಿ ಸರ್ಕಾರದೊಂದಿಗೆ ಪೈಪೋಟಿ ಮಾಡುತ್ತಿವೆ. ಸರ್ಕಾರವೇ ಮುಂದೆ ನಿಂತು ತನ್ನ ಸ್ವಾಮ್ಯವನ್ನು ಖಾಸಗಿ ಬಂಡವಾಳಶಾಹಿಗಳಿಗೆ ವಹಿಸಿಕೊಟ್ಟಿರುವುದರಿಂದ ಸರ್ಕಾರಕ್ಕೆ ಬರುತ್ತಿದ್ದ ಲಾಭ ತಪ್ಪಿದೆ ಮಾತ್ರವಲ್ಲ, ದೂರದರ್ಶನ ಅದನ್ನು ಪ್ರಸಾರ ಮಾಡಲು ಕಾಸು ತೆರಬೇಕಾದ ಪರಿಸ್ಥಿತಿ ಬಂದಿದೆ.

ಈಗ ಹಾಲಿ ನಡೆಯುತ್ತಿರುವ ಭಾರತ- ವೆಸ್ಟ್ ಇಂಡೀಸ್ ಸರಣಿಯನ್ನು ಒಳಗೊಂಡಂತೆ ನಾಲಕ್ಕು ವರ್ಷಗಳ ಕಾಲ ಕ್ರಿಕೆಟ್ ಪಂದ್ಯವನ್ನು ಪ್ರಸಾರ ಮಾಡುವ ಹಕ್ಕನ್ನು ನಿಂಬಸ್ ಎಂಬ ದೈತ್ಯ ಕಂಪನಿಯೊಂದು 612 ಮಿಲಿಯನ್ ಡಾಲರ್ (ಸುಮಾರು ಮೂರು ಸಾವಿರ ಕೋಟಿ ರೂಪಾಯಿ) ಕೊಟ್ಟು ಖರೀದಿಸಿದೆ. ಆದರೆ ಅದರ ಎರಡು ಪಟ್ಟು ಹಣವನ್ನು ಇನ್ನೆರಡು ವರ್ಷಗಳೊಳಗೆ ಮಾಡುತ್ತದೆ. ತನ್ನ ಪ್ರಸಾರವನ್ನು ಯಾವ ಖಾಸಗಿ ಚಾನೆಲ್‌ಗಳು ತನಗೆ ಅತಿ ಹೆಚ್ಚು ಹಣ ಕೊಡುತ್ತವೆಯೊ ಅವರಿಗೇ ಪ್ರಸಾರದ ಹಕ್ಕನ್ನು ಮಾರುತ್ತದೆ. ಇದೆಲ್ಲದರ ಫಲಿತಾಂಶಯಾವುದೆಂದರೆ: ಆ ಚಾನೆಲ್‌ಗಳು ಮೊದಮೊದಲು ಕ್ರಿಕೆಟ್ಟನ್ನು ಬಿಟ್ಟಿಯಾಗಿ ತೋರಿಸುತ್ತಿದ್ದವರು ಕ್ರಮೇಣ ಪೇ ಚಾನೆಲ್ ಮಾಡುತ್ತಾರೆ. ಅಂದರೆ ಆ ಚಾನೆಲ್ ಅನ್ನು ನಮ್ಮ ಮನೆಯ ತನಕ ತರುತ್ತಿದ್ದ ಕೇಬಲ್ ವಿತರಕ ತಿಂಗಳಿಗೆ 5-10 ಸಾವಿರ ರೂಪಾಯಿ ಕೊಟ್ಟರೆ ಮಾತ್ರ ಆ ಚಾನೆಲ್ ಕೇಬಲ್ ಮೂಲಕ ನಮ್ಮ ಮನೆ ತಲುಪುವಂತಾಗುತ್ತದೆ. ಆ ಅಧಿಕ ಹೊರೆಯನ್ನು ಆ ಕೇಬಲ್‌ನವರು ಪ್ರತಿ ಮನೆಗಳಿಗೆ ತಿಂಗಳಿಗೆ 50-100 ರೂ. ಹೆಚ್ಚಿಸಿ ಭರಿಸುತ್ತಾರೆ.

ಅಂದರೆ ಏನಾಯ್ತು? ದೂರದರ್ಶನದ ಪ್ರಸಾರದ ಹಕ್ಕೂ ಖಾಸಗೀಕರಿಸಿದ್ದರಿಂದ ಅದರ ಹೊರೆ ಕ್ರಿಕೆಟ್ ಪ್ರೇಮಿಗಳ ಮೇಲೂ, ಅದರ ಲಾಭ ಮಾತ್ರ ದೈತ್ಯ ಖಾಸಗಿ ಕಂಪನಿಗಳಿಗೂ ದೊರೆಯುತ್ತಿದೆ. ಈ ಬಾರಿಯೂ ಸರ್ಕಾರಿ ಸ್ವಾಮ್ಯದ ದೂರದರ್ಶನ ನಿಂಬಸ್‌ನ ಜೊತೆಜೊತೆಗೆ ತನಗೂ ಪ್ರಸಾರದ ಹಕ್ಕು ಕೊಡಬೇಕೆಂದು ಕಡ್ಡಾಯ ಮಾಡಿದೆ. ಆದರೆ ನಿಂಬಸ್ ಕಂಪನಿ ಇದು ಅನ್ಯಾಯಯುತ ಮಾರುಕಟ್ಟೆ ವ್ಯವಹಾರವೆಂದು ಕೋರ್ಟಿನ ಮೆಟ್ಟಿಲನ್ನು ಹತ್ತಿದೆ. ಕೋರ್ಟು ಮತ್ತು ಅದರ ಜೊತೆಗೆ ಮಾಧ್ಯಮಗಳು ಸಹ ಸರ್ಕಾರ ನಿಂಬಸ್ ಕಂಪನಿಗೆ ಅನ್ಯಾಯ ಮಾಡುತ್ತಿದೆಯೆಂದು ಹುಯಿಲೆಬ್ಬಿಸಿದೆ. ಏಕೆಂದರೆ ಈ ಮಾರುಕಟ್ಟೆ ಯುಗದಲ್ಲಿ ನಾಗರಿಕರೆಂದರೆ ಬಂಡವಾಳಶಾಹಿಗಳು ಅಥವಾ ಕಾಸು ಕೊಟ್ಟು ಕೊಡುಕೊಳ್ಳುವ ಗ್ರಾಹಕರು ಮತ್ತು ದೇಶವೆಂದರೆ ಮಾರುಕಟ್ಟೆ. ಮಾರುಕಟ್ಟೆಗೆ ದೇಶವೂ ಇಲ್ಲ, ಪ್ರೇಮವೂ ಇಲ್ಲ.

ಕೊನೆ ಮಾತು

ಐಶ್ವರ್ಯ ಮತ್ತು ಅಭಿಷೇಕ್ ಬಚ್ಚನ್ ಮದುವೆಯಾಗುತ್ತಿದ್ದಾರಂತೆ. ಆಗಲಿ ಮದುವೆ. ಆದಷ್ಟೇ ಬೇಗ ಸ್ವಾರ್ಥ ಕಾರಣಗಳಿಂದ ಬೇರೆಬೇರೆಯಾಗದೇ ಚೆನ್ನಾಗಿರಲಿ. ಆದರೆ ಇದು ಈ ವರ್ಷ ನಮ್ಮ ದೇಶದಲ್ಲಿ ನಡೆಯಲಿರುವ ಅತಿ ಮಹತ್ವದ ಸಂಗತಿಯೇ? ನಮ್ಮ ಮಾಧ್ಯಮಗಳು ಅದಕ್ಕೆ ಕೊಡುತ್ತಿರುವ ಪ್ರಚಾರ ನೋಡಿದರೆ ಹಾಗನ್ನಿಸಿಬಿಡುತ್ತದೆ. ಕನ್ನಡದ ಈ ಟಿವಿ ಚಾನೆಲ್ ಅಂತೂ "ಈ ವಿಷಯವನ್ನು ಪ್ರಪಂಚಕ್ಕೆ ಮೊದಲು ತಿಳಿಸಿದವರು ನಾವೆ" ಎಂಬುದನ್ನು ತಮ್ಮ ಮುಖ್ಯ ಸುದ್ದಿ ಪ್ರಸಾರದಲ್ಲಿ ಕನಿಷ್ಟ ಹತ್ತು ಬಾರಿ ಪ್ರಸಾರ ಮಾಡಿದರು. ಅವರಿಬ್ಬರ ಎಂಗೇಜ್‌ಮೆಂಟ್ ಆದ ದಿನ ಅದೇ ಎಲ್ಲಾ ಮಾಧ್ಯಮಗಳ ಲೀಡ್ ನ್ಯೂಸ್ ಆಗಿತ್ತು, ಕನ್ನಡಕ್ಕೆ ಜ್ಞಾನ ಪೀಠಗಳು ಬಂದಾಗಲೂ, ಅಥವಾ ಅಪರೂಪಕ್ಕೆ ಒಲಂಪಿಕ್ಸ್‌ನಲ್ಲಿ ದೇಶಕ್ಕೆ ಮೆಡಲ್ ಸಿಕ್ಕಾಗಲೂ ಇಷ್ಟು ಸುದ್ದಿಯಾಗಿರಲಿಲ್ಲ, ಈ ಮಾಧ್ಯಮಗಳು, ಈ ಸಮಾಜ ಎತ್ತ ಸಾಗುತ್ತಿದೆ??



No Comments



"ಎಂದಿನಂತೆ ವಾಟಾಳ್ ನಾಗರಾಜ್ ಸಭಾತ್ಯಾಗ"

- ಅಧಿವೇಶನದ ಪ್ರಾರಂಭದ ದಿನದಂದು ಎಂದಿನಂತೆ ಪತ್ರಿಕಾ

"ಸಂಪುಟದಲ್ಲಿ ಸ್ಥಾನ ಕೊಡದೆ ಯಡಿಯೂರಪ್ಪ


ಮೋಸ ಮಾಡಿದ್ದಾರೆ"

- ಶಂಕರಲಿಂಗೇಗೌಡ, ಹತಾಶ ಬಿಜೆಪಿ



"ಜ್ಯೋತಿಷ್ಯ ಸುಳ್ಳಾದರೂ ಜನರಿಗೆ ಅದರ ಬಗ್ಗೆ ಕುತೂಹಲ, ನಂಬಿಕೆ, ಕಡಿಮೆ ಆಗುವುದಿಲ್ಲ"

- ಎಸ್.ಕೆ.ಜೈನ್, ಜ್ಯೋತಿಷಿ.



"ಜ್ಯೋತಿಷಿ ಎಸ್.ಕೆ.ಜೈನ್‌ರವರು ನನಗೆ 25 ವರ್ಷಗಳಿಂದ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರಿಂದಲೇ ನಾನು ಈ ಸ್ಥಿತಿಗೆ ತಲುಪಿದ್ದೇನೆ"

- ಚಿತ್ರನಟ ಶ್ರೀನಾಥ್

"ನಮ್ಮ ಇಡೀ ಗುಜರಾತನ್ನು ಒಂದು ಎಸ್.ಇ.ಜ

ಆಗಿ ಬಿಟ್ಟುಕೊಡಲು ಸಿದ್ಧರಿದ್ದೇವೆ"

- ಗುಜರಾತಿನ ಮುಖ್ಯಮ

ನರೇಂದ್ರ ಮೋ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಸಚಿವ ಸ್ಥಾನ ದೊರೆಯದಿರುವ ಬಗ್ಗೆ

ಯಾವುದೇ ಬೇಸರವಿಲ್ಲ"

-ಮಹಿಮಾ ಪಟೇಲ್



"ಸರಕಾರಿ ಭೂಮಿ ಒತ್ತುವರಿ ಮಾಡಿದ್ದರೆ ನನ್ನನ್ನು ಗಲ್ಲಿಗೇರಿಸಲಿ"

-ಡಿ.ಕೆ. ಶಿವಕುಮಾರ್



"ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿಲ್ಲ ಎಂಬ ನೋವು ನಮಗೂ ಇದೆ"

- ಹೆಚ್.ಡಿ. ಕುಮಾರಸ್ವಾಮಿ

"2008ನೇ ಇಸವಿಗೆ ಕರ್ನಾಟಕ ಗುಡಿಸಲು ರಹಿತ ರಾಜ್ಯವಾಗಲಿದೆ"

-ಸರ್ಕಾರದ



ವಾರದ ವೈರಾಗ್

"ರಷ್ ಇರೋ ಬಸ್ಸಲ್ಲಿ

ಸೀಟಗಾಗಿ ಟವಲ್ ಹಾ

ಬರುವ ಅವಸರ ನನಗಿಲ್ಲ

ನನಗಾಗಿ ಕಾರೇ ಬರುತ್ತೆ

ಎಂಬ ಭರವಸೆ ನನಗಿದೆ"


-ಮಹಿಮಾ ಪಟೇಲ್



ವಾರದ ಅಸಂಬದ್ಧ:

"ಗೋಮೂತ್ರ ಹಾಲಿಗಿಂತ 12-13 ಪಟ್ಟು ಹೆಚ್ಚಿನ ಬಾಳಿಕೆ ಬರುತ್ತೆ, ಆದ್ದರಿಂದ ಗೋಮೂತ್ರ ಖರೀದಿ ಒಂದು ಉದ್ಯಮವಾಗಿ ಬೆಳೆಯಬೇಕು"

-ರಾಘವೇಶ್ವರ ಸ್ವಾಮಿ



ವಾರದ ಅಪದ್ಧ:

"ಬೆಂಗಳೂರು ಸುತ್ತಮುತ್ತಲಿನ ಭೂ

ಹರಾಜನಿಂದ ಬರುವ ಹಣಕ್ಕಾಗಿ ಕಾಯದೆ

ಮೂಲಗಳಿಂದ ಹಣ ಕ್ರೋಢೀಕರಿಸಿ ರೈ


ಸಾಲ ಮನ್ನಾ ಮಾಡಲು ಸರ್ಕಾರ ಬದ್ಧವಾಗಿ

-ಯಡಿಯೂ

ಹೂ, ಮುಳ್ಳುಗಳ ನಡುವೆ ಅಪ್ಪನ ನೆನಪು

ಆ ಕಪ್ಪು ಕಲ್ಲಿನ ಮೇಲೆ ಕೂತಿದ್ದ ಪುಟ್ಟಿ ಇಶಾ ತನಗೆ ಇಷ್ಟಬಂದಂತೆ ಚೆಂಡುಹೂ, ಗುಲಾಬಿ ಗಳನ್ನು ಜೋಡಿಸುತ್ತಿದ್ದಳು. "ತಾತಾ ಮೇಲೆ ಹಾಗೆಲ್ಲ ಓಡಾಡು ತ್ತೀಯಲ್ಲಾ, ತಾತಾ ಏನನ್ನುತ್ತೆ?" ಎಂದು ಅಮ್ಮ ಅವಳನ್ನು ಕೇಳಿದಾಗ, ತನ್ನ ಪುಷ್ಪ ಸಂಯೋಜನೆಯಲ್ಲಿ ಮುಳುಗಿದ್ದ ಇಶಾ ಮರು ಚಿಂತಿಸದೆ "ಸಂತೋಸ ಪಡ್ತೆ" ಅಂದಳು.

ಸಾವು, ಸಮಾಧಿ, ಇದ್ಯಾವುದರ ಬಗ್ಗೆಯೂ ಗೊತ್ತಿಲ್ಲದ ಇಶಾ ಅಪ್ಪನ ಸಮಾಧಿಯನ್ನು ತನಗೆ ಇಷ್ಟವಾದ ರೀತಿಯಲ್ಲಿ ಅಲಂಕರಿಸುತ್ತಿದ್ದಳು. ಆ ಸಮಾಧಿಯ ಮೇಲೆ ತನ್ನ ನೆರಳನ್ನು ಚಾಚಿರುವ ಮಾವಿನ ಮರದಲ್ಲಿ ಆಗ ತಾನೇ ಹೂಗಳು ಅರಳಲು ಆರಂಭಿಸಿದ್ದವು.



ಆ ಸಮಾಧಿಯ ಮುಂದೆ ಅಪ್ಪನಿಗೆ ತುಂಬಾ ಇಷ್ಟವಾಗಿದ್ದ ಸಿಗರೇಟು, ತಿಂಡಿ ತಿನಿಸುಗಳು ಮತ್ತು ಹಣ್ಣುಗಳನ್ನು ಅಮ್ಮ ಜೋಡಿಸುವಾಗ ಅಪ್ಪ ಬಹಳಷ್ಟು ಪ್ರೀತಿಸಿದ್ದ ಅವರ ತೋಟದತ್ತ ಕಣ್ಣು ಹಾಯಿಸಿದೆ.

ಈಗ ಬೇರೆಯವರ ಸ್ವತ್ತಾಗಿರುವ ಆ ತೋಟದ ಹಲವಷ್ಟು ಮಾವಿನಮರಗಳನ್ನು ಕಡಿದು ಹಾಕಲಾಗಿದೆ; ತೆಂಗಿನ ಮರಗಳು ಬರಡಾಗಿವೆ, ಅಡಕೆ ಮರಗಳಂತೂ ಬಿಸಿಲಿನಲ್ಲಿ ಸುಟ್ಟು ಹೋಗಿವೆ. ಯಾವ ಮರಗಳನ್ನು ಅಪ್ಪ ಪ್ರೀತಿಯಿಂದ ರಕ್ಷಿಸಿ, ಪೋಷಿಸಿ ಆನಂದ ಪಡುತ್ತಿದ್ದರೋ, ಅವುಗಳ ರಂಬೆಗಳನ್ನು ಕತ್ತರಿಸಿ ಬುಡ ದಲ್ಲಿ ಶೇಖರಿಸಿಟ್ಟಿದ್ದಾರೆ. ಅಳಿದುಳಿದ ಮರಗಳ ನಡುವೆಯಲ್ಲಿ ಸೈಟುಗಳನ್ನು ವಿಭಜಿಸುವ ಕಲ್ಲುಗಳನ್ನು ನೆಟ್ಟಿದ್ದಾರೆ.

ಇದನ್ನೆಲ್ಲ ಕಂಡು ದುಃಖ ಉಮ್ಮಳಿಸಿ ಬಂತು. ಅಪ್ಪ ಪ್ರೀತಿಸಿ ಬೆಳೆಸಿದ್ದ ತೋಟದಲ್ಲೇ ಅವರು ಇವತ್ತು ಪರದೇಶಿಯಾಗಿದ್ದಾರೆ. ವರ್ಷಪೂರ್ತಿ ತಮ್ಮ ಚಿಗುರೆಲೆ, ಹೂ, ಹಣ್ಣು, ಸುಗಂಧದಿಂದ ಅಪ್ಪನಲ್ಲಿ ಜೀವನೋತ್ಸಾಹ ವನ್ನು ಚಿಮ್ಮಿಸುತ್ತಿದ್ದ ಮರಗಳು ಈಗ ನಾಶವಾಗಿದೆ, ನಾಶದ ಅಂಚಿನಲ್ಲಿ ನಿಂತಿವೆ.

ಅಪ್ಪ ನಮ್ಮನ್ನಗಲಿ ಇದೇ ಜನವರಿ 25ಕ್ಕೆ ಕೇವಲ ಏಳು ವರ್ಷಗಳಾಗಿವೆ. ಅವರ ತೋಟ ಬೇರೆಯವರ ಪಾಲಾಗಿ ಎರಡೇ ಎರಡು ವರ್ಷಗಳಾಗಿವೆ. ಸುಮಾರು ಮೂವತ್ತು ವರ್ಷಗಳ ಕಾಲ ಅಪ್ಪ ರಕ್ಷಿಸಿದ್ದ, ಬೆಳೆಸಿದ್ದ, ಪೋಷಿಸಿದ್ದ ಮರಗಳ ಕತೆ ಈ ಎರಡು ವರ್ಷಗಳಲ್ಲಿ ಅಂತ್ಯಗೊಂಡಿದೆ.

ಯಾವುದೇ ಒಂದನ್ನು ಕಟ್ಟಲು ಬೇಕಿರುವ ಶ್ರಮ ಮತ್ತು ಅದನ್ನು ಬೆಳೆಸಲು ಅಗತ್ಯವಾಗಿರುವ ಕಾಳಜಿಗೆ ಇನ್ನೊಮ್ಮೆ ಅಪ್ಪನ ತೋಟ ಉದಾಹರಣೆಯಾಗಿತ್ತು. ಆದರೆ ಒಂದು ಕನಸ್ಸನ್ನು ಭಗ್ನಗೊಳಿಸಲು, ಅದನ್ನು ನಿರ್ನಾಮ ಮಾಡಲು ಯಾವ ಶ್ರಮ ಮತ್ತು ಕಾಳಜಿಯೂ ಬೇಕಿಲ್ಲ ಎಂಬುದಕ್ಕೂ ಅಪ್ಪನ ತೋಟವೇ ಇವತ್ತು ಉದಾಹರಣೆ ಆಗಿರುವುದು ಒಂದು ದುರಂತ.

ಇದನ್ನು ಯಾವುದೇ ವೈಯಕ್ತಿಕ ಸಿಟ್ಟಿನಿಂದ ಅಥವಾ ನೋವಿನಿಂದ ಹೇಳುತ್ತಿಲ್ಲ, ಬದಲಾಗಿ ಅಪ್ಪನ ತೋಟವನ್ನು ಮತ್ತು ನಮ್ಮ ಸಮಾಜದಲ್ಲಿನ ಆಶಯಗಳಿಗೆ ರೂಪಕವಾಗಿ ಇರಿಸಿಕೊಂಡು ಹೇಳುತ್ತಿದ್ದೇನೆ. ಯಾಕೆಂದರ ಅಪ್ಪ ಹೇಗೆ ತಮ್ಮ ತೋಟದಲ್ಲಿನ ಪ್ರತಿ ಮರವನ್ನು ಸಂಪಾದಿಸುತ್ತಿದ್ದರೋ, ಅವುಗಳ ಬೆಳವಣಿಗೆಯನ್ನು ಸಂಭ್ರಮಿಸುತ್ತಿದ್ದರೋ, ಹಾಗೆಯೇ ಈ ನಮ್ಮ ರಾಜ್ಯದಲ್ಲಿ ಜಾತ್ಯತೀತತೆ, ದಲಿತರ ಅಭಿವೃದ್ಧಿ, ಮಹಿಳೆಯರಿಗೆ ಸಮಾನತೆ, ಸಾಮಾಜಿಕ ಶಾಂತಿ, ಸಾಂಸ್ಕೃತಿಕ ಬದ್ಧತೆಗಳು ಸೇರಿದಂತೆ ಹಲವಾರು ಜನಪರ ಸಿದ್ಧಾಂತಗಳನ್ನು ಜನರು ಮೈಗೂಡಿಸಿಕೊಳ್ಳುವಂತೆ ಮಾಡುತ್ತಿದ್ದರು.

ಆದರೆ ಇವತ್ತು ಈ ರಾಜ್ಯದಲ್ಲಿ ಏನಾಗುತ್ತದೆ ಎಂಬುದು ಜಾಣ-ಜಾಣೆಯರಿಗೆ ಚೆನ್ನಾಗಿ ಗೊತ್ತಿರುವುದರಿಂದ ಅವುಗಳನ್ನು ಇಲ್ಲಿ ಮತ್ತೆ ಪ್ರಸ್ತಾಪಿಸುವ ಅಗತ್ಯವಿಲ್ಲ ಎಂದು ಕೊಂಡಿದ್ದೇನೆ.

ಅಪ್ಪನ ಪ್ರೀತಿಯ ತೋಟದಂತೆ ಅವರ ಪ್ರೀತಿಯ ಈ ರಾಜ್ಯವೂ ಇವತ್ತು ವಿನಾಶದ ಅಂಚಿನಲ್ಲಿರುವುದನ್ನು ಎಲ್ಲಾ ಸೂಕ್ಷ್ಮಜ್ಞರು ಅರಿತು ಕ್ರಿಯಾಶೀಲರಾಗುತ್ತಾರೆಂದು ಬಯಸುತ್ತೇನೆ.

ಅವತ್ತು ತೋಟದಿಂದ ಹೊರಡುವಾಗ ಇಶಾಳಿಗೆ "ಟಾಟಾ ಹೇಳು" ಅಂದೆ. "ಯಾರಿಗೆ?" ಎಂದು ಇಶಾ ಸಮಾಧಿಯತ್ತ ನೋಡಿದಳು. ಆಕೆಯ ಪ್ರಕಾರ ಅವಳ ತಾತಾ ಆಕಾಶದಲ್ಲಿ ನಕ್ಷತ್ರವಾಗಿರುವುದರಿಂದ ಅವಳ ಪ್ರಶ್ನೆಗೆ ಹೇಗೆ ಉತ್ತರಿಸಬೇಕೆಂದು ನನಗೆ ತೋಚಲಿಲ್ಲ. ಆಗ ಬೇಬಿ "ಹೂಗಳಿಗೆ ಟಾಟಾ ಹೇಳು" ಅಂದಳು.

ಪುಟ್ಟ ಇಶಾ "ಟಾಟಾ ಹೂ, ಟಾಟಾ ಮಾವಿನ ಮರ, ಟಾಟಾ ಗಿಡ..." ಎಂದೆಲ್ಲ ಹೇಳುತ್ತಿದ್ದಂತೆ ಅಲ್ಲಿಂದ ಹೊರಟೆವು....

* * * * * *

ಶಿಲ್ಪಾ ಶೆಟ್ಟಿ ಎಂಬ ಹಿಂದಿ ಸಿನಿಮಾ ನಟಿ ಇವತ್ತು ಬ್ರಿಟನ್ ಮತ್ತು ಭಾರತದಲ್ಲಿ ಪ್ರತಿನಿತ್ಯದ ಸುದ್ದಿ ಆಗಿದ್ದಾಳೆ. ಶಿಲ್ಪಾಳನ್ನು ಇನ್ಯಾರೋ ಬೈದದ್ದು, ಅದಕ್ಕೆ ಈಕೆ ಅತ್ತದ್ದು ಭಾರತೀಯ ಮೂಲದ ಬ್ರಿಟಿಷರು ಕೆಂಡಾಮಂಡಲವಾಗಿದ್ದು, ಅಲ್ಲಿನ ರಾಜಕಾರಣಿಗಳು "ಶಿಲ್ಪಾಶೆಟ್ಟಿಯನ್ನು ಜನಾಂಗೀಯ ದ್ವೇಷಕ್ಕೆ ಗುರಿಪಡಿಸಿದ್ದು ಸರಿಯಲ್ಲ, ಇದು ಬ್ರಿಟನ್ನಿನ ಸಂಸ್ಕೃತಿ ಅಲ್ಲ" ಎಂದು ಖಂಡಿಸಿದ್ದೆಲ್ಲವೂ ಪತ್ರಿಕೆಗಳಲ್ಲಿ ವರದಿಯಾಗಿವೆ.



ಆದರೆ ಈ ವಿಷಯ ಭಾರತದ ಮತ್ತು ಬ್ರಿಟನ್ನಿನ ಪತ್ರಿಕೆಗಳಲ್ಲಿ ದಿನನಿತ್ಯ ರಾರಾಜಿಸುವಷ್ಟು ಮಹತ್ವದ್ದೇ? ಉದಾಹರಣೆಗೆ ಇವತ್ತಿನ ಬ್ರಿಟನ್ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ. ಮೈಕ್ ಮಾರ್ಕುಸೆ ಎಂಬ ಬ್ರಿಟಿಷ್ ಅಂಕಣಕಾರರು ಹೀಗೆ ಟೀಕೆ ಮಾಡಿದ್ದಾರೆ: "ಬ್ರಿಟನ್ನಿನ ಟಿವಿ ಚಾನೆಲ್‌ನಲ್ಲಿ ಶಿಲ್ಪಾಶೆಟ್ಟಿಗೆ ಅವಮಾನವಾಗಿದ್ದರಿಂದ ಜಗತ್ತಿನೆಲ್ಲೆಡೆ ಬ್ರಿಟನ್ನಿನ ಪ್ರತಿಷ್ಠೆಗೆ ಚ್ಯುತಿ ಬಂದಿತೆಂದು ರಾಜಕಾರಣಿಗಳು ಹಪಹಪಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಬದಲಾಗಿ ಬ್ರಿಟನ್ನಿನ ಪ್ರತಿಷ್ಠೆಗೆ ಕಳಂಕ ತಂದಿರುವುದು ಅಮೆರಿಕದೊಂದಿಗೆ ಸೇರಿ ಇರಾಕಿನ ಮೇಲೆ ದಾಳಿ ಇಟ್ಟದ್ದು, ಗ್ವಾಟನಾಮೋದಲ್ಲಿ ಮಾನವಹಕ್ಕುಗಳ ಉಲ್ಲಂಘನೆಯನ್ನು ಕಂಡು ಸುಮ್ಮನಿರುವುದು, ಲೆಬನಾನ್ ಮೇಲೆ ಸಮರ ಸಾರಿದ ಇಸ್ರೇಲ್ ಅನ್ನು ಬೆಂಬಲಿಸಿದ್ದು, ಅಮೆರಿಕದ ಕೀಲು ಗೊಂಬೆಯಂತೆ ಬ್ರಿಟಿಷ್ ಪ್ರಧಾನಿ ವರ್ತಿಸುತ್ತಿರುವುದು. ಇದ್ಯಾವುದ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಟೋನಿ ಬ್ಲೇರ್‌ರವರ ಸರ್ಕಾರ ಶಿಲ್ಪಾಶೆಟ್ಟಿ ಪ್ರಕರಣದ ಬಗ್ಗೆ ಕಂಗಾಲಾಗಿರುವುದು ನಿಜವಾಗಲೂ ದುರಾದೃಷ್ಟಕರ. ವಿಚಿತ್ರದ ಸಂಗತಿ ಯಾವುದೆಂದರೆ ಶಿಲ್ಪಾಶೆಟ್ಟಿ ಎಂಬ ನಟಿ ಜನಾಂಗೀಯ ದ್ವೇಷಕ್ಕೆ ಗುರಿಯಾಗಿದ್ದನ್ನು ಖಂಡಿಸುತ್ತಿರುವ ಬ್ರಿಟನ್ನಿನ ಸರ್ಕಾರ ಇವತ್ತು ಲಂಡನ್ ಬಾಂಬ್ ಬ್ಲಾಸ್ಟ್ ಪ್ರಕರಣದ ಆರೋಪಿಗಳನ್ನು-

ಕಂಡಹಾಗೆ



ಅವರು ಸೋಮಾಲಿಯಾ ಮತ್ತು ಇಥಿಯೋಪಿಯಾದವರಾಗಿದ್ದರೂ-ಭಾರತೀಯ ಉಪಖಂಡದವರಂತೆ ಚಿತ್ರಿಸುತ್ತಿದೆ."

ಹಾಗೆಯೇ 'ಡೈಲಿ ಮೇಲ್' ಎಂಬ ಪತ್ರಿಕೆ ಕೂಡ "ಇವತ್ತು ನಮ್ಮ ಜೈಲುಗಳು ತುಂಬ ತುಳುಕುತ್ತಿವೆ, ಆರೋಗ್ಯ ಸೇವೆ ಸಂಕಷ್ಟದಲ್ಲಿದೆ, ಹೆಚ್ಚು ಸೈನಿಕರು ಇರಾಕಿನಲ್ಲಿ ಸಾಯುತ್ತಿದ್ದಾರೆ, ಹಣದುಬ್ಬರ ಹೆಚ್ಚಾಗಿದೆ... ಆದರೆ ನಮ್ಮ ನಾಯಕರ ಗಮನ ಕೇಂದ್ರೀಕೃತವಾಗಿರುವುದು ಬಿಗ್ ಬ್ರದರ್ ಕಾರ್ಯಕ್ರಮದಲ್ಲಿ ನಡೆದ ಜನಾಂಗೀಯ ದ್ವೇಷದ ಪ್ರಕರಣ ಕುರಿತು" ಎಂದು ತನ್ನ ಮುಖಪುಟದಲ್ಲೇ ಲೇವಡಿ ಮಾಡಿದೆ.

ಇನ್ನು ಭಾರತದ ಇಂಗ್ಲಿಷ್ ಪತ್ರಿಕೆಗಳ ಮಾತು ಬಿಡಿ. ಇವತ್ತು ದೇಶದೆಲ್ಲೆಡೆ ಶೋಷಣೆ, ದೌರ್ಜನ್ಯ ಅಸಮಾನತೆ ತಾಂಡವವಾಡುತ್ತಿದ್ದರೂ, ಜನಾಂಗೀಯ ದ್ವೇಷಕ್ಕಿಂತಲೂ ಹೀನಾಯವಾದ ಜಾತಿ ವ್ಯವಸ್ಥೆಯಲ್ಲಿ ಪ್ರತಿ ದಿನ ದಲಿತರ ಮೇಲೆ ದಾಳಿಗಳು ನಡೆಯುತ್ತಿದ್ದರೂ, ನಮ್ಮ ಇಂಗ್ಲಿಷ್ ಮಾಧ್ಯಮಗಳಿಗೆ ಅವುಗಳ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ, ಅವರ ಪಾಲಿಗೆ ಶಿಲ್ಪಾಶೆಟ್ಟಿಯೇ ಹೀರೋಯಿನ್, ಆಕೆಗೆ ಆಗಿದ್ದು ದೇಶಕ್ಕೆ ಆದ ಅವಮಾನಕ್ಕೆ ಸಮಾನ. ಇದಕ್ಕಿಂತ ಅಜ್ಞಾನ ಬೇರೊಂದಿರಲಿಕ್ಕಿಲ್ಲ.

* * * * * *


ಹೌದು, ನಮ್ಮ ಜಾತಿ ವ್ಯವಸ್ಥೆಯಂತೆ ಜನಾಂಗೀಯ ದ್ವೇಷವೂ ಅಪಾಯಕಾರಿ; ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಲ್ಲಿನ ಅಸ್ಪೃಶ್ಯತೆ ಹೇಗೆ ಮನುಷ್ಯರ ಸ್ವಾಭಿಮಾನವನ್ನು ಕುಗ್ಗಿಸುತ್ತದೋ ಹಾಗೆ ಅನ್ಯ ಬಣ್ಣದವರ ಬಗ್ಗೆ ಬಿಳಿಯರಿಗಿರುವ ತುಚ್ಛ ಭಾವನೆ ಕೂಡ ಮನುಷ್ಯರ ಆತ್ಮಸ್ಥೈರ್ಯವನ್ನೇ ನಾಶ ಮಾಡಬಲ್ಲದು. ಇದನ್ನು ಹಲವು ಬಾರಿ ನಾನೂ ಅನುಭವಿಸಿದ್ದೇನೆ. ಅವುಗಳಲ್ಲಿ ಒಂದನ್ನು ಉದಾಹರಣೆಯಾಗಿ ನೀಡಬಹುದು. ಅವತ್ತು ಜರ್ಮನಿಯ ಬಾನ್ ನಗರದಲ್ಲಿದ್ದೆ. ನನ್ನ ಪತ್ರಿಕಾ ಕೆಲಸಕ್ಕೆ ಸಂಬಂಧಿಸಿದಂತೆ ಒಬ್ಬರ ಭೇಟಿಯನ್ನು ಮುಗಿಸಿ, ಮತ್ತೊಬ್ಬರನ್ನು ಭೇಟಿ ಆಗುವುದರ ನಡುವೆ ಮೂರು ಗಂಟೆಗಳ ಕಾಲ ಸಮಯವಿತ್ತು. ಹತ್ತಿರದಲ್ಲೇ ಇದ್ದ ಖ್ಯಾತ ಸಂಗೀತಗಾರ ಬೀಥೋವನ್ ಜನಿಸಿದ್ದ ಮನೆಗೆ ಭೇಟಿ ನೀಡಿ, ಪಕ್ಕದಲ್ಲಿದ್ದ ಹೋಟೆಲಿಗೆ ಹೋದೆ. ಆದರೆ ನನ್ನ ನಂತರ ಬಂದವರಿಗೆಲ್ಲ ಸರ್ವ್ ಮಾಡುತ್ತಿದ್ದ ವೈಟರ್‌ಗಳು ಎಷ್ಟೋ ಹೊತ್ತಾದರೂ ನಾನು ಕುಳಿತಿದ್ದ ಟೇಬಲ್ ಹತ್ತಿರ ಬರಲೇ ಇಲ್ಲ, ಇದನ್ನು ಸ್ವಲ್ಪ ಹೊತ್ತು ಗಮನಿಸಿದ ನಾನು ಜೋರಾಗಿಯೇ ವೈಟರ್ ಒಬ್ಬನನ್ನು ಕರೆದೆ. ಮುಖ ಸಿಂಡರಿಸಿಕೊಂಡು ಬಂದ ಆತನಿಗೆ ಕಾಫಿ ಬೇಕೆಂದು ಹೇಳಿದೆ. ಅದು ತಣ್ಣಗಾದ ನಂತರ ಆತ ನನ್ನ ಟೇಬಲ್ ಮೇಲೆ ಕುಕ್ಕಿ ಹೋದ. ನಾನು ಕೋಪದಿಂದ ಕುದಿಯಲಾರಂಭಿಸಿದೆ. ಕೆಲಸದ ಮೇಲೆ ಜರ್ಮನಿಗೆ ಹೋಗಿದ್ದ ನನಗೆ ಚೂರುಪಾರು ಜರ್ಮನ್ ಭಾಷೆ ಗೊತ್ತಿತ್ತು, ಮಾತ್ರವಲ್ಲ ನಾನು ಏಕಾಂಗಿ ಆಗಿದ್ದೆ, ವಿಧಿ ಇಲ್ಲದೆ ನನಗಾದ ಅವಮಾನವನ್ನು ಸಹಿಸಿಕೊಳ್ಳಬೇಕಾಗಿತ್ತು, ಹಾಗೆಯೇ ಇಟಲಿಯಲ್ಲೂ ನಡೆದಿತ್ತು, ನಾನು ಊಟ ಮಾಡುತ್ತಿದ್ದ ಹೋಟೆಲ್‌ಗೆ ಬಂದ ಹಲವು ಬಿಳಿಯ ಪುಂಡರು ಕರಿಯವಳಾಗಿದ್ದ ನನ್ನ ಬಗ್ಗೆ ಅದೇನೇನೋ ಜೋರಾಗಿ ಮಾತನಾಡಲಾರಂಭಿಸಿದರು. ಅವರು ಏನು ಹೇಳುತ್ತಿದ್ದಾರೆಂದು ಗೊತ್ತಾಗದೆ ನಾನು ಸುಮ್ಮನೆ ನನ್ನ ಬಳಿ ಇದ್ದ ಪುಸ್ತಕವನ್ನು ಓದುತ್ತಾ ಕೂತಿದ್ದೆ. ಸ್ವಲ್ಪ ಹೊತ್ತಿನ ನಂತರ ಅವರ ಉಪಟಳ ಎಷ್ಟಾಯಿತೆಂದರೆ ಹೋಟೆಲ್‌ನಲ್ಲಿದ್ದ ಇತರರು ಮುಜುಗರ ಅನುಭವಿಸಲಾರಂಭಿಸಿದರು. ಕೊನೆಗೆ ಹಿರಿಯ ಪುರುಷರೊಬ್ಬರು ಅವರನ್ನೆಲ್ಲ ಗದರಿಸಿ, ಇಂಗ್ಲಿಷ್ ಪುಸ್ತಕವನ್ನು ಓದುತ್ತಿದ್ದ ನನ್ನ ಬಳಿ ಬಂದು ತಮಗೆ ಗೊತ್ತಿದ್ದ ಹಲವು ಇಂಗ್ಲಿಷ್ ಪದಗಳನ್ನು ಉಪಯೋಗಿಸಿ, ``I am sorry. ನಿಮಗೆ ಹೀಗಾಗಬಾರದಿತ್ತು, ಅವರು ಮಾತನಾಡುತ್ತಿರುವುದು ನನಗೆ ಹೇಸಿಗೆ ತರುತ್ತಿದೆ. ನೀವು ಇಲ್ಲಿಂದ ಹೊರಟರೆ ಅವರು ಸುಮ್ಮನಾಗಬಹುದು" ಎಂದರು. ಆಗ ಅಲ್ಲಿಂದಲೂ ಅಸಹಾಯಕಳಾಗಿ ಹೊರಟೆ.

ಇನ್ನೊಂದು ಪುಟ್ಟ ಪ್ರಸಂಗವನ್ನು ಹೇಳಿ ಇದನ್ನು ಮುಗಿಸುತ್ತೇನೆ. ಅದೇ ಜರ್ಮನಿಯ ಬರ್ಲಿನ್ ನಗರದಲ್ಲಿ ನನ್ನ ಸ್ನೇಹಿತೆ ಇದ್ದ ಮನೆಗಾಗಿ ಹುಡುಕುತ್ತಿದ್ದೆ. ಅತಿಯಾದ ಚಳಿ, ಮೈಮೂಳೆಯನ್ನೇ ಕೊರೆಯುತ್ತಿದ್ದ ತಣ್ಣನೆಯ ಗಾಳಿ, ಬೆನ್ನ ಮೇಲೊಂದು ಭಾರವಾದ ರಕ್‌ಸ್ಯಾಕ್.... ಮನೆ ಹುಡುಕುತ್ತಾ ಸುಸ್ತಾಗಿತ್ತು. ಆಗ ಒಬ್ಬ ಜರ್ಮನ್ ತನ್ನ ಕಾರ್ ಹತ್ತಲು ಬಂದರು. ಅವರಿಗೆ ನನ್ನ ಕೈಯಲ್ಲಿದ್ದ ಅಡ್ರೆಸ್ ಚೀಟಿ ತೋರಿಸಿ, "ಈ ಮನೆ ಎಲ್ಲಿರಬಹುದು?" ಎಂದು ಕೇಳಿದೆ. ಕೂಡಲೆ ತನ್ನ ಕಾರ್ ಬಾಗಿಲನ್ನು ಮುಚ್ಚಿದ ಆತ, ನನ್ನ ಬೆನ್ನ ಮೇಲಿದ್ದ ರಕ್‌ಸ್ಯಾಕನ್ನು ಬಲವಂತವಾಗಿ ಕಿತ್ತುಕೊಂಡು ಓಡಲಾರಂಭಿಸಿದ. ಅಯ್ಯೋ ಇದೇನಾಗುತ್ತಿದೆ ಎಂದು ಗಾಬರಿ ಆದ ನಾನು ಆತನ ಹಿಂದೆ ಓಡಲಾರಂಭಿಸಿದೆ. ಕೂಗೋಣ ಅಂದರೆ ನಮ್ಮಿಬ್ಬರ ಹೊರತಾಗಿ ಇಡೀ ರಸ್ತೆಯಲ್ಲಿ ಬೇರೆ ಯಾರೂ ಇರಲಿಲ್ಲ. ಆಗೀಗ ಜರ್ಮನ್ ಭಾಷೆಯಲ್ಲಿ ಅದೇನನ್ನೋ ಹೇಳುತ್ತಾ ಮುಂದೆ ಓಡುತ್ತಿದ್ದ ಆ ಮನುಷ್ಯ ಹಲವು ನಿಮಿಷಗಳ ನಂತರ ಒಂದು ಕಟ್ಟಡದ ಮುಂದೆ ನಿಂತ. ನಾನು ಏದುಸಿರುಬಿಡುತ್ತಾ ಆತ ನಿಂತಿದ್ದಲ್ಲಿಗೆ ಬಂದೆ. ಆಗ ನನ್ನ ರಕ್‌ಸ್ಯಾಕನ್ನು ನನಗೆ ಹಿಂದಿರುಗಿಸಿದ ಆತ ನನ್ನ ಮುಖ ನೋಡಿ ನಕ್ಕು ಏನೋ ಅಂದ. ಅವನು ಹೇಳಿದ್ದು ನನಗೆ ಅರ್ಥವಾಗಲಿಲ್ಲ ಎಂದು ಗ್ರಹಿಸಿ ಕೈಸನ್ನೆ ಮಾಡುತ್ತಾ ನಿಧಾನವಾಗಿ ಮತ್ತೆ ಹೇಳಿದ. ಆತ ಹೇಳಿದ್ದು "ನಿನ್ನ ಕಣ್ಣುಗಳು ತುಂಬಾ ಸುಂದರವಾಗಿವೆ" ಎಂದು. ನಾನು 'ದಾಂಕ ಶೋನ್' (Thank You) ಅಂದಾಗ ಆತ "ಗುಟನ್ ಟಾಗ್" (Good day) ಎಂದು ಹೇಳಿ ಅದೆಲ್ಲಿಗೋ ಹೋಗುವ ಅವಸರದಲ್ಲಿದ್ದ ಆತ ತನ್ನ ಕಾರ್ ಇದ್ದಲ್ಲಿಗೆ ಮತ್ತೆ ಓಡಲಾರಂಭಿಸಿದ. ನಾನು ಅಚ್ಚರಿಯಿಂದ ಅವನತ್ತ ನೋಡುತ್ತ ನಿಂತಿದ್ದಾಗ ನನ್ನ ಸ್ನೇಹಿತೆ ತನ್ನ ಮನೆಯ ಬಾಗಿಲನ್ನು ತೆರೆದು ನನ್ನನ್ನು ಸ್ವಾಗತಿಸಿದಳು....


-ಗೌರಿ ಲಂಕೇಶ್

ಒಕ್ಕಲಿಗ-ಲಿಂಗಾಯತರ ರಾಜ್ಯಭಾರ

ಹಾಲಿ ಕೋ-ಜಾ ಸರ್ಕಾರದ 'ಮೇಲ್ಜಾತಿ ಬುದ್ಧಿ' ಕೊನೆಗೂ ಬಯಲಾಗಿದೆ. ಕಳೆದ ಒಂದು ವರ್ಷದಿಂದಲೂ 'ಇಂದು-ನಾಳೆ' ಎಂದು ಮುಂದೂಡುತ್ತಲೇ ಬರಲಾಗಿದ್ದ ಸಂಪುಟ ವಿಸ್ತರಣೆ ಈಗ ಆಗಿದೆ. ಸಚಿವರಾಗಿರುವವರ ಹೆಸರುಗಳೇ ಅವರಿಗೆ ಸಿನಿಯಾರಿಟಿ, ಜಾತಿ ಹೊರತು ಪಡಿಸಿ ಬೇರೇನೂ ಅರ್ಹತೆಗಳಿರಲಿಲ್ಲ ಎಂಬುದನ್ನು ಸಾರಿ ಹೇಳುತ್ತಿವೆ. ಇಷ್ಟರ ಮೇಲೆ ಈಗಿನ ಸರ್ಕಾರದಲ್ಲಿ ಅರ್ಹತೆಯ ಆಧಾರದಲ್ಲಿ ಯಾರು ತಾನೆ ಸಚಿವರಾಗಿದ್ದಾರೆ ಬಿಡಿ!



ಬರೀ ಜಾತಿ ಲೆಕ್ಕಾಚಾರದಲ್ಲಿ ಹೇಳಬೇಕೆಂದರೆ ಬ್ರಾಹ್ಮಣ-ಒಕ್ಕಲಿಗ-ಲಿಂಗಾಯತರ ಗುಂಪು ಶೇ. 70 ರಷ್ಟು ಸಚಿವ ಸ್ಥಾನ ಇಟ್ಟುಕೊಂಡಿದ್ದಾರೆ. ಬಹುಶಃ ಕರ್ನಾಟಕದ ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ರಾಜಕೀಯ ಅಧಿಕಾರವು ಇಷ್ಟು ದೊಡ್ಡ ಮಟ್ಟದಲ್ಲಿ ಮೇಲ್ಜಾತಿಗಳವರ ಕೈಲಿ ಕೇಂದ್ರೀಕೃತವಾಗಿರಲಿಲ್ಲ. ದೇವೇಗೌಡ, ಕುಮಾರಸ್ವಾಮಿ ಹಾಗೂ ಬಿಜೆಪಿಗಳಿಗೆ ಈ ಬಗ್ಗೆ ಸಂಕೋಚವೂ ಆದಂತಿಲ್ಲ. ಬದಲಾಗಿ ಇವರೆಲ್ಲರಿಗೂ ಇದ್ದ ಆತಂಕ ಆಯಾ ಪಕ್ಷದೊಳಗಿನ ಆಂತರಿಕ ಬಂಡಾಯ ಹಾಗೂ ಕಚ್ಚಾಟಗಳದ್ದು. ಬಿಜೆಪಿಯೊಳಗೆ ಯಡ್ಡಿ, ಅನಂತ್‌ಕುಮಾರ್ ಹಾಗೂ ಯತ್ನಾಳರ ಬಣಗಳ ಕಿತ್ತಾಟ ನಡೆದಿದ್ದರೆ ಇತ್ತ ಜೆಡಿಎಸ್ ಮೇಲೆ ಕುಮಾರಸ್ವಾಮಿಗೆ ಪೂರ್ತಿ ಹಿಡಿತ ಸಿಕ್ಕಿರಲಿಲ್ಲ. ಆದರೆ



ಈಗ ಗೆಲುವಿನ ನಗೆ.

ಇತ್ತ ಜೆಡಿಎಸ್‌ನಲ್ಲೂ ದೇವೇಗೌಡರು ಕುಮಾರಸ್ವಾಮಿ ಅಂಡ್ ಅದರ್ಸ್ ಮೇಲೆ ಹೇ… ಅಮಾನತ್ತು ಆಜ್ಞೆ ಹಿಂಪಡೆದು, ಸಿಂಧ್ಯಾರನ್ನು ಪಾರ್ಟಿಯಿಂದ ಹೊರಹಾಕಿದ್ದರು. ತಮ್ಮ ಇನ್ನೋರ್ವ ಸುಪುತ್ರ ರೇವಣ್ಣನನ್ನು ಹೆಚ್ಚು ತಲಹರಟೆ ಮಾಡದಂತೆ 'ಕೈ ಕಟ್ ಬಾಯ್ ಮುಚ್ಚ್' ಮಾಡಿಸಿದ್ದರು. ಎಂ.ಪಿ. ಪ್ರಕಾಶ್‌ರನ… ಹೇತ್ಲಾಂಡಿ ಎನಿಸಿಕೊಳ್ಳುವಷ್ಟರ ಮಟ್ಟಿಗೆ ಪಳಗಿಸಿದ್ದಾರೆ. ಒಟ್ಟಿನಲ್ಲಿ ಕುಮಾರಸ್ವಾಮಿಗೆ ಸ…

ಬಿಳಿದಾಳೆ ಈಶ


ಯಾರಿಂದಲೂ ವಿರೋಧ ಬರದಂತೆ ಎಲ್ಲಾ … ಮಾಡಲಾಗಿತ್ತು. ಇದೆಲ್ಲಾ ಸರಿ ಹೋಗಿದೆ ಎ… ಖಚಿತವಾದ ನಂತರವೇ ದಳ ಶಾಸಕರನ್ನು ಎತ್ತಾಕಿಕೊಂಡು ಪೂನಾದ ಅಂಬಿ ವ್ಯಾಲಿ ರೆಸಾ… ಹೋಗಿದ್ದು. ಅಲ್ಲಿ ಸಂಪುಟ ವಿಸ್ತರಣ… ಮುಂದೆ ಯಾರೂ ಅತೃಪ್ತಿ ತೋರ… 'ಸೂಕ್ತ ಕಾಣಿಕೆಗಳನ್ನು' ನೀಡಲಾಗಿದೆ… ಕಾಂಗ್ರೆಸ್‌ನವರು ನಡೆಸಿರುವ ಪತ್ತೇ… ಪ್ರಕಾರ ಪ್ರತಿ ದಳ ಶಾಸಕರಿಗೂ ತ… ಒಂದು ಕೋಟಿ ಹಾಗೂ ಎಂಎಲ್‌ಸಿಗಳಿಗೆ ತಲಾ 60 ಲಕ್ಷ … ಕಾಣಿಕೆ ನೀಡಿ ಕುಮಾರಸ… ನಾಯಕತ್ವಕ್ಕೆ ನಿಷ್ಠೆ ತೋರು… ಮಾಡಿಕೊಳ್ಳಲಾಯಿತಂತೆ. ಜೊತೆಗೆ ಈ ಶಾಸಕರು … ಎಲ್ಲಾ ಕೆಲಸಗಳನ್ನು ಮಾಡಿಕೊಡುವ ಭರವಸೆ… ನೀಡಲಾಗಿದೆ.

ಇಷ್ಟು ತಯಾರಿ ಮಾಡಿಕೊಂಡ ನಂತರವೇ… ಕುಮಾರಸ್ವಾಮಿ-ಯಡ್ಡಿ … ವಿಸ್ತರಣೆಗೆ ಕೈಹಾಕಿದ್ದು.

ಹಳಬರ ಖಾತೆ-…

ಹೊಸ ಸಚಿವರ ಪೈ… ಯಾರಿಗೂ ಆಡಳಿತ

ಮಹಿಮಾಗೆ ಗೇಟ್‌ಪಾಸ್




ಮೊನ್ನೆ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಯಾತಕ್ಕೋ ಮಹಿಮಾ ಪಟೇಲ್‌ಗೆ ಫೋನ್ ಮಾಡಿ "ಏನ್ರೀ ಮಹಿಮಾ, ನಿಮ್ಮಪ್ಪ ಎಂಥಾ ಸ್ವಾಭಿಮಾನಿಯಾಗಿದ್ರು, ನೀವ್ ನೋಡಿದ್ರೆ ದೆಹಲಿ ಪ್ರತಿನಿಧಿ ಅನ್ನೋ ಚಿಲ್ರೆ ಹುದ್ದೆ ಒಪ್ಕೊಂಡಿದ್ದೀರಲ್ಲ" ಎಂದು ಕಿಚಾಯಿಸಿದ್ದಾರೆ. ಅದಕ್ಕೆ ಈ ಮಹಿಮಾ "ಇಲ್ಲಾ ನಾನೇ ಬೇಕೂಂತಾ ಅದನ್ನು ಕೇಳಿದೆ' ಎಂದು ನುಣುಚಿಕೊಂಡಿದ್ದಾರೆ.

ರಾಜಕೀಯ ಗೊತ್ತಿರುವ ಎಳೆ ಮಗುವಿಗೂ ತಿಳಿದಿರುವ ಸತ್ಯ ಏನೆಂದರೆ 'ದೆಹಲಿ ಪ್ರತಿನಿಧಿ' ಎಂಬುದು ಕ್ಯಾಬಿನೆಟ್ ದರ್ಜೆಯದ್ದೇ ಆಗಿದ್ದರೂ ಅದು ಗುಮಾಸ್ತನ ಕೆಲಸದ ರೀತಿಯದ್ದು. ಈ ಹಿಂದೆ ಬಸವರಾಜ ರಾಯರೆಡ್ಡಿ ತರದವರು ಅಲ್ಲಿದ್ದು ಕಡಿದು ಕಟ್ಟೆ ಹಾಕಿದ್ದೂ ಅಷ್ಟರಲ್ಲೇ ಇತ್ತು. ಈಗ ಮಹಿಮಾರನ್ನು ದೆಹಲಿಗೆ ಸಾಗ ಹಾಕುತ್ತಿರುವುದು ದೇವೇಗೌಡ!

ಕುಮಾರಸ್ವಾಮಿ ಸುತ್ತಾಮುತ್ತಾ ಯಂಗ್ ಅಂಡ್ ಡೈನಾಮಿಕ್ ಲೀಡರ್‌ಗಳ್ಯಾರು ಕಾಣಿಸಿಕೊಳ್ಳಬಾರದು. ಕೇವಲ ಕುಮಾರಸ್ವಾಮಿ ಮಾತ್ರ ಲೀಡರ್ ಆಗಿ ಬಿಂಬಿತವಾಗಬೇಕೆಂಬುದು ಗೌಡರ ತಂತ್ರ. ಹಾಗಾಗಿ ಮಹಿಮಾಗೆ ಮಂತ್ರಿಗಿರಿ ನೀಡಿಬಿಟ್ಟರೆ ಲಿಂಗಾಯತ ಲೀಡರ್ ಆಗಿ ಬೆಳೆಯುತ್ತಾನೆ. ಬದಲಾಗಿ ದೆಹಲಿಗೆ ಸಾಗಹಾಕಿಬಿಟ್ಟರೆ ಆ ತಲೆನೋವಿರಲ್ಲ ಎಂಬುದೇ ಗೌಡರ ಲೆಕ್ಕಾಚಾರ. ಈ ಮಹಿಮಾನು ಅಂತಾ ಛಲ ಇರುವ ರಾಜಕಾರಣಿಯಲ್ಲ, ಧೈರ್ಯವಿರುವವನೇ ಆಗಿದ್ದರೆ ಹೀಗೆ ಗೌಡರಿಂದ ರಾಜ್ಯ ರಾಜಕಾರಣದಿಂದ ಆಚೆಗೆ ದಬ್ಬಿಸಿಕೊಂಡರೂ ಅದೇ ಮಹಾ ಪ್ರಸಾದವೆಂದು ಕಣ್ಣಿಗೊತ್ತಿಕೊಳ್ಳುತ್ತಿರಲ್ಲಿಲ್ಲ.

ಸಂಪುಟ ವಿಸ್ತರಣೆ ಖಾತೆ-ಕ್ಯಾತೆ


ಸಂಪುಟ ವಿಸ್ತರಣೆಯಾದ ಈ ಹಂತದಲ್ಲಿನ ಪರಿಸ್ಥಿತಿ ಏನಾಗಿದೆ ನೋಡಿ.



ಬಿಜೆಪಿಯಲ್ಲಿ ಅನಂತ್ ಬಣದವರನ್ನೆಲ್ಲಾ ಪೆದೆಬಡಿದಿರುವ ಯಡ್ಡಿ ಗುಂಪು ಸಚಿವ ಸ್ಥಾನ, ಜಿಲ್ಲಾ ಬಿಜೆಪಿ ಅಧ್ಯಕ್ಷರುಗಳ ಆಯ್ಕೆ, ನಿಗಮ ಮಂಡಳಿಗಳನ್ನು ಕೂಡ ತನಗೆ ಬೇಕಾದವರಿಗೆ ಮಂಜೂರು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಒಬ್ಬ ಶೋಭಾ ಕರಂದ್ಲಾಜೆಯನ್ನು ಮಂತ್ರಿ ಮಾಡಲಾಗದ ಅಸಹಾಯಕತೆ ಬಿಟ್ಟರೆ ಉಳಿದಂತೆ ಯಡ್ಡಿ ಮುಖದಲ್ಲಿ

"ಬಿಜೆಪಿಗಳು ಮನೆ ಮುರುಕರು" -ಬಂಗೇರ…

"ಪಕ್ಷ ಬೇಕಾದರೆ ಬಿಡುತ್ತೇನೆ, ಬಿಜೆಪಿ ಜತೆ ಕೈ ಜೋಡಿಸುವುದಿಲ್ಲ" ಎನ್ನುವ ಹಠಮಾರಿ ವಸಂತ ಬಂಗೇರಾ, ಜಿ.ಪಂ.ನಲ್ಲಿ ಬಿಜೆಪಿ ಜತೆ ಜೆಡಿಎಸ್ ಕೈ ಮಿಲಾಯಿಸುತ್ತಲೇ ತನ್ನ 9 ವರ್ಷದ ಜೆಡಿಎಸ್ ಜಿಲ್ಲಾಧ್ಯಕ್ಷ ಗಿರಿಗೆ ರಾಜೀನಾಮೆ ಬಿಸಾಕಿ ಬಂದಿದ್ದಾರೆ. ಇದು ಜೆಡಿಎಸ್ 'ಪಿತಾಮಹ' ದೇವೇಗೌಡರಿಗೇ ತೀವ್ರ ಮುಜುಗರಕ್ಕೆ ಈಡು ಮಾಡಿದ್ದು ದ.ಕ.ಜಿಲ್ಲೆಯ ಬಿಜೆಪಿಯ ಅರ್ಭಟದ ನಡುವೆ ಜೆಡಿಎಸ್‌ನ ಮೂರು ಕಾಸಿನ ಮಾನವೂ ಹರಾಜಾಗಿ ಹೋಗಿದೆ. ಇತ್ತ ಅದೇ ಹೊತ್ತಿಗೆ ಬಕಪಕ್ಷಿಗಳಂತೆ ಕಾಂಗ್ರೆಸ್‌ನ ಆಸ್ಕರ್-ಮೊಯ್ಲಿಯಂತಹ ಹಿರಿಯಣ್ಣಗಳು ಬಂಗೇರಾನನ್ನು ತಮ್ಮ ಪಕ್ಷದತ್ತ ಸೆಳೆಯಲು ಹಗ್ಗ ಹೊಸೆಯುತ್ತಿದ್ದು, ಜೆಡಿಎಸ್‌ನಲ್ಲಿ ತನಗಿನ್ನು ಉಳಿಗಾಲವಿಲ್ಲವೆಂದರಿತ ಬಂಗೇರಾನನ್ನು ರಮಾನಾಥ ರೈ ಜತೆ ಕಂಡವರಿದ್ದಾರೆ. ಬಂಗೇರಾ ಇತ್ತ ಬಂದರೆ ಬೆಳ್ತಂಗಡಿಯಲ್ಲಿ ತನಗೆ ಮಗ್ಗುಲ ಮುಳ್ಳಾಗಿರುವ ಗಂಗಾಧರ ಗೌಡರ ಆಟ ಫಿನಿಶ್ ಎಂಬುವುದು ರೈಯ ಲೆಕ್ಕಾಚಾರ. ಇದು ಗೊತ್ತಾದದ್ದೇ ಅಡ್ರಸ್ಸೆ ಇಲ್ಲದ ಗಂಗಾಧರ ಗೌಡ ದಡಬಡಿಸಿ ಎದ್ದು ತೊಡೆ ತಟ್ಟುತ್ತಿದ್ದಾರೆ. ಪತ್ರಕರ್ತರಿಗೆ ಸ್ನೇಹಕೂಟ, ಕಾರ್ಯಕರ್ತರ ರ್‍ಯಾಲಿ ಎಂದೆಲ್ಲಾ ಸುದ್ದಿ ಮಾಡುತ್ತಾ "ಬೆಳ್ತಂಗಡಿಯಲ್ಲಿ ಬಿಜೆಪಿಯನ್ನು ಬೆಳಸಿ ಕಾಂಗ್ರೆಸ್ ಅನ್ನು ಸೋಲಿಸಿದವರೇ ಬಂಗೇರಾ" ಎಂದು ಇತಿಹಾಸದ ಪುಟಗಳನ್ನು ತಿರುವುತ್ತಾ ಬಂಗೇರಾ ಕಾಂಗ್ರೆಸ್‌ಗೆ ಬರುವುದನ್ನು ನೋಡೇ ಬಿಡುತ್ತೇನೆ ಎನ್ನುವುದು ಗಂಗಾಧರ ಗೌಡರ ಸವಾಲು.



ತರ್ಕ-ಕುತರ್ಕಗಳೆನೇ ಇರಲಿ. ವಸಂತ ಬಂಗೇರಾ ಸ್ವಸಾಮರ್ಥ್ಯದಿಂದ ಪಕ್ಷ ಕಟ್ಟುವ ತಾಕತ್ತಿರುವ ಮಾಸ್ ಲೀಡರ್. ಚಡ್ಡಿಗಳ ಅಡುಂಬೋಲವಾಗಿರುವ ದ.ಕ.ದಲ್ಲಿ ಜೆಡಿಎಸ್ ತನ್ನ ಅಸ್ತಿತ್ವವನ್ನಾದರೂ ಉಳಿಸಿಕೊಂಡಿದೆ ಎಂದರೆ ಅದು ಬಂಗೇರಾರಂತಹ ದೈತ್ಯರ ತಾಕತ್ತಿನಿಂದ. ಆದ್ದರಿಂದಲೇ ವಸಂತ ಬಂಗೇರಾರ ಜೆಡಿಎಸ್ ನಿರ್ಗಮನ ಮತ್ತು ಕಾಂಗ್ರೆಸ್ ಆಗಮನದ ಸುದ್ದಿಗೆ ಜಿಲ್ಲಾ ರಾಜಕಾರಣದಲ್ಲಿ ಎಲ್ಲಿಲ್ಲದ ಮಹತ್ವ ಬಂದಿದ್ದು, ಈ ಸಂದರ್ಭದಲ್ಲಿ ವಸಂತಾ ಬಂಗೇರಾ ಪತ್ರಿಕೆ ಜತೆ ಮನ ಬಿಚ್ಚಿ ಮಾತಾಡಿದ್ದಾರೆ.

◆ ನೀವು ಜೆಡಿಎಸ್ ಜಿಲ್ಲಾಧ್ಯಕ್ಷತೆಗೆ ರಾಜೀನಾಮೆ ನೀಡಿದ ದಿನದಿಂದಲೇ ಕಾಂಗ್ರೆಸ್ ಸೇರುವ ಕುರಿತು ದಟ್ಟವಾದ ವದಂತಿಗಳಿವೆಯಲ್ಲಾ?

ಬಂಗೇರಾ: ನಾನು ಜೆಡಿಎಸ್ ಜಿಲ್ಲಾಧ್ಯಕ್ಷತೆಗ ರಾಜೀನಾಮೆ ಕೊಟ್ಟಿದ್ದೇನೆಯೋ ಹೊರತು, ಪಕ್ಷವನ್ನು ಬಿಟ್ಟಿಲ್ಲ. ಕಾಂಗ್ರೆಸ್‌ನ ಲೀಡರ್‌ಗಳು ತಮ್ಮ ಪಕ್ಷಕ್ಕೆ ಸೇರುವಂತೆ ಕೇಳಿದ್ದು, ಕೇಳುತ್ತಿರುವುದು ನಿಜ. ಹಾಗಂತ ಯಾವುದೇ ನಿರ್ಧಾರ ಈತನಕ ಮಾಡಿಲ್ಲ. ನನ್ನ ಪಕ್ಷದ ಕಾರ್ಯಕರ್ತರ, ಅಭಿಮಾನಿ ಬೆಂಬಲಿಗರ ಸಭೆ ಕರೆದು, ಅಲ್ಲಿನ ಒಮ್ಮತದ ತೀರ್ಮಾನದಂತೆ ಮುಂದಿನ ದಾರಿ ನೋಡುತ್ತೇನೆ.


◆ ಅಂದರೆ ನೀವು ಜೆಡಿಎಸ್‌ಗೆ ಗುಡ್‌ಬೈ ಹೇಳುತ್ತೀರೆಂದು ಅರ್ಥವೇ?

ಬಂಗೇರಾ: ನಾನು 1999ನೇ ಇಸವಿಯಿಂದ ಸತತವಾಗಿ ದ.ಕ.ಜಿಲ್ಲಾ ಜೆಡಿಎಸ್ ಅಧ್ಯಕ್ಷನಾಗಿರುವವನು. ಈ ಅವಧಿಯಲ್ಲಿ ನಾನೇ ಕೈಯಾರೆ ಖರ್ಚು ಮಾಡಿ ಪಕ್ಷದ ಸಂಘಟನೆಗೆ ಕೆಲಸ ಮಾಡಿದ್ದೇನೆ. ಈಗ ಅದೆಲ್ಲಾ ಗುಡ್ಡಕ್ಕೆ ಮಣ್ಣು ಹೊತ್ತಂತೆ ಆಗಿದೆ (ಮೌನ).

◆ ಯಾಕೆ ಹೀಗಾಯಿತು?

ಬಂಗೇರಾ: ಬಿಜೆಪಿ ಜತೆ ಸಖ್ಯ ಸಾಧ್ಯವಿಲ್ಲವೆಂದು ನಾನು ಖಡಾಖಂಡ… ನಿಂತದ್ದು ಇದಕ್ಕೆಲ್ಲಾ ಕಾರಣ. ನಾನು ಜಿ.ಪಂ.ನಲ್ಲಿ … ಹೊಂದಾಣಿಕೆ ಪ್ರಶ್ನೆ ಬಂದಾಗ ದೇವೇಗೌಡರಲ್ಲಿ ಮೊದ… ಮಾತು ಹೇಳಿದ್ದೆ. ಅಂತೆಯೇ ಇಲ್ಲಿ ಕಾಂಗ್ರೆಸ್-ಜೆಡಿಎಸ್… ಸಾಧ್ಯವಾಯಿತು. ಆ ನಂತರ ಚಾಮುಂಡೇಶ್ವರಿ ಉಪಚು… ಬಂತು. ಆಗ ಬಿಜೆಪಿ (ರಾಜ್ಯದಲ್ಲಿ) ಜೆಡಿಎಸ್‌ಗೆ 15 ಕಂ… ಗಳನ್ನು ಹಾಕಿತ್ತು, ಅದರಲ್ಲಿ ಒಂದನೆಯದ್ದು ಮಂಗಳೂರು … ಬಿಜೆಪಿ ಜತೆ ಸ್ಥಾನ ಹೊಂದಾಣಿಕೆ. ಆಗ ದೇವೇಗೌಡರು … ಕರೆದು ಈ ಮಾತು ಇಟ್ಟಾಗ ಬಿಜೆಪಿಯವರು ಚಾಮು… ಯಲ್ಲಿ ಖಂಡಿತಾ ನಮಗೆ ಓಟು ಹಾಕುವುದಿಲ್ಲ, ಚು… ಕಳೆಯಲಿ ಆಮೇಲೆ ನೋಡೋಣ ಅಂದೆ. ಎಲೆಕ್ಷನ್ ಕ… ಮತ್ತೆ ಒತ್ತಡ ಬಂತು. ನನಗೆ ಎಂಎಲ್‌ಸಿ, ಚೇರ್ಮನ್‌ಗಿರಿ … ಆಮಿಷ ನೀಡಿದ್ದರೂ ಬಿಜೆಪಿ ಜತೆ ಗುರುತಿಸಿಕೊಳ್ಳಲು… ತಯಾರಿರಲಿಲ್ಲ. ನನಗೆ ಬೇಡ, ಕೊಡುವುದಿದ್ದರೆ ಉಡು… ಳೂರು ಎರಡೂ ಜಿಲ್ಲೆಯ ತಲಾ ಒಬ್ಬರು ಕಾರ್ಯ… ನಿಗಮ-ಮಂಡಳಿಗಳಲ್ಲಿ ಪ್ರಾತಿನಿಧ್ಯ ಕೊಡಿ ಎಂದೆ. … ಯಾವುದನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. ಎಲ್ಲವೂ ಇಲ್ಲಿ ಬಿಜೆ… ವಾಗಿತ್ತು. ಮನಸ್ಸಿಗೆ ನೋವಾಯಿತು. ರಾಜಿನಾಮೆ ಕೊ… ರಾಜಕೀಯದಲ್ಲಿ ಮನಸ್ಸಿಲ್ಲವಾಗಿದೆ. ರಾಜಕೀಯ … ಅತಿಯಾದ ದುಡ್ಡಿರಬೇಕು. ಇಲ್ಲಾ ದುಡ್ಡು ಮಾಡಲು ಗೊ… ನನಗೆ ಎರಡೂ ಇಲ್ಲ. ನಿಮ್ಮಲ್ಲಿ ನಾನು ನಿಜ ಹೇಳಬೇಕೆ…

ಅನುಭವವಿರದಿದ್ದರೂ ಎಲ್ಲರೂ ಪೊಗದಸ್ತಾದ ಖಾತೆಗಳನ್ನೇ ನಿರೀಕ್ಷಿಸುತ್ತಿರುವುದು ಗುಟ್ಟೇನಲ್ಲ. ಬಿಜೆಪಿಯ ಸೊಗಡು ಶಿವಣ್ಣ ಈಗಾಗಲೇ ರೇಷ್ಮೆ ಖಾತೆ ಮಾತ್ರ ಬೇಡ ಎನ್ನುತ್ತಿದ್ದಾರೆ. ಮಹದೇವಪ್ರಸಾದ್‌ಗೆ ಕನ್ನಡ-ಸಂಸ್ಕೃತಿ ಇಲಾಖೆ ಹೋಗಿದೆ. ಉಳಿದಂತೆ




ಆಲಂಗೂರ್ ಶ್ರೀನಿವಾಸ್‌ಗೆ ಈಗ ಸಿಎಂ ಕೈಲಿರುವ ನಗರಾಭಿವೃದ್ಧಿ ಖಾತೆ ಕೊಟ್ಟು ಸಿಎಂ ಕಣ್ಗಾವಲಿನಲ್ಲೇ ಕೆಲಸ ಮಾಡಿಸುವ ಸಾಧ್ಯತೆ ಕಂಡುಬರುತ್ತಿವೆ. ಬಹುಶಃ ಹೊಸ ಸಚಿವರ ಖಾತೆ ಹಂಚಿಕೆ ಅಷ್ಟು ಸಮಸ್ಯೆಯಾಗಲಾರದು. ಆದರೆ ಸಂಪುಟ ವಿಸ್ತರಣೆ ಹಾಗೂ ಪುನರ್ರಚನೆ ನೆಪದಲ್ಲೇ ಹಳೇ ಸಚಿವರ ಕೈಲಿರುವ ಕೆಲ ಪ್ರಮುಖ ಖಾತೆಗಳನ್ನು ಬದಲಾಯಿಸಲು ಕುಮಾರ್-ಯಡ್ಡಿ ಹೊರಟಿದ್ದಾರೆ.

ಖಾತೆ ಕ್ಯಾತೆಯಾಗುತ್ತಿರುವುದು ಈ ಕಾರಣಕ್ಕೇನೆ.



ಸಚಿವ ಜಗದೀಶ್ ಶೆಟ್ಟರ್‌ಗೆ ಕಂದಾಯ ಖಾತೆಯ ಬದಲಾಗಿ ಬೃಹತ್ ಕೈಗಾರಿಕಾ ಖಾತೆ ಕೊಡ್ತೀವಿ. ಕಂದಾಯ ಕಟ್ಟಾ ನಾಯ್ಡುಗೆ ಬಿಟ್ಟು ಕೊಡಿ ಎಂದು ಕ್ಯಾತೆ ತೆಗೆಯಲಾಗಿದೆ. ಇದಕ್ಕೆ ಶೆಟ್ಟರ್ ಒಪ್ಪಿಲ್ಲ. ಈಗ ಈಶ್ವರಪ್ಪ ಹಾಗೂ ಅಳಿಯ ನಿರ್ಮಲ್ ಕುಮಾರ್‌ನನ್ನು ತಂಪು ಮಾಡುತ್ತಿರುವ ಬೃಹತ್ ನೀರಾವರಿ ಖಾತೆ ಮೇಲೆ ಯಡ್ಡಿ ಕಣ್ಣು ಬಿದ್ದಿದೆ. ಯಡ್ಡಿಗೆ ತಮ್ಮ ಕೈಲಿರುವ ಅಬಕಾರಿಯನ್ನು ಈಶ್ವರಪ್ಪನಿಗೆ ದಾಟಿಸಿ ಆತನ ಕೈಲಿರುವ ನೀರಾವರಿ ಕಿತ್ತುಕೊಳ್ಳುವ ಆಸೆ.

ಇದೂ ಈಶ್ವರಪ್ಪನ ವಿರೋಧಕ್ಕೆ ಕುತ್ತಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಒಂದು ದುಡ್ಡು. ಈಶ್ವರಪ್ಪ ಜಲ ಸಂಪನ್ಮೂಲ ಸಚಿವನಾದ ಮೇಲೆ ಮಂಜೂರಾಗಿರುವ ಕೆಲವು ಬೃಹತ್ ನೀರಾವರಿ ಯೋಜನೆಗಳ ಕಾಂಟ್ರಾಕ್ಟುಗಳನ್ನು ಅವರ ಅಳಿಯ ನಿರ್ಮಲ್ ಕುಮಾರ್ ಗಿಟ್ಟಿಸಿದ್ದಾನೆ. ನೆರೆಯ ಗೋವಾ ರಾಜ್ಯದೊಂದಿಗೆ ಕಳಸಾ ಬಂಡೂರಿ ನಾಲಾ ಯೋಜನೆಯ ವಿವಾದವೆದ್ದಾಗ,



ರಾಜ್ಯ ಸರ್ಕಾರ ಏಕಾಏಕಿ ಇನ್ನೂರು ಕೋಟಿ ಹಣ ರಿಲೀಸ್ ಮಾಡಿ ಈ ಯೋಜನೆ ಮಾಡೇ ತೀರುವುದಾಗಿ ಪ್ರಕಟಿಸಿತ್ತು. ಅದೇ ರೀತಿ ಭದ್ರಾ ಮೇಲ್ದಂಡೆ ಯೋಜನೆಗೂ ನೂರಾರು ಕೋಟಿ ಹಣ ನಿಗಧಿ ಮಾಡಲಾಗಿದೆ. ರೈತರಿಗೆ ಇದರಿಂದ ಎಷ್ಟು ಲಾಭವಾಗುತ್ತದೋ ಇಲ್ಲವೋ ಆದರೆ ಇವುಗಳ ಗುತ್ತಿಗೆಗಳಲ್ಲೆಲ್ಲಾ ನಿರ್ಮಲ್ ಕುಮಾರ್ ಭಾರಿ ಡೀಲ್‌ಗಳನ್ನು ಕುದುರಿಸಿಕೊಂಡಿದ್ದಾನೆ. ಹೀಗಿರುವಾಗ ಈಶ್ವರಪ್ಪ ಈಗ ಆ ಖಾತೆ ಕಳೆದುಕೊಂಡರೆ ಡೀಲ್ ಪೂರ್ತಿಯಾಗಲು ಹೇಗೆ ಸಾಧ್ಯ!

ಹಾಗಾಗಿ ಏನೇ ಆದರೂ ನೀರಾವರಿ ಬಿಡಲ್ಲ ಎಂದು ಈಶ್ವರಪ್ಪ ಪಟ್ಟು ಹಿಡಿದಿದ್ದಾರೆ.

ಶೋಭಾ ಕರಂದ್ಲಾಜೆಗೆ ಮಂತ್ರಿಗಿರಿ ಕೊಡಬಾರದು ಎಂದು ಈಶ್ವರಪ್ಪ ಹೇಳಿಕೆ ನೀಡಿದ್ದೂ ಕೂಡ ಯಡ್ಡಿಗೆ ಕೋಪ ತರಿಸಿ ಹೀಗೆ ಕಿರುಕುಳ ನೀಡುತ್ತಿದ್ದಾರೆ.

ಈ ಖಾತೆಗಳ ಕ್ಯಾತೆ ಸದ್ಯಕ್ಕೆ ಬಗೆಹರಿಯುವಂತೆ ಕಾಣುತ್ತಿಲ್ಲ. ಒಟ್ಟಿನಲ್ಲಿ ಹೊಸ ಸಚಿವರಿಗೆ ಅಷ್ಟೇನೂ ಮಹತ್ವವಿರದ ಖಾತೆಗಳಷ್ಟೇ ಸಿಗುವಂತೆ ಕಾಣುತ್ತಿದೆ. ●

ಯಡ್ಡಿ ಸಿಎಂ ಆದಾಗ ಶೋಭಾಗೆ ಛಾನ್ಸ್

ಈ ಸರ್ಕಾರದಲ್ಲಿ ಮಹಿಳೆಯರಿಗೆ ಒಂದೂ ಸ್ಥಾನವನ್ನು ನೀಡದ ಬಗ್ಗೆ ಬೇಸರವಾಗದಿರುವುದು ಶೋಭಾ ಕರಂದ್ಲಾಜೆಗೆ ಮಾತ್ರ.

ಸಚಿವ ಸ್ಥಾನ ಪಡೆಯಲು ಶೋಭಾಗೆ ಅಡ್ಡಿಯಾಗಿದ್ದ ಶಕುಂತಲಾ ಶೆಟ್ಟಿಗೆ ಈಗ ನಿಗಮದ ಅಧ್ಯಕ್ಷಗಿರಿ ಕೊಡಲಾಗುತ್ತಿದೆ. ಅಲ್ಲಿಗೆ ಶಕುಂತಲಾಗೆ ಮಂತ್ರಿಯಾಗುವ ಅವಕಾಶ ತಪ್ಪಿತೆಂದೇ ಅರ್ಥ. ಹೇಗೂ ಇನ್ನೆಂಟು ತಿಂಗಳಲ್ಲಿ ಯಡ್ಡಿ ಸಿಎಂ ಆಗುತ್ತಾರೆ. ಮಹಿಳಾ ಕೋಟಾದಡಿ ಶೋಭಾರನ್ನು ಮಂತ್ರಿ ಮಾಡುವುದು ಸುಲಭ ಎಂಬುದು ಶೋಭಾ-ಯಡ್ಡಿ ಇಬ್ಬರ ಲೆಕ್ಕಾಚಾರ.

ಹೊಲಸು ರಾಜಕೀಯದಿಂದ ನನಗೆ ಜಿಗುಪ್ಸೆಯಾಗಿದೆ. ನಾನು ರಾಜಕೀಯದಿಂದ ನಿವೃತ್ತಿ ಬಯಸಿದ್ದೇನೆ.

♦ ನೀವು ಬಿಜೆಪಿ ಶಾಸಕರಾಗಿ ರಾಜಕಾರಣ ಕಂಡವರು ಹೌದಲ್ಲ?

ಬಂಗೇರಾ: ಇಲ್ಲಿ ನೀವು ತಪ್ಪು ತಿಳಿದಿದ್ದೀರಿ. ನಾನು ಮೂಲತಃ ನಿಜಲಿಂಗಪ್ಪರ ಕಾಲದ ಹಳೆಯ ಕಾಂಗ್ರೆಸ್ಸಿಗ. ಬೆಳ್ತಂಗಡಿಯಲ್ಲಿ 1982ರಲ್ಲಿ ನಾನು ಪ್ರಥಮ ಬಾರಿ ಚುನಾವಣೆಗೆ ಸ್ಪರ್ಧಿಸಿದಾಗ ಇಲ್ಲಿ ಕಾಂಗ್ರೆಸ್‌ಗೆ ಯಾರೂ ಎದುರಿರಲಿಲ್ಲ, ಅವರು ಆಡಿದ್ದೇ ಆಟ ಎನ್ನುವ ಪರಿಸ್ಥಿತಿಯಿತ್ತು, ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಹೊರತಾಗಿ ಜನಸಂಘ-ಜನತಾಪಕ್ಷ ಎಲ್ಲಾ ಸೇರಿ ಕಾಂಗ್ರೆಸ್‌ನ್ನು ಸೋಲಿಸಲು ಪಕ್ಷೇತರ ಅಭ್ಯರ್ಥಿಯಾಗಿ ನನ್ನನ್ನು ಕಣಕ್ಕಿಳಿಸಿದರು. ಬೆಳ್ತಂಗಡಿ 44 ಮಸೀದಿಗಳ ಅಧ್ಯಕ್ಷ ಬೆಂದ್ರಾಳ ಇಬ್ರಾಹಿಂ, ರೋನಾಲ್ಡ್‌ನಂತಹ ನನ್ನ ಸ್ನೇಹಿತರ ಒತ್ತಾಸೆಯಿಂದ ಅದು ಸಾಧ್ಯವಾಗಿತ್ತು, ಆದರೆ ಜನಸಂಘದವರು ಈ ಒಂದು ಪರಿಸ್ಥಿತಿಯ ಲಾಭ ಪಡೆದರು. ಅವರದೇ ಚಿಹ್ನೆಯಡಿ ನಾನು ಸ್ಪರ್ಧಿಸುವಂತೆ ಮಾಡಿದರು. ನಾನು ಗೆದ್ದೆ. ಮತ್ತೆ ಮರು ಚುನಾವಣೆ ನಡೆದಾಗ ಸಂಪೂರ್ಣ ಬಿಜೆಪಿ ಹತೋಟಿ ಇದ್ದುದರಿಂದ ತಕ್ಷಣವೇ ಪಕ್ಷ ಬಿಡುವುದು ಸರಿಯಲ್ಲವೆಂದು ಎರಡನೇ ಬಾರಿಯೂ ಸ್ಪರ್ಧಿಸಿ ಗೆದ್ದೆ. ಮುಂದೆ ಜನತಾದಳ ಅಸ್ತಿತ್ವಕ್ಕೆ ಬಂದಾಗ ಅಲ್ಲಿಗೆ ಹೋದೆ.

♦ ಈ ನಡುವೆ ನೀವು ಬಂಗಾರಪ್ಪನವರ ಕೆಪಿಸಿ ಪಕ್ಷದೊಂದಿಗೆ ಜತೆ ಗುರುತಿಸಿಕೊಂಡಿದ್ದು?

ಬಂಗೇರಾ: ಅದೊಂದು ಆಕಸ್ಮಿಕ. ನಾನು ಅವರ ಜತೆ ಗುರುತಿಸಿಕೊಂಡದ್ದಲ್ಲ, ಅವರ ಜತೆ ನನ್ನನ್ನು ಗುರುತಿಸಿಕೊಂಡರು. ನನಗೆ ಬಂಗಾರಪ್ಪರಲ್ಲಿ ಮೊದಲೇ ಸಖ್ಯವಿತ್ತು, ನಾನಾಗ 'ಸಂಗಮಸಾಕ್ಷಿ' ಎಂಬ ತುಳು ಸಿನಿಮಾವನ್ನು ನಿರ್ಮಿಸಿದ್ದೆ, ಅದಕ್ಕೆ ಥಿಯೇಟರ್ ಹಿಡಿಯಲು ಬಂಗಾರಪ್ಪ ಮುಂದೆ ಬಂದರು. ಥಿಯೇಟರ್ ಕೊಡಿಸಿದ ಬಂಗಾರಪ್ಪ ಕೆಪಿಸಿ ಸೇರುವಂತೆ ಒತ್ತಾಯಿಸಿದರು. ನಾನು ಒಪ್ಪದ್ದಕ್ಕೆ ಒಂದೇ ವಾರಕ್ಕೆ ನನ್ನ ಸಿನಿಮಾ ಥಿಯೇಟರ್‌ನಿಂದ ಎತ್ತಂಗಡಿಯಾಗಿ ನೆಲಕಚ್ಚಿತು, ಅಷ್ಟೊತ್ತಿಗೆ ನಾನು ಕೆಪಿಸಿ ಸೇರಿದ್ದೇನೆಂದು ಪ್ರಚಾರ ಆಗಿ ಹೋಗಿತ್ತು.

♦ ಎಲ್ಲದಕ್ಕೂ ಕಾರಣ ನಿಮ್ಮ ಸಿಟ್ಟು. ಬಿಜೆಪಿ ಜತೆ ಅಂತಹ ಸಿಟ್ಟಿಗೆ ಏನು ಕಾರಣ?

ಬಂಗೇರಾ: ಪಕ್ಷ ವಿರುದ್ಧ ಸ್ವಂತ ತಮ್ಮನನ್ನೇ (ಶಾಸಕ ಪ್ರಭಾಕರ ಬಂಗೇರಾ) ಎತ್ತಿಕಟ್ಟಿ ರಾಜಕೀಯ ಮಾಡುವ ನೀಚರು. ನಾನು ಮತ್ತು ನನ್ನ ತಮ್ಮ ಬಿಜೆಪಿಯವರ ಹೊಲಸು ರಾಜಕೀಯದಿಂದ ಹಾವು-ಮುಂಗುಸಿ ಥರಾ ಆಗಿದ್ದೇವೆ. ಎರಡು ಕುಟುಂಬಗಳು ಒಡೆದಿವೆ. ನಾನು ಬರುವ ಸಭೆ-ಸಮಾರಂಭಗಳಿಗೆ ಆತ ಬರುವುದಿಲ್ಲ, ಅವನಿರುವಲ್ಲಿ ನಾನು ಹೋಗುವುದಿಲ್ಲ, ಇಂತಹ ಮನೆ ಮುರುಕರ ಜತೆ ಸೇರಿಕೊಂಡು ರಾಜಕೀಯ ಮಾಡುವ ಬದಲು ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ....

ರಫ್ ಅಂಡ್ ಟಫ್ ಖ್ಯಾತಿಯ ಬಂಗೇರಾ, ಎಂದು ಕೊಂಚ ಗರಂ ಆಗಿಯೇ ಮಾತು ಮುಗಿಸುತ್ತಾರೆ.

-ಸಂದರ್ಶನ: ಪ್ರಕಾಶ್ ಪಿಂಟೊ

ಹಾಸನಾಂಭೆಯ ಮಡಿಲಲ್ಲಿ

ಬಡ್ಡಿ ದಂಧೆಗೆ ವಂಶವೇ ಬಲಿ!

ಇಲ್ಲಿನ ಗಾಂಧಿಬಜಾರಿನ ನಲವತ್ತರ ಕೀರ್ತಿ ಎಂಬಾತ ತನ್ನ ತಂದೆ, ತಾಯಿ, ಪತ್ನಿ ಹಾಗೂ ಮೂರು ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆಗೆ ಶರಣಾಗಿ ನಗರದ ಭೀಭತ್ಸ ಇತಿಹಾಸಕ್ಕೆ ಮತ್ತೊಂದು ರುಜು ಮಾಡಿದ್ದಾನೆ. ಕೊಲೆ, ಆತ್ಮಹತ್ಯೆಗಳು ಅಪ್ಪ-ಮಕ್ಕಳ ದರ್ಬಾರಿನ ಹಾಸನ ಜಿಲ್ಲೆಗೆ ಹೊಸದೇನು ಅಲ್ಲ.

ಸಾಮೂಹಿಕವಾಗಿ ತುಂಬಿದ ಇಡೀ ಸಂಸಾರವನ್ನೇ ಸಾವಿನ ದವಡೆಗೆ ತಳ್ಳಿದ ಕೀರ್ತಿ, ಬಡವನ ಮಗನಲ್ಲ, ರೈತನಲ್ಲ, ಪರೀಕ್ಷೆಯಲ್ಲಿ ನಪಾಸಾದ ವಿದ್ಯಾರ್ಥಿಯಲ್ಲ, ಜೀವನವೆಂಬ ಪರೀಕ್ಷೆಯಲ್ಲಿ ಸೋತು ಹಾಸನದ ಬಡ್ಡಿ ವ್ಯವಹಾರದ ಸುಳಿಯಿಂದ ಹೊರಬರಲಾಗದೆ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಈತನೂ ಒಬ್ಬ!

ಕೀರ್ತಿ ತಾನೊಬ್ಬನೇ ಸತ್ತಿದ್ದರೆ ಯಾರೂ ಗಾಬರಿ ಆಗುತ್ತಿರಲಿಲ್ಲ, ಮನೆ ಮಂದಿಯನ್ನೆಲ್ಲಾ ಸಾವಿನ ಕೂಪಕ್ಕೆ ತಳ್ಳಿ, ಹಣದ ಅಮಲಿನಲ್ಲಿ ದಾರಿತಪ್ಪಿ ಜೀವನವನ್ನು ಒಂದು ಚೌಕಟ್ಟಿಗೆ ತಂದುಕೊಳ್ಳಲಾಗದೆ, ಆತ್ಮಹತ್ಯೆ ಮಾಡಿಕೊಂಡು ಮನಕಲಕುವ ಈ ಕೃತ್ಯಕ್ಕೆ ನಗರದ ಜನ ಗಾಬರಿಗೆ ಬಿದ್ದು ಮರುಗುತ್ತಿದ್ದಾರೆ.

ಹಾಸನದ ಶ್ರೀಮಂತರುಗಳಲ್ಲಿ ಒಬ್ಬರಾದ ಕೀರ್ತಿಯ ತಂದೆ ವಿಶ್ವನಾಥ ಗುಪ್ತಾ, ಹೇಗೆ ಅಳೆದು- ತೂಗಿದರೂ ದಶಕೋಟಿಗೇನು ಕಡಿಮೆ ಇಲ್ಲ, ವಿಶ್ವನಾಥ ಗುಪ್ತಾ ನಗರದಲ್ಲೊಂದು ಬಹುದೊಡ್ಡ ಕಾಂಪ್ಲೆಕ್ಸ್ ಹೊಂದಿದ್ದರು. ಬೆಂಗಳೂರಿನ ಟ್ರಿನಿಟಿ ಹಾಸ್ಪಿಟಲ್‌ಗೆ ಒಂದು ಕೋಟಿ ರೂಪಾಯಿ ಹೂಡಿದ್ದರು. ಅವರಿಗೆ ಉತ್ತಮ ವ್ಯವಹಾರಸ್ಥರೆಂಬ ಖ್ಯಾತಿ ಇತ್ತು.

ಅಪ್ಪ ಗುಪ್ತಾ ರೂಪಾಯಿಗೆ ರೂಪಾಯಿ ಸೇರಿಸಿ ಕೋಟಿ ಮಾಡಿದ್ದರೆ, ಮಗ ಕೀರ್ತಿ ಅಷ್ಟೇ ಆತುರವಾಗಿ ಕೋಟಿಯನ್ನು ರೂಪಾಯಿಯಂತೆ ಖರ್ಚು ಮಾಡಿ ತನ್ನ ಹೆತ್ತವರಿಗೆ, ಕೈಹಿಡಿದವಳಿಗೆ, ಸ್ವಂತ ಮಕ್ಕಳಿಗೆ ಆಪತ್ತಾಗಿ ಬಿಟ್ಟ.

ಅಷ್ಟೇನು ಒರಟನಲ್ಲದ ಕೀರ್ತಿ, ಅದೇಕೋ ಸಜ್ಜನರ ಸಹವಾಸ ಮಾಡಲಿಲ್ಲ, ಇದರ ಫಲ ಅಪ್ಪ ಕೂಡಿಟ್ಟ ಹಣವನ್ನು ಕರಗಿಸಲು ಇಸ್ಪೀಟಿನ ಎಲೆಗಳೊಂದಿಗೆ ಸರಸವಾಡುತ್ತಾ ಜೂಜಿನ ಶೋಕಿಗೆ ಬಿದ್ದ!

ಮನೆಯಿಂದ ಕಂತೆ-ಕಂತೆ ನೋಟುಗಳು ಸಿಗದಿದ್ದಾಗ, ಶ್ರೀಮಂತರ ಮಗನಲ್ಲವೇ ಯಾವ ಶ್ಯೂರಿಟಿಯೂ ಇಲ್ಲದೇ ಬಡ್ಡಿ ದಂಧೆಯವರಿಂದ ಸಾಲ ಮಾಡಿದ. ಎಷ್ಟೆಂದರೆ ಬರೋಬ್ಬರಿ ಒಂದು ಕೋಟಿಗೂ ಮೀರಿ. ಇದಕ್ಕೆ ಸಾಕ್ಷಿ ಎಂದರೆ ಕೀರ್ತಿ ಸಾಯುವ ಮೊದಲೇ ಬರೆದ ಡೆತ್‌ನೋಟ್‌ನಲ್ಲಿ ಸಾಲ ನೀಡಿದ ಬಡ್ಡಿ ದೊರೆಗಳ ಪಟ್ಟಿಯನ್ನು ಪ್ರಾಮಾಣಿಕವಾಗಿ ಬರೆದಿಟ್ಟಿರುವುದು!

ಇಸ್ಪೀಟಿನ ಜೂಜಿಗೆ ಬಿದ್ದ ತಪ್ಪಿಗೆ ಕಳೆದ ಒಂಭತ್ತು ತಿಂಗಳಲ್ಲಿ ಈ ಮಟ್ಟದ ಸಾಲ ಮಾಡಿ, ಬಡ್ಡಿಧಣಿಗಳ ಒತ್ತಡ ಹೆಚ್ಚಾದಾಗ ಪೇಚಿಗೆ ಸಿಲುಕಿದ ಕೀರ್ತಿ ಮಾನಸಿಕ ವ್ಯಾಕುಲತೆಗೆ ಒಳಗಾದ ಎಂಬುದನ್ನು ಡೆತ್‌ನೋಟು ಸಾರಿ ಹೇಳುತ್ತದೆ. ಮತ್ತು ಹತ್ತಿರದಿಂದ ಕೀರ್ತಿಯನ್ನು ಬಲ್ಲವರು ಅದಕ್ಕೆ ಹೌದೆನ್ನುತ್ತಾರೆ.

ಪರಿಹಾರ ಅಂತ ಭಾವಿಸಿದ್ದು ಕ್ಲೋರೋಫಾರ್ಮ್!

ಮಾನಸಿಕ ವ್ಯಾಕುಲತೆಗೆ ಒಳಗಾದ ಕೀರ್ತಿ ಮನೆ ಮಂದಿಯನ್ನೆಲ್ಲಾ ಸಾಯಿಸಿ, ತಾನೂ ಸಾಯಲು ಇದೇ ಸಮಸ್ಯೆಗೆ ಪರಿಹಾರ ಎಂದು ಭಾವಿಸಿ ಬಳಸಿದ್ದು ಕ್ಲೋರೋಫಾರ್ಮ್!

ಕಳೆದ ಜನವರಿ 25 ರ ಮುಂಜಾನೆ ಮೂರು ಗಂಟೆಯನ್ನು ತನ್ನ ಕೃತ್ಯಕ್ಕೆ ಮುಹೂರ್ತ ಮಾಡಿಕೊಂಡ ವನೇ ತಂದೆ, ತಾಯಿ, ಪತ್ನಿ ಮತ್ತು ಮೂವರು ಮುದ್ದಿನ ಮಕ್ಕಳಿಗೆ ಕ್ಲೋರೋಫಾರ್ಮ್ ನೀಡಿ, ಪ್ರಜ್ಞೆ ತಪ್ಪಿಸಿ ಎಲ್ಲರ ಕುತ್ತಿಗೆಗೂ ಹಗ್ಗಬಿಗಿದು ತಾನೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೀರ್ತಿ ಕ್ರೌರ್ಯದ ಪರಮಾವಧಿ ತಲುಪಿದ್ದ ಎಂಬುದಕ್ಕೆ, ತಾನೊಬ್ಬನೇ ಸಾಯದೇ ಮನೆ ಮಂದಿಯನ್ನೆಲ್ಲಾ ಸಾಯಿಸಿರುವುದೇ ಸಾಕ್ಷಿ! ಅದಕ್ಕೆ ಮೇಲ್ನೋಟಕ್ಕೆ ಕಾಣಸಿಗುವ ಪ್ರಬಲ ಕಾರಣ ಜಿಲ್ಲೆಯ ಬಡ್ಡಿ ಮಾಫಿಯಾ ಮತ್ತು ಅದರ ಒತ್ತಡದ ವರಸೆಗಳು!

ತಂದೆ ವಿಶ್ವನಾಥ್ ಗುಪ್ತಾ ಹಿಂದೊಮ್ಮೆ ಕೀರ್ತಿ ಮಾಡಿದ್ದ ಒಂದಷ್ಟು ಲಕ್ಷದ ಸಾಲಗಳನ್ನು ತೀರಿಸಿ, ಬುದ್ಧಿ ಹೇಳಿ ಜವಾಬ್ದಾರಿ ಬರಲಿ ಅಂತ 'ಕನ್ನಿಕಾ ಬಿಜಿನೆಸ್' ಮಾಡಿಕೊಟ್ಟರು. ಜವಾಬ್ದಾರಿ ನಿಭಾಯಿಸಿ ಗೊತ್ತಿಲ್ಲದ ಕೀರ್ತಿ ಅದನ್ನೂ ಜೂಜಿನ ಪಣಕ್ಕೆ ಒತ್ತೆ ಇಟ್ಟು ಕಳೆದುಕೊಂಡಿದ್ದ. ಕೈಚಾಚಿ ಸಾಲ ಕೊಟ್ಟವರೆಲ್ಲ ವಸೂಲಿಗೆ ಮುಂದಾದಾಗ ಕೀರ್ತಿ ಬೆಚ್ಚಿಬಿದ್ದ. ಸಾಲದ ಸಮಸ್ಯೆಗೆ ಕ್ಲೋರೋಫಾರ್ಮ್ ಅನ್ನು ಪರಿಹಾರವಾಗಿ ಆರಿಸಿಕೊಂಡ.

ಇಂಗ್ಲಿಷಿನಲ್ಲಿ ಡೆತ್‌ನೋಟ್!

ಸಾಯುವ ಮುನ್ನ ಕೀರ್ತಿ ಇಂಗ್ಲಿಷಿನಲ್ಲಿ ಬರೆದ ಡೆತ್‌ನೋಟ್‌ನಲ್ಲಿ ಸನ್ಮತಿ ಮೆಡಿಕಲ್ಸ್‌ನ ಸುನಿಲ್‌ಕುಮಾರ್, ಕೆ.ಪಿ. ಜ್ಯೂವೆಲರ್ಸ್‌ನ ಗಡ್ಡಾ ಕುಮಾರ, ಕೊಥಾರಿ ಫೈನಾನ್ಸ್‌ನ ವಿಮಲ್‌ಕುಮಾರ, ಕಂಟ್ರಾಕ್ಟರ್ ಅಸೋಸಿಯೇಷನ್ ಅಧ್ಯಕ್ಷ ಶಿವರಾಂ, ನಾರ್ವೆ ಹೋಟೆಲ್‌ನ ನಟರಾಜ್ ಎಂಬ ಪಂಚಪಾಂಡವರಂತ ಬಡ್ಡಿದೊರೆಗಳ ಹೆಸರನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ.

ಇವರಲ್ಲಿ ಪ್ರಮುಖವಾಗಿ ಗಡ್ಡಾ ಕುಮಾರನಿಗೊಂದು ಇತಿಹಾಸವೇ ಇದೆ. ನಗರದ ಬಡ್ಡಿ ಮತ್ತು ಮಟ್ಕಾ



ಮಾಫಿಯಾದಲ್ಲಿ ಇವನು ಎತ್ತಿದ ಕೈ. ಜೊತೆಗೆ ಇವನೇ ಇಡೀ ಜಿಲ್ಲೆಯ ಇಸ್ಪೀಟು ದೊರೆ! ಇವನೊಬ್ಬನಿಗೆ ಕೀರ್ತಿ 25 ಲಕ್ಷ ರೂ. ಸಾಲ ತೀರಿಸಬೇಕಿತ್ತು! ಗಡ್ಡಾ ಕುಮಾರನನ್ನು ಯಾವ ಕ್ಷಣದಲ್ಲಿ ಬೇಕಾದರೂ ಗಡಿಪಾರು ಮಾಡಬಹುದು. ಅಷ್ಟು ಕೇಸುಗಳು ಇವನ ವಿರುದ್ಧ ದಾಖಲಾಗಿವೆ. ಇವನನ್ನು ಬೆಳೆಸಿದ್ದು ಬೇರ್‍ಯಾರೂ ಅಲ್ಲ, ಆ ಕೀರ್ತಿ ಸಲ್ಲಬೇಕಾದದ್ದು ಗಡ್ಡಾ ಕುಮಾರನ ಮಾಮೂಲಿ ಮೇಯುವ ಪೊಲೀಸರಿಗೆ!

ಎಲ್ಲಿ ಬೇಕಾದಲ್ಲಿ ನಡೆಯುತ್ತಿದ್ದ ಜೂಜಾಟದ ಅಡ್ಡೆಗಳ ಅಪಾಯ ಅರಿತ ಅಡಿಷನಲ್ ಎಸ್ಪಿ ತಮ್ಮಯ್ಯ ಜೂಜಾಟಗಳಿಗೆ ತೆರೆ ಎಳೆದರಾದರೂ, ಅಕ್ಕಪಕ್ಕದ ತಾಲ್ಲೂಕುಗಳ ತೋಟಗಳಿಗೆ ಕುಮಾರ ತನ್ನ ಅಡ್ಡೆಗಳನ್ನು ಬದಲಾಯಿಸಿದ. ಕೀರ್ತಿಯಂತ ಶ್ರೀಮಂತರ ಮಕ್ಕಳನ್ನೆಲ್ಲಾ ಅಡ್ಡೆಗೆ ಸದಸ್ಯರನ್ನಾಗಿ ಮಾಡಿ ತನ್ನ ವ್ಯವಹಾರ ಗಟ್ಟಿ ಮಾಡಿಕೊಂಡ. ಹಿಂದೊಮ್ಮೆ ಕೀರ್ತಿಯ ಕನ್ನಿಕಾ ಬಿಜಿನೆಸ್ ಮಕ್ಕಾಡೆ ಬಿದ್ದಾಗ ಅದರ ಫರ್ನಿಚರ್ಸ್‌ಗಳನ್ನು ದೋಚಿದ್ದವನೂ ಇದೇ ಗಡ್ಡಾ ಕುಮಾರ. ಇಡೀ ಪ್ರಕರಣದಲ್ಲಿ ಕೌತುಕದ ಸಂಗತಿ ಎಂದರೆ ಜನರ ನಂಟು ಹೊಂದಿರುವ, ಗಂಭೀರ ಆರೋಪಗಳಿಲ್ಲದ ನಾರ್ವೆ ಹೋಟೆಲ್ ಮಾಲೀಕ ನಟರಾಜ್. ಇಂತಹ ಮನುಷ್ಯ ಕೂಡ ತನಗೆ ಹಿಂಸೆ ನೀಡುತ್ತಿದ್ದ ಎಂದು ಕೀರ್ತಿ ಡೆತ್‌ನೋಟಿನಲ್ಲಿ ಬರೆದಿದ್ದಾನೆ.

ಮಂತ್ರಿ ರೇವಣ್ಣ ಫರ್ಮಾನು!

ಜಿಲ್ಲಾ ಉಸ್ತುವಾರಿ ಮಂತ್ರಿ ಇಂತಹ ಘಟನೆ ಮರುಕಳಿಸದಂತೆ ಮುನ್ನೆಚ್ಚರಿಕೆಯಾಗಿ ಡೆತ್‌ನೋಟಿನಲ್ಲಿರುವವರನ್ನೆಲ್ಲಾ ಜೈಲಿಗಟ್ಟಿ ಅಂತ ಫರ್ಮಾನು ಹೊರಡಿಸಿದ್ದಾರೆಂಬ ಸುದ್ದಿ ಇದೆ. ಫರ್ಮಾನು ಪಾಲಿಸುವ ಅಧಿಕಾರಿಗಳು 306 ಕೇಸು ಜಡಿದಿದ್ದಾರೆ. ಅಲ್ಲಿಗೆ ಆರೋಪಿಗಳ ಪರ ಶಿಫಾರಸ್ಸು ಮಾಡುವವರು ಯಾರು ಇಲ್ಲ ಅಂತಲೇ ಅರ್ಥ. ಒಟ್ಟಿನಲ್ಲಿ ಸಂಸಾರವನ್ನು ಸರ್ವನಾಶ ಮಾಡಿದವನು ತನ್ನ ಪಾಪಾಸಿಗರನ್ನು ಬಿಟ್ಟನೆ....? ■

ಸರಕಾರಿ ಸಾಲಕೂ ಏಡಸಿಗು ಏನೋ ಸಮಂದಿರ್ಲೆಬೇಕ

ಬಯಲು ಸೀಮೆಯ ಕಟ್ಟೆ ಪುರಾಣ

"ಯಿನಾರ್‍ಯಾರೊ ಮಂತ್ರಿಗಳಾದ್ರಪ್ಪ" ಎಂದು ಪದೇಪದೇ ಹೇಳುತ್ತ ಉಗ್ರಿ ಕಾಳಮಾವನ ಗಮನ ಸೆಳೆಯಲು ಯತ್ನಿಸಿದರೂ ಅವನು ಕಾಫಿಯನ್ನು ಸೊರಗರಿಯುತ್ತ ಹೀರಿ, ಶೀರ ಬೇಸರದಿಂದ,

"ಯಾವ ಮುಂಡೆ ಮಕ್ಕಳು ಏನಾದ್ರೆ ನಮಿಗೇನ್ಲ?" ಎಂದ.

"ನಿಗಮ ಮಂಢ್ಳಿಗೂ ನೇಮಕ ನ್ಯಡಿತಂತೆ."

"ನಮ್ಮ ಕಡಿಂದ ಯಾರಾದ್ರು?" ಎಂದಳು ಜುಮ್ಮಿ.

"ಏಮಲಾಗೌಡ ಆದಲಂತೆ."

"ವಳ್ಳೆದಾಯ್ತು ಬುಡು. ನಾವೇನಾರ ಕ್ಯಲಸ ಮಾಡಿಸಿಕೊಬವುದು."

"ನಿಗಮ ಮಂಢ್ಳಿಲೇನು ಕ್ಯಲಸಿರತವೇ?" ಎಂದ ಶೀರ.

"ಏನಿರತವೊ ಏನೊ, ನಾನಂತು ಇಲ್ಲಿಗಂಟ ಯಾವ ನಿಗಮದತ್ರನೂ ಹೋಗಿಲ್ಲ, ಮಂಢ್ಳಿತಕ್ಕೂ ಹೋಗಿಲ್ಲ. ನಾನು ತಿಳಕಂಡುಮಟ್ಟಿಗೆ ಏನಪ್ಪಾ ಅಂದ್ರೆ, ಮಿನಿಷ್ಟ್ರಾದೋನು ಕೋಟಿಗಟ್ಲೆ ವಡುದ್ರೆ ಈ ನಿಗಮ ಮಂಢ್ಳಿ ಜನ ಲಕ್ಷಗಟ್ಲೆ ವಡಿತರಂತೆ?" ಎಂದ ಉಗ್ರಿ.

"ವಳ್ಳೆ ಆದಾಯದೆ ಅನ್ನು?"

"ಊ ಕಣೆ, ಅದ್ಕೆ ರಾಜಕೀಯದಲ್ಲಿ ಏನೂ ಆಗಕ್ಕಾಗಲಿಲ್ಲ ಯಲ್ಲಾನು ಕಳಕಂಡೋ ಅಂತ ಅಳೋರ ನ್ಯಲ್ಲ ಸಮಾಧಾನ ಮಾಡಕ್ಕೆ ಅಂತ್ಲೆ ನಿಗಮ ಮಂಢ್ಳಿ ಇರದು."

"ಓ ಅದ್ಕೆ ಅನ್ನು."

"ಸರ್ಕಾರ ನಿಗಮ ಮಂಢ್ಳಿಗೆ ಹಣ ಕೊಟ್ರೆ ಸರಿ, ಇಲ್ಲ ಅಂದ್ರೆ ಕಾರು, ಆಫೀಸು ಅನ್ನೊ ಹಗಲು ಗ್ಯಾಪಾಳದ ಸವುಲತ್ತ ಅನುಭವಿಸಿ ಮನಿಗೆ ಬರಬೇಕಾಯ್ತದೆ."

"ಅಂಗರೆ ಮಂತ್ರಿಗಿರಿನೆ ಸರಿಕಂಡ್ಯ. ಸಿಕ್ಕಿದಾಗ ಒಂದಿಷ್ಟು ತೂದತ್ತಗೆ ಯಸಗಬವುದು" ಎಂದ ಶೀರ.

"ಸಿಕ್ಕಿದಾಗ ತೂದತ್ತಗೆ ಯಸಗಳಂಗಿಲ್ಲ ಈಗ. ತೂಬೆತ್ತಿರೊ ಮಡಬಾಯಿ ಹರದಂಗೆ ಹಣ ಹರಕಂಡು ಬಂದ್ರು ಮನೆ ತುಂಬಕತ್ತದೆ ಕಣೊ ಅದ್ಕೆ ವಬ್ಬ ಮಂತ್ರಿಯಾದ ಅಂದ್ರೆ ಕ್ವಳ್ಳೆ ಹ್ವಡಿಯಕ್ಕೆ ಕಜಾನೆ ಸಿಕ್ತು ಅಂತ ಜನ ತಿಳಕತ್ತರೆ. ಅದ್ಕೆ ಮಂತ್ರಿಯಾದ್ರೆ ಈಗ ಮದ್ದಿನ ಬ್ಯಲೆಯಿಲ್ಲ."

"ಮತ್ತೆ ಜನ ಆಟೊಂತರ ಮ್ಯಾಲಬಿದ್ದು ಹಾರ ಹಾಕಿ, ಸನುಮಾನ ಮಾಡ್ತವಲ್ಲ?" ಎಂದಳು ಜುಮ್ಮಿ.

"ಅದ್ಯಲ್ಲ ನಾಟಕ ಕಣೆ. ಈ ನನಮಕ್ಕಳು ಇದ್ಯಲ್ಲ ನನಿಗೆಯಾ, ನಾನು ಅಂತ ಯೋಗ್ಯನೆಯ ಅಂತ ತಿಳಕಂಡು ಬೀಗತವೆ. ಮಂತ್ರಿಗಿರಿ ಹೋದಾಗ ಅವುಕೆ ಸತ್ಯ ಏನೂ ಅಂತ ಗೊತ್ತಾಗದು."

"ಅದ್ಯಾವನಿಗೆ ಬೇಕು ಹೋಗತ್ತಗೆ" ಎಂದ ಶೀರ.

"ಓಹೊಹೊ ನಿನ್ಯಾರಪ್ಪ ಈಗ ಮಂತ್ರಿ ಮಾಡಕ್ಕೆ ವಂಟಿದ್ದೊರು?" ಎಂದು ಜುಮ್ಮಿ ನಕ್ಕಳು.

"ಶೀರ ಮಾವಂದ ಮಾತಿಗೇಳ್ತೀನಿ; ಹಿಂದೆ ನಿಜಲಿಂಗಪ್ಪನೋರು ಮುಖ್ಯ ಮಂತ್ರಿಯಾಗಿದ್ದಾಗ, ನಮ್ಮ ಸಿಂಗಾರಿ ಗೌಡ್ರು ಯಮ್ಮೆಲ್ಲೆ ಆಗಿದ್ರು. ಆಗ ನಿಜಲಿಂಗಪ್ಪನೋರು ಮಂತ್ರಿಯಾಗ್ರಿ ಸಿಂಗಾರಿಗೌಡ್ರೆ ಅಂದರಂತೆ. ಅದ್ಕೆ ಈ ಸಿಂಗಾರಿಗೌಡ್ರು ನನಿಗ್ಯಾಕ್ ಸಾರ್ ಮಂತ್ರಿಗಿರಿ. ಆ ಶಂಕರೇಗೌಡ್ರನಾರ ಮಾಡಿ ಅಂದರಂತೆ."

"ನೋಡಪ್ಪ, ಅಂಥೋರ್‍ಯಾರಿದ್ದರೀಗ?" ಎಂದ ಕಾಳಮಾವ.

"ಅದ್ಯಾಕಂಗಂದುರ್ಲ?" ಎಂದಳು ಜುಮ್ಮಿ.

"ಮಂತ್ರಿ ಕ್ಯಲಸ ಅಂದ್ರೆ ರಗಳೆ ಕಣೆ, ಜನ ಮುತ್ತಿಗತ್ತರೆ. ಯಾವಾಗ್ಲು ಕ್ಯಲಸ ಮಾಡಬೇಕು. ಪೈಲು ನೋಡಬೇಕು. ಟಿಪ್ಪಣಿ ಬರಿಬೇಕು. ಸಭೆ ಸಮಾರಂಭ ಅಂತ ಅಲೀಬೇಕು. ಜ್ವತಿಗೆ ತನ್ನ ಕ್ಷೇತ್ರನೂ ನೋಡಿಕಬೇಕು. ಇದನ್ಯಲ್ಲ ನ್ಯನಿಸಿಗಂಡು ಆಗಿನ ಶಾಸಕರು ಯಾರ್‍ನಾರಾ ಮಾಡಿ ಅನ್ನೋರೇ ವರತು, ತಾವು ಮಂತ್ರಿಯಾಯ್ತಿವಿ ಅಂತ ಈಗಿನೋರಂಗೆ ಮಾಡಬಾರದ ಕ್ಯಲಸ ಮಾಡತಿರಲಿಲ್ಲ."

"ಮಂತ್ರಿಯಾದ್ರೆ ಬೇಕಾದೋಟು ದುಡ್ಡು ಮಾಡಬವುದು ಅಂತ ಯೋಚನೆ ಮಾಡತಿರಲಿಲ್ಲವೆ?" ಎಂದ ಶೀರ.

"ಏ ನೀನಂಗಂತಿ, ಕಡಿದಾಳು ಮಂಜಪ್ಪಾರು ಗೊತ್ತೇನೊ ನಿನಿಗೆ?"

"ಗೊತ್ತು ಕಣೇಳ್ಳ. ಮುಖ್ಯಮಂತ್ರಿಯಾಗಿರಲಿಲವೆ?"

"ಅವುರ ಮಂತ್ರಿಯಾಗಿ ಮಂಜಪ್ಪಾರೆ ಅಂತ ನಿಜಲಿಂಗಪ್ಪಾರು ಕೇಳಿದಾಗ ಏನಂದ್ರು ಗೊತ್ತೆ?"

"ನನಿಗೇನು ಗೊತ್ತು?"

"ತಮಾಸಿ ಮಾಡಬ್ಯಾಡ ಕೇಳಿಲ್ಲಿ, ನಿಜಲಿಂಗಪ್ಪಾರೆ. ಈಗ ನಾನು ವಳ್ಳೆ ಲಾಯರು. ಕೈತುಂಬ ಕೇಸವೆ. ಇದನ್ಯಲ್ಲ ಬುಟ್ಟು ಮಂತ್ರಿಯಾದ್ರೆ ಏನುಪಯೋಗ ಆ ಮಂತ್ರಿಗಿರಿಲಿ ಯಾವ ಪಾಯ್ದೆನೂ ಇಲ್ಲ, ಅಂಗೇನಾರ ನಾನು ಮಂತ್ರಿಯಾದ್ರೆ ಕೇಸು ಕೈಬುಟ್ಟು ಹೋಯ್ತವೆ. ಮಂತ್ರಿಗಿರಿನೂ ಹೋದಾಗ ನಾನು ನಿರುದ್ಯೋಗಿ ಆಯ್ತಿನಿ. ಬ್ಯಾಡ ಅಂದಿದ್ರಂತೆ. ತೋರಸಪ್ಪ ಇವತ್ತು ಅಂಥೋರ?"

"ಅಂತ ಪುಣ್ಯಾತ್ಮರು ತಿರಗ ಹುಟ್ಟತರೇನ್ಲ" ಎಂದ ಕಾಳಮಾವ ಚಿಂತಾಕ್ರಾಂತನಾದ. ಅಷ್ಟರಲ್ಲಿ,

"ಮುಖ್ಯಮಂತ್ರಿಯ ನಮ್ಮೂರಿಗೆ ಕರಸಬೇಕು ಅಂದ್ರೆ ಏಡಸ ಅಂಟಸಗಬೇಕಂತೆ ನೋಡಪ್ಪ" ಎಂದುಕೊಂಡು ವಾಟಿಸ್ಲೆ ಬಂದ.

"ನೀನೆ ಅಂಟಸಿಗಂಡು ಕರುಸ್ಲ" ಎಂದಳು ಜುಮ್ಮಿ.

"ಏ ಅಂಟಸಿಗಳದೇನು ಬ್ಯಾಡ ಕಣೆ, ಇವುನ್ನ ನೋಡಿದ್ರೆ ಅಂಗೆ ಕಾಣತನೆ. ಅದ್ಕೆ ಕುಮಾರಸ್ವಾಮಿ ಅತ್ರಕೋಗಿ ನನಿಗೂ ಏಡಸು, ನಮ್ಮನಿಗೆ ಬಲ್ಲಿ ಅಂದ್ರಾಯ್ತು" ಎಂದು ಉಗ್ರಿ ನಕ್ಕ.

"ಏಡಸ ಬಂದೋರು ಇವುನಂಗಿರತರೇನ್ಲ?"

"ಊ ಕಣೆ, ಚರ್ಮ ಸುಕ್ಕಾಗಿರತದೆ. ತಲೆ ಕೂದ್ಲು ಸ್ವತಂತ್ರವಾಗಿ ಅಲ್ಲಲ್ಲೆ ನಿಂತಿರತವೆ. ತುಟಿ ಬಿಳಿಚಿಗಂಡಿರತದೆ, ಒಂಥರಾ ಸುಸ್ತಾದೊನಂಗಿರತನೆ. ಇವುನ್ನ ಅಂಗೇ ನೋಡು. ಏಡ್ಸ್ ಗಿರಾಕಿಯಂಗೆ ಕಾಣದಿಲವೆ?"

"ಮಿಸ್ಟರ್ ಉಗ್ರಿ, ಏಡ್ಸ್ ರೋಗಿಯ ಆಡಿಕೊಬ್ಯಾಡ ಅಂತ ಮುಖ್ಯಮಂತ್ರಿಯೇ ಸಿಂಪತಿ ತೋರಿ ಅವುರ ಮನಿಗೆ ಹೋಗಿ ಮನಿಗಿದ್ದು ಬತ್ತಾ ಅವುನೆ ಗೊತ್ತ?"


"ಈಗ ನೀನೊಂದು ಕ್ಯಲಸ ಮಾಡೊ ವಾಟಿಸ್ಲೆ, ನನಿಗೂ ಏಡಸು ಅಂತ ಸುದ್ದಿ ಹಬ್ಬಸಿಬುಡು. ಅದು ಕುಮಾರಣ್ಣನಿಗೆ ಗೊತ್ತಾಯ್ತದೆ. ಅವುನು ಬಂದು ನಿನ್ನ ಮನೆಲಿ ಮನಿಗಿದ್ದು ಹೋಯ್ತನೆ."

"ಅಲ್ಲ ಕಣೊ ಉಗ್ರಿ, ಇಲ್ದೆಯಿರೊ ರೋ... ಅನುವುನ್ನ ಮಾಡಿಕೊಂಡು ಮುಖ್ಯಮಂತ್ರಿ ... ಅವುನೇನೊ ಬಂದು ಹೋಯ್ತನೆ ಅಂತ ... ಈ ಸಮಾಜದಲ್ಲಿ ವಾಟಿಸ್ಲೆಗಿರೊ ಬ್ಯಲೆ ಉಳಿತ... ನನ್ನ ಮಕ್ಕಳ ಯಾರಾರ ಮದಿವಾಯ್ತರೇನೊ. ... ನನ್ನೆಡ್ತಿ ಜೀವ ಮಡಿಕಂಡಿರತಳೇನೊ. ಇ... ನಾನ್‌ಸೆನ್ಸ್, ಏನು ಮಾತಾಡ್ತಿಯೊ ನೀನು" ... ವಾಟಿಸ್ಲೆ.

"ಅದೊಂದು ಏಸಿಯುದಲ್ಲಿ ಈ ನನ್ನ ಮಗ... ವಳ್ಳೆ ಮನ್ಸ ಕಂಡ್ಯ" ಎಂದಳು ಜುಮ್ಮಿ.

"ನಾವೇನು ಕೆಟ್ಟೊರೇನೋ? ನಾನೇಳಿ... ಅಂದ್ರೆ ಮುಖ್ಯಮಂತ್ರಿ ಕರಿಯದಾದ್ರೆ ಏಡ್ಸ್ ... ಆಡಬವುದಲ್ಲಾ ಅಂತ ತಮಾಸಿ ಮಾಡಿದ ಕ...

"ಅಲ್ಲ ಇವುನು ಏಡ್ಸ್ ರೋಗಿಗಳ ಮನಿಗೆ... ಅಂತ ಬಾಗಲಕ್ಟಾಟೆವರಿಗೂ ಹೋಗದಕಿಂತ, ಪೇಟೆಲಿ ಬೀದಿಗೊಂದು ಮನಿದ್ದವಂತೆ ಏಡಸು... ಇಲ್ಲೆ ಹೋಗಬವುದಿತ್ತಪ್ಪ" ಎಂದ ವಾಟಿಸ್ಲೆ.



"ಯಾವ್ಯಾವೂರು ಬಾ... ಕನಕ್ಸನ್ನಲ್ಲಿದ್ದೊ ಅವುಕ್ಯಲ್ಲ ರೋಗ ಬಡಕಂಡದೆ ಕಣೆ... ಕುಮಾರಣ್ಣನ ಕಾಲಗುಣದಿ... ಏಡ್ಸ್ ರೋಗ ಕಂಟ್ರೋ... ಬತ್ತದೊ ಯಂಗೆ ನೋಡನಿರು"

"ಇನ್ನೂ ಜಾಸ್ತಿಯ... ಕಣೊ."

"ಅದ್ಯಂಗೊ?"

"ಸಮಾಜದ ಮಾನ್ಯತೆ... ಸೋಸಿಯಲ್ ರೆಸ್‌ಪೆಕ್ಟ್... ಮ್ಯಾಲೆ ಜನ ಹೆದರದಿಲ್ಲ..."

"ಅದು ನಿಜವೆಯ. ಈ ಮುಖ್ಯಮಂತ್ರಿ ಸಾಲ... ಸೂಲನ್ಯಲ್ಲ ಮನ್ನಮಾಡ್ತಿನಿ... ಹೇಳಿ, ಏಡ್ಸ್‌ರೋಗಿ ಮನಿಗೋಗಿ ಮನಿಕಂಡನ... ಹೇಳು?"

"ಭಾಳ ಸಿಂಬಾಲಿಕ್ಕಾಗ್ಯದೆ ಕಣೊ ಇವುನ ನಡ..."


"ಎಜ್ಜಾಟ್ಯ ಕರಟ್ ಸಾಲ ಮಾಡಿರೊ ... ಸಾಲ ತೀರುಸ್ಲೆ ಬೇಕು, ಅದೇ ರೀತಿ ... ಪೇಷಂಟ್‌ಗಳು ಅದರಲ್ಲೇ ಎಂಡಾಗಬೇಕು, ... ತಾನೆ ಕುಮಾರಣ್ಣನ ಸಂದೇಶ."

"ನೋಡು ಮತ್ತೆ?"

"ಹೇಳ್ತೀ ನೀನು."

"ಲ್ಯಕ್ಕ ಹಾಕು."


—ಬಿ. ಚಂದ್ರೇ...



ಮಹಿಳೆ

ನಾಯಕಿಯರೂ ಮತ್ತವರ ಗಂಡಂದಿರು


ಇಂದಿರಾ ಗಾಂಧಿ, ಸಿರಿಮಾವ್ರೋ ಬಂಡಾರನಾಯ್ಕೆ, ಗೋಲ್ಡಾ ಮಿಯರ್ ಮತ್ತು ಬೆನಜಿರ್ ಭುಟ್ಟೋಗೆ ಇರುವ ಸಾಮ್ಯತೆ ಏನು? ಇವರೆಲ್ಲರೂ ತಮ್ಮ ದೇಶಗಳಲ್ಲಿ ರಾಜಕೀಯ ಉತ್ತುಂಗಕ್ಕೆ ಏರಿದ ಪ್ರಥಮ ಮಹಿಳೆಯರು ಮಾತ್ರವಲ್ಲ, ಆ ಕ್ರಿಯೆಯಿಂದಾಗಿ ತಮ್ಮ ವೈಯುಕ್ತಿಕ ಜೀವನವನ್ನೇ ತ್ಯಜಿಸಿದವರೂ ಕೂಡ.



ಪಾಕಿಸ್ತಾನದ ರಾಜಕೀಯ ರಂಗದ ರಾಜಕುಮಾರಿ ಎಂದೇ ಬಣ್ಣಿಸಲಾಗಿರುವ ಬೆನಜಿರ್ ಮುತ್ತಾಳೆಯ ಗಂಡ ಆಸಿಫ್ ಜರ್‍ದಾರಿ ಈಗ ಬೇರೆ ಬೇರೆ ಆಗಿರುವ ಸುದ್ದಿ ಬಂದಿದೆ. ಪರ್ವೇಜ್ ಮುಷರಫ್ ಎಂಬ ಸೈನ್ಯಾಧಿಕಾರಿ ಪಾಕಿಸ್ತಾನದಲ್ಲಿ ಅಧಿಕಾರ ವಹಿಸಿಕೊಂಡಾಗ ವಿದೇಶಕ್ಕೆ ಹಾರಿಹೋದ ಬೆನಜಿರ್ ಈಗ ದುಬೈನಲ್ಲಿ ತನ್ನ ಮಕ್ಕಳೊಂದಿಗೆ ವಾಸಿಸುತ್ತಿದ್ದರೆ, ಆಕೆಯ ಗಂಡ ಜರ್‍ದಾರಿ ಅಮೆರಿಕಾದಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಿದ್ದಾನೆ.

ಅಂದಿನ ಜನರಲ್ ಜಿಯಾ ವಿರುದ್ಧ ರಾಜಕೀಯವಾಗಿ ಹೋರಾಡಿ ಅಧಿಕಾರಕ್ಕೆ ಬಂದ ಬೆನಜಿರ್‌ಗೆ ದೊಡ್ಡ ತಲೆನೋವಾಗಿದ್ದು ಆಕೆಯ ಗಂಡ ಜರ್‍ದಾರಿ. ತನ್ನ ಹೆಂಡತಿ ಪ್ರಧಾನಮಂತ್ರಿಯಾಗಿದ್ದನ್ನೇ ಬಂಡವಾಳ ಮಾಡಿಕೊಂಡ ಜರ್‍ದಾರಿ ಯಾವ ರೀತಿ ಡೀಲ್‌ಗಳನ್ನು ಕುದುರಿಸಲಾರಂಭಿಸಿದನೆಂದರೆ ಆತನನ್ನು ಪಾಕಿಸ್ತಾನದ ಪತ್ರಿಕೆಗಳು 'ಮಿ. 10% ಎಂದೇ ಕರೆಯುತ್ತಿದ್ದವು. ಹೀಗೆ ಅಕ್ರಮವಾಗಿ ಗಳಿಸಿದ್ದ ಹಣವನ್ನೆಲ್ಲ ಆತ ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟದ್ದಲ್ಲದೆ, ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಅಪಾರ ಆಸ್ತಿ ಕೊಳ್ಳುವುದಕ್ಕೆ ವಿನಿಯೋಗಿಸಿದ್ದ. ಅದೆಲ್ಲ ಅನಂತರ ದೊಡ್ಡ ರಾದ್ಧಾಂತವಾಗಿ ಪರ್ವೇಜ್ ಮುಷರಫ್ ರವರ ಸರ್ಕಾರ ಆತನನ್ನು ಆರು ವರ್ಷಗಳ ಕಾಲ ಜೈಲಿಗೆ ದೂಡಿತ್ತು.

ಜರ್‍ದಾರಿಯ ಈ ಅಕ್ರಮಗಳಿಂದ, ಇತರ ಮಹಿಳೆಯರೊಂದಿಗಿನ ಅನೈತಿಕ ಸಂಬಂಧಗಳಿಂದ ರೋಸಿ ಹೋಗಿರುವ ಬೆನಜಿರ್ ಈಗ ತಾನಾಯಿತು, ತನ್ನ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಆಯಿತು ಎಂಬಂತೆ



ಜೀವಿಸುತ್ತಿದ್ದಾಳೆ, ಮತ್ತೆ ಪಾಕಿಸ್ತಾನದಲ್ಲಿ ಸಕ್ರಿಯ ರಾಜಕೀಯದಲ್ಲಿ ತೊಡಗಲು ಹವಣಿಸುತ್ತಿದ್ದಾಳೆ.

ಅಂದಹಾಗೆ, ರಾಜಕೀಯವಾಗಿ ಯಶಸ್ಸನ್ನು ಕಂಡ ಪುರುಷರ ವೈಯಕ್ತಿಕ ಬದುಕು ಯಾವ ಬಿರುಕುಗಳನ್ನೂ ಕಾಣದೆ ಮುಂದೆ ಸಾಗಿದರೆ, ರಾಜಕೀಯ ನಾಯ... ವೈಯಕ್ತಿಕ ಬದುಕು ಯಾಕೆ ನುಚ್ಚುನೂರಾ... ಎಂಬ ಪ್ರಶ್ನೆ ಪ್ರಜ್ಞಾವಂತರನ್ನು ಕಾಡದೇ ಇರಲ...


ಇದಕ್ಕೆ ಉತ್ತರ ಮತ್ತೆ ನಮ್ಮ ಪುರುಷ ... ಸಮಾಜವೇ ಆಗಿದೆ. ಯಾಕೆಂದರೆ ನಾ... ಮಡದಿಯರು ತಮ್ಮ ಗಂಡನ ನೆರಳಿನಲ್ಲಿ ನಿಶ್ಚಿಂತ... ಜೀವನ ಸಾಗಿಸಿದರೆ, ನಾಯಕಿಯರ ಗಂಡ... ಹಾಗೆ ತಮ್ಮ ಹೆಂಡಂತಿಯರ ನೆರಳಿನಲ್ಲಿ ಜೀವಿ... ಅವರ ಪುರುಷತ್ವಕ್ಕೆ ಸವಾಲಾಗಿ ಕಾಣಿಸುತ್ತ...

ಇಂತಹ ಪುರುಷತ್ವ ರೋಗಕ್ಕೆ, ಸ್ವಾ... ಮಹಿಳೆಯರು ತಮ್ಮ ವೈಯಕ್ತಿಕ ಮತ್ತು ಸಾ... ಜೀವನವನ್ನೇ ಬಲಿಕೊಡಬೇಕಾಗುತ್ತದೆ. ... ಇಂದಿರಾಗಾಂಧಿಯೂ ಹೊರತಾಗಿರಲಿಲ್ಲ ... ಬೆನಜೀರ್ ಕೂಡ ಬಚಾವಾಗಲಿಲ್ಲ, ಅಂ... ಇದು ಭಾರತ, ಪಾಕಿಸ್ತಾನ ಮತ್ತು ಶ್ರೀ... ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಟರ್ಕಿ... ಮಾಜಿ ಪ್ರಧಾನಿ ಟನ್ಸು ಸಿಲ್ಲರ್ ಮತ್ತು ಫಿ... ದೇಶದ ಹಾಲಿ ಅಧ್ಯಕ್ಷೆ ಗ್ಲೋರಿಯಾ ಮಕಾ... ಅರ್‍ರೋಯೋರವರ ವೈಯಕ್ತಿಕ ಜೀವನದ ವ... ಆಗಿದೆ.

—ಸಾ...

ಬಿಲೆ, ನೆಸ್ಟಿ


ಇದೆಷ್ಟು ಕ್ರೂರ ಬದುಕು! ನೀವು ಕ್ರೀಡಾಪಟು. ನಿಮ್ಮ ಇಡೀ ಜೀವನದ ...ಯ್ವೇಕವೇ ಆಟದಲ್ಲಿ ಶ್ರೇಷ್ಠತೆ ಮುಟ್ಟುವುದು. ಆದರೆ ಅದು ಸಾಧ್ಯವಾಗುವುದಿಲ್ಲ ...ನು ಒಡೆದು ಚೂರಾಗುತ್ತದೆ. ಕಾಲ ಮತ್ತು ಸಂದರ್ಭದ ಮೇಲೆ ನಿಂತ ಕ್ರಿಯೆ ...ಮ್ಮ ಹಿಡಿತದಿಂದ ತಪ್ಪಿಸಿಕೊಳ್ಳುತ್ತದೆ. ಅಬ್ಬಿ ಬಲೆಯ ಬಗ್ಗೆ ನಾನು ಬರೆದೆ. ...ಮಗೆ ನೆನಪಿರಬಹುದು. ಸೋಮಾಲಿಯಾ ದೇಶದ ಹುಡುಗ. ಕ್ಷಾಮ ಮತ್ತು ...ಮ ಕೈ ಕೈ ಹಿಡಿದು ನಡೆವ ಸೋಮಾಲಿಯಾದ ಹೆಮ್ಮೆಯ ಹುಡುಗ ಈತ.



ಹೋದವರ್ಷ ತನ್ನ 1500 ಮೀಟರ್ ಓಟಕ್ಕೆ ವಿಶ್ವಪದಕ ಗೆದ್ದಿದ್ದ. ಈ ವರ್ಷ ಒಲಂಪಿಕ್ಸ್‌ಗಾಗಿ ಕಾಯುತ್ತಿದ್ದ. ಆದರೆ ತರಬೇತಿ ವೇಳೆಯಲ್ಲೇ ಗಾಯಗೊಂಡು ಒಲಂಪಿಕ್ಸ್‌ನಿಂದ ಹೊರಗೆ ಉಳಿದ. ಇಪ್ಪತ್ತಾರು ವರ್ಷದ ಬಿಲೆ ಮತ್ತೊಂದು ಒಲಂಪಿಕ್ಸ್‌ಗೆ ನಾಲ್ಕು ವರ್ಷ ಕಾಯಬೇಕು...

ಈ ಬದುಕು ಕ್ರೂರ ಮತ್ತು ಗೌಪ್ಯಗಳನ್ನು ಬಚ್ಚಿಟ್ಟುಕೊಂಡ ವಿಚಿತ್ರ. ಆಂಟೋನಿ ನೆಸ್ಟಿ... ನೂರು ಮೀಟರ್ ಬಟರ್‌ಫ್ಲೈ ಈಜಿನಲ್ಲಿ ಇದ್ದಕ್ಕಿದ್ದಂತೆ ಚಿನ್ನದ ಪದಕ ಗಳಿಸಿದ. ಈ ಈಜಿನಲ್ಲಿ ಭಾಗವಹಿಸಿದ್ದ ಘಟಾನುಘಟಿಗಳಾದ ಗ್ರಾಸ್, ಬಿಯಾಂಡಿಗಳೆಲ್ಲ ಬೆಚ್ಚಿಬಿದ್ದರು. ದಕ್ಷಿಣ ಅಮೆರಿಕಾದ ಪೂರ್ವದ ನೆತ್ತಿಯಲ್ಲಿರುವ ತೀರಾ ಪುಟ್ಟ ಅನಾಮಿಕ ದೇಶವಾದ ಸೂರಿನಾಮ್‌ನ ಹುಡುಗ ಈ ನೆಸ್ಟಿ. ಸೋಮಾಲಿಯಾಗೆ ಬಿಲೆ ತಂದುಕೊಡಲಾರದ ಹೆಮ್ಮೆಯನ್ನು ನೆಸ್ಟಿ ತನ್ನ ಸೂರಿನಾಮ್‌ಗೆ ತಂದ.

ಟರ್ಕಿಯ ನಿಯಾಮ್ ಸುಲೇಮನೋಗ್ಲೊ ಕೂಡ. 4 ಅಡಿ 8 ಇಂಚಿನ ಈ ಪುಟ್ಟ ಆಸಾಮಿ ತನ್ನ ತೂಕದ ಮೂರರಷ್ಟನ್ನು ಎತ್ತಿ ಟರ್ಕಿ ದೇಶದ ಕಣ್ಮಣಿಯಾದ. ಟರ್ಕಿ ನಿಮಗೆ ನೆನಪಾಗಬಹುದು. ಯುರೋಪ್, ಏಷ್ಯಾ ಸಂದಿಸುವಲ್ಲಿ ಇರುವ, ಪ್ರಜಾಪ್ರಭುತ್ವವನ್ನೂ ಅನೇಕ ಸಲ ಪ್ರಯೋಗಿಸಿ ಸೋತಿರುವ, ಜಗತ್ತಿನ ಅತ್ಯಂತ ಸುಂದರ ಪ್ರಾಚೀನ ನಾಗರಿಕತೆ ಪಡೆದು ಇಸ್ತಾನ್‌ಬುಲ್, ಕಾನ್‌ಸ್ಟಾಂಟಿನೋಪಲ್‌ಗಳಿಂದ ಮಿಂಚುತ್ತಿರುವ ದೇಶ. ಏಟ್ಸ್ ಕವಿಯ ಬೈಜಾಂಟಿಯನ್ ನಾಗರಿಕತೆಯ ತಾಣ....



ಅಕ್ಟೋಬರ್ 2, 1988

ಬೇರೆ ತರದಹ ಊರು

ಊರಿಂದ ಊರಿಗೆ ಹೋಗುವ ದಾರಿಯಲ್ಲಿ ಎಳ್ಳು, ಹತ್ತಿ ಮಳೆಗೆ ನಾಶವಾಗುತ್ತಿದ್ದ ದೃಶ್ಯಗಳು. ಚಿತ್ರದುರ್ಗದ ಜನ ಈ ಬಗೆಯ ಮಳೆ ಕಂಡವರಲ್ಲ, ಕೇಳಿದವರಲ್ಲ, ಬೆಟ್ಟಗಳ ನಡುವೆ ಬೆಂಕಿ ಹಚ್ಚುವ ಸೆಖೆ, ತೀವ್ರ ಚಳಿ ಕಂಡ ಜನ. ಬಯಲಲ್ಲಿ ಮಲಗುವ ಜನ, ಕನಿಷ್ಠ ಬೆಳೆ ನಿರೀಕ್ಷಿಸಿ ಪಡೆದು ತೃಪ್ತರಾಗುವ ಜನ. ನಾನು ಹೋದಸಲ ಬಂದಾಗ ಹಚ್ಚಹಸಿರು ಎಳ್ಳು ಹೂ ಬಿಟ್ಟು ನಿಂತಿತ್ತು, ಈ ಸಲ ಕೊಯ್ದಿದ್ದಾರೆ. ಮಳೆ ಜಡಿಯುತ್ತಲೇ ಇದೆ. ನೆಲ ಜಿನುಗುತ್ತಿದೆ. ಎಲ್ಲೆಲ್ಲೂ ನೀರು.

ಈ ದಾರಿಯಲ್ಲಿ ಮುಂಚೆಯೇ ತಿಳಿಸಿ ನನಗಾಗಿ ಕಾಯುತ್ತಿದ್ದ ಒಂದು ಹಳ್ಳಿಯ ಜನ. ಊರ ಹೆಸರು ದೊಗ್ಗನಾಳ್. ನನಗೆ ಇದ್ದದ್ದು ಕೇವಲ ಅರ್ಧಗಂಟೆ. ಆಗಲೇ ಎರಡು ಊರನ್ನು ತಡವಾಗಿ ತಲುಪಿದ್ದ ನನಗೆ ಆತ್ಮನಿಂದೆಯಿಂದ ಜ್ವರ ಬಂದಂತಾಗಿತ್ತು. ಆದರೂ ಈ ಊರಿಗೆ ಹೋದೆ. ಈ ಊರು ನಮ್ಮ ಪ್ರಸಿದ್ಧ ಆಡಳಿತಗಾರ, ಅರ್ಥಶಾಸ್ತ್ರಜ್ಞ ಡಿ.ಎಂ. ನಂಜುಂಡಪ್ಪನವರ ಊರೆಂದು ತಿಳಿಯಿತು. ಇಲ್ಲಿನ ಜನ ಬೇರೆ ಊರಿನ ಜನಕ್ಕಿಂತ ಸ್ವಲ್ಪ ದಿಟ್ಟವಾಗಿ, ಸ್ವಲ್ಪ ಬೇರೆಯಾಗಿ ಕಂಡರು. ಆದರೆ ಆತ್ಮೀಯತೆ, ವಿಶ್ವಾಸ ತುಂಬಿತುಳುಕುವುದು ಇಲ್ಲಿ ಮಾತಾಡಿದರೆ ತಿಳಿಯಿತು. ಈ ದೊಗ್ಗನಾಳ್ ವಿಚಾರವಂತರ ಊರು. ಇಲ್ಲಿಗೆ ಯಾವ ಜಗದ್ಗುರುವೂ ಕಾಲಿರಿಸುವಂತಿಲ್ಲ; ಆ ಗುರುಗಳನ್ನು ನೋಡಬಯಸುವವರು ಹೋಗಿ ನೋಡಿಬರಬಹುದು. ಎರಡನೆಯದು, ಈ ಊರಿಗೆ ಭಿಕ್ಷುಕರ ಪ್ರವೇಶವಿಲ್ಲ, ಇಲ್ಲಿ ಶಿಕ್ಷಣ ತನ್ನ ಕೆಲಸ ಮಾಡಿದೆ. ಊರಿನ ನೂರಾರು ಜನ ನೌಕರಿ ಹಿಡಿದು ವಿದೇಶಗಳಿಗೆ, ಪರಸ್ಥಳಗಳಿಗೆ ಹೋಗಿದ್ದಾರೆ- ಅಂಥವರಲ್ಲಿ ನಂಜುಂಡಪ್ಪ ಒಬ್ಬರು. ನನ್ನ ಭಾಷಣಕ್ಕೆ ಅಧ್ಯಕ್ಷತೆ ವಹಿಸಿದ್ದ ಸದಾಶಿವಪ್ಪ ಎಂಬ ವ್ಯಕ್ತಿ ಹೇಳಿದಂತೆ ಈ ಯಜಮಾನರ ಸಂಬಂಧಿಗಳ ಸುಮಾರು ನಲವತ್ತು ಕುಟುಂಬಗಳು ಬೆಂಗಳೂರಿನಲ್ಲೇ ಇವೆ.

ಸುಮಾರು ನೂರು ಮನೆ ಲಿಂಗಾಯತರ, ನೂರೈವತ್ತು ಮನೆ ಕುರುಬರ, ನಾಯಕರ, ಇತರರ ಐವತ್ತು ಕುಟುಂಬಗಳ ಈ ಊರು ತನ್ನ ವೈಶಿಷ್ಟ್ಯದಿಂದ ನಾನು ತಲೆದೂಗುವಂತೆ ಮಾಡಿತು.


ಸಿರಿಗೆರೆ

ನೆಲ್ಲೂರು ನನ್ನ ನೆಚ್ಚಿನ ಊರು. ಇದು ಚನ್ನಗಿರಿಯ ಹತ್ತಿರದಲ್ಲಿ ಕಾರಿಗನೂರನ್ನು ಸೂಳೆಕೆರೆ ಆಚೆಗಿಟ್ಟು ನೆಲೆಸಿದೆ. ಇಲ್ಲಿಗೆ ನಾನು ಎಂಟು ವರ್ಷದ ಹಿಂದೆ ಹೋಗಿದ್ದೆ. ಹಿಂದೂ ಮುಸ್ಲಿಂ ಜಗಳವಾಗಿ ಅನೇಕರಿಗೆ ಆಗ ಗಾಯವಾಗಿತ್ತು; ನಾನು ಈ ಬಗ್ಗೆ 'ಪತ್ರಿಕೆ'ಯಲ್ಲಿ ವರದಿ ಮಾಡಿ ತಪ್ಪು ಮಾಡಿದ ಹಿಂದೂ, ಮುಸ್ಲಿಮರು, ಪೊಲೀಸರನ್ನೆಲ್ಲ ಅವರ ತಪ್ಪು ಎತ್ತೆಣಿಸಿ ಬರೆದಿದ್ದೆ. ಸುಮಾರು ಶೇ.60 ಭಾಗ ಮುಸ್ಲಿಮರುನ್ನುಳ್ಳ ಈ ಊರಲ್ಲಿ ಅಂದಿನಿಂದ ಇಂದಿನವರೆಗೆ ಹಿಂದೂ ಮುಸ್ಲಿಂ ಜಗಳವಾಗಿಲ್ಲವಂತೆ. ಅದನ್ನು ಇಲ್ಲಿಯ ಜನರೇ ಹೇಳಿದರು. ಪತ್ರಕರ್ತರಿಗೆ ಇದಕ್ಕಿಂತ ಹೆಮ್ಮೆಯ ಸಂಗತಿ ಬೇರೆ ಉಂಟೆ? ಅದನ್ನೇ ಅಲ್ಲಿಯ ಜನಕ್ಕೆ ಅವತ್ತು ಹೇಳಿದೆ. ಪುಟ್ಟ ಭಾಷಣ ಮಾಡಿದೆ.

ನನ್ನ ಹತ್ತು ಊರುಗಳ ಅಲೆದಾಟದಲ್ಲಿ ಕೊನೆಗೆ ಸಿಕ್ಕಿದ್ದು ಸಿರಿಗೆರೆ. ಅಲ್ಲಿ ಭಾಷಣ ಇಟ್ಟುಕೊಂಡಿದ್ದು ನನ್ನ ಕುತೂಹಲ ಕೆರಳಿಸಿತ್ತು. ಬೊಮ್ಮಾಯಿಯವರ ಸಾದ ಲಿಂಗಾಯತರ, ಸಿರಿಗೆರೆ ಮಠದ ಕ್ರಿಯೆಗಳ ಕೇಂದ್ರ ಇದು. ಕೊನೇಗಳಿಗೆಯಲ್ಲಿ ಇಲ್ಲಿಯ ಹುಡುಗರು ಸಭೆಯನ್ನು ರದ್ದು ಮಾಡಲಿದ್ದರಂತೆ; ಆದರೆ ಅಲ್ಲಿಯ ಗುರು ಶಿವಮೂರ್ತಿಯವರು ಹಾಗೆ ಮಾಡಕೂಡದೆಂದೂ, 'ಟೀಕಿಸಿದರೆ ಟೀಕಿಸಲಿ' ಎಂದೂ ಹೇಳಿದರಂತೆ. ಇದೆಲ್ಲ ನನಗೆ ಆಮೇಲೆ ತಿಳಿಯಿತು. ಆದರೆ ನನಗೆ ಯಾರನ್ನೂ ಬೇಕಂತಲೇ ಟೀಕಿಸುವ, ಧೂಳೆಬ್ಬಿಸುವುದಕ್ಕಾಗಿಯೇ ಕಾಲು ಕೆರಯುವ ಚಟ ಇರಲಿಲ್ಲ. ನನ್ನ ಊಹೆಯ ಪ್ರಕಾರ ಈ ಜಾಗದಲ್ಲಿಯೇ ಪ್ರವಾಸದ ನನ್ನ ಅತ್ಯುತ್ತಮ ಭಾಷಣ ಮಾಡಿದೆ. ಎರಡು ದಿನ ಯೋಚಿಸಿದ್ದೆಲ್ಲ ಅವತ್ತು ಹೊರ ಬಂದಿತ್ತು; ಎರಡು ದಿನದಲ್ಲಿ ಒಂದು ಖಚಿತ ರೂಪ ಪಡೆದಿತ್ತು. ಮುಂಚೆಯೇ ನಾನು ಅಲ್ಲಿಯ ವ್ಯವಸ್ಥಾಪಕರಿಗೆ ತಿಳಿಸಿದ್ದಂತೆ ಸಿರಿಗೆರೆಯಲ್ಲಿ ಇಳಿದುಕೊಳ್ಳಲು ಇಷ್ಟಪಡದೆ ಹೊರಟೆ. ಎರಡು ಗಂಟೆಯಿಂದ ಅಲ್ಲಿ ಉಣ್ಣಲು, ಉಳಿಯಲು, ಸ್ವಾಮಿಯೊಂದಿಗೆ ಮಾತಾಡಲು ಒತ್ತಾಯಿಸುತ್ತಿದ್ದ ಜನ ತಮ್ಮ ಇರಾದೆ ಮುಂದುವರಿಸಿದರು. ಸ್ವಾಮಿಗಳ ಹತ್ತಿರ ಮಾತಾಡುವುದು ನನ್ನಲ್ಲಿ ಏನೂ ಇರಲಿಲ್ಲ; ಅಲ್ಲಿ ಊಟ ಮಾಡುವ ಸಮಯ ಕೂಡ ಅಲ್ಲ. ನನ್ನ ಅಲೆದಾಟ ಆದಷ್ಟೂ ವಸ್ತುನಿಷ್ಠವಾಗಿ, ನನ್ನಲ್ಲಿ ವ್ಯಾಮೋಹ ಕೆರಳಿಸದೆ, ಜನರಲ್ಲಿ ಹುಸಿಭರವಸೆ, ಯಾವ ಪ್ರತಿಷ್ಠರ ಕಟಾಕ್ಷವೂ ಇಲ್ಲದೆ ನಡೆಯಬೇಕೆಂಬುದು ನನ್ನ ಇಷ್ಟ. ಆದ್ದರಿಂದ ಯಾವ ಒತ್ತಡಕ್ಕೂ ಮಣಿಯದೆ ಹೊರಟೆ.

ಮನಸ್ಸು ಹಗುರವಾಗಿತ್ತು.

ಪ್ರೀತಿಗೆ ಕಣ್ಣಿಲ್ಲ ಅಂತಾರೆ, ಪ್ರೀತಿಸುವವರಿಗೆ?



...ಎಂ. ನಿಸರ್ಗ. ದಾವಣಗೆರೆ
...ಕುಮಾರಸ್ವಾಮಿ ಜಮೀರ್‌ಗೆ ...ನ್ನ ಸವರಿ ಮುತ್ತು ಕೊಟ್ಟಿದ್ದಕ್ಕೆ ...ಚಿತಕ್ಕನ ಪ್ರತಿಕ್ರಿಯೆ?
* ...ನಾಳೆ ಸಲಿಂಗಕಾಮಿಗಳ ...ನೆಯಲ್ಲೂ ಮಲಗಿದರೆ ...ಷು ಅಂತ ಆಕೆಯ ...ಸಂಕೆಯುಂತೆ!

...ಅನಿಲ್‌ಕುಮಾರ್. ...ರಾಯಚೂರು
...ಶಾಲಾ ಮಕ್ಕಳಿಗೆ ಮೊಟ್ಟೆ ಕೊಟ್ಟರೆ ಚೆಡ್ಡಿಗಳಿಗೇಕೆ ...ಹೊಟ್ಟೆಕಿಚ್ಚು?
* ಅದು ಅವರ ಹೊಟ್ಟೆಪಾಡಿನ ವಿಷಯ ಅದಕ್ಕೆ!

...ಶ್ರೀನಿವಾಸ್. ಮಂಡ್ಯ
...ಕುಮಾರಣ್ಣನ ಸರ್ಕಾರದ ಒಂದು ವರ್ಷದ ಸಾಧನೆ ...ಯೇನು?
* ...ದವರ ಮನೆಯಲ್ಲಿ ಮಲಗಿ, ಮೂತ್ರ ಮಾಡಿ ...ಬರುವುದು!

...ಬಸವರಾಜ್ ಚೆಸ್ಟರ್. ಗುಲ್ಬರ್ಗಾ
...ಕುಮ್ಮಣ್ಣ 'Captain of the Ship' ಆದರೆ ರವಿ ...ಶ್ರೀ(ವ್ಯಕ್ತಿ)ವತ್ಸ....?
* 'Cheap-tain' ಅಂತ ಗಾಂಧಿನಗರ ಡಬ್ ಮಾಡಿದೆ

ಎಂ. ಶಿವಸ್ವಾಮಿ. ಬೆಂಗಳೂರು
ತೊಟ್ಟಿಲನ್ನು ತೂಗಿ ಕೂಸನ್ನೂ ಚಿವುಟುವವರಿಗೆ ಏನೇಳಬೇಕು?
* ಕಾಸನ್ನೂ ತಿಂದು, ಭ್ರಷ್ಟಾಚಾರದ ಬಗ್ಗೆ ಮಾತನಾಡುವವರಿಗೆ ಏನನ್ನುತ್ತೇವೊ, ಅದನ್ನೇ ಅನ್ನಬೇಕಲ್ಲವಾ?

ಅಕ್ಕಿ ಬಸವೇಶ. ಉಪನಾಯಕನಹಳ್ಳಿ
ಅಂದು ಶಿಕ್ಷಕರು, ಇಂದು ಪಾನಮತ್ತ ಶಿಕ್ಷಕರು, ಇನ್ಮುಂದೆ?
* ಇಂಗ್ಲಿಷ್ ಬಾರದ ಆಂಗ್ಲ ಭಾಷಾ ಟೀಚರ್‌ಗಳು!

ಡಿ.ಎಲ್. ಚಂದ್ರಿಕಾ. ಹರಪನಹಳ್ಳಿ
ಕುಡುಕರ ಸಂಗ ಮಾನಭಂಗ, ದುಷ್ಟರ ಸಂಗ....?
* ವಿರಾಟ ಹಿಂದೂ ಸಮಾಜೋತ್ಸವ ಎಂಬ ಹಾಸ್ಯ ಪ್ರಸಂಗ!

ತಾವರೆ ಪರಪ್ಪ. ಮತ್ತೀಗಳ್ಳಿ
ಕೋಳಿ ಮೊಟ್ಟೆ ವಿವಾದದಿಂದ ಯಾರಿಗೆ ಲಾಭ?
* ಬಿಟ್ಟಿ ಪ್ರಚಾರ ಪಡೆದ ಅನಾಮಿಕ ಮಠಾಧೀಶರಿಗೆ!

ಶಿವಕುಮಾರ ಸುರಪೂರ. ಗುಲ್ಬರ್ಗಾ
ಮಂಜುಗಡ್ಡೆಗಿಂತ ತಂಪಾಗಿರುವುದು ಯಾವುದು?
* ಒಳ್ಳೆದ ಹೃದಯ!

ಸಬಿಯಾ ಬೇಗಂ. ದೇವದುರ್ಗ
ಬುದ್ಧಿಜೀವಿಗಳು ಮೃಗಳ್ಳರಾಗಿರುತ್ತಾರಲ್ಲಾ?
* ಬುದ್ಧಿಗೂ, ದೇಹಕ್ಕೂ ಸಂಬಂಧವಿಲ್ಲ ಎಂದು ತಿಳಿದಿರುವುದರಿಂದ

ಡಿ. ಗಾಯತ್ರಿ. ದೇವದುರ್ಗ
ಚಲುವಣ್ಣ ಅಂದ್ರೆ ದೇವೇಗೌಡರಿಗೇ ಜ್ವರವಂತೆ?
* ಅದು 'ಚೆಲುವ' ಭ್ರಮೆ!

ಅಬ್ದುಲ್ ರಜಾಕ್. ದೇವದುರ್ಗ
ತುಂಟಾಟದಲ್ಲಿ ಆಂಟಿಯರು ಮೇಲೋ ಹುಡುಗಿಯರು ಮೇಲೋ?
* ಈ ವಿಷಯದಲ್ಲಿ ಅಂಕಲ್‌ಗಳಿಗೂ, ಹುಡುಗರಿಗೂ ಇರುವಷ್ಟೇ ವ್ಯತ್ಯಾಸವಂತೆ!

ಕೆ.ವಿ. ಶಿವಕುಮಾರ್. ಕಾಳೀಹುಂಡಿ
ರಾಜಕೀಯ ರಂಗದಲ್ಲಿ ಮೊಸಳೆ ಕಣ್ಣೀರು ಸುರಿಸುವವರನ್ನು ಏನೆನ್ನಬೇಕು?
* ಚೆನ್ನಿಗಪ್ಪನ ಬಾಸ್!

ಸಿ.ವಿ.ಎಸ್. ಶೈಲಜಾನಟರಾಜ್. ಕಿತ್ತನಹಳ್ಳಿ
"ಅಳುವ ಗಂಡಸರನ್ನು ನಂಬಬೇಡಿ" ಎಂಬ ಮಾತಿದ್ದೂ ದೇವೇಗೌಡ್ರು ಸಿಕ್ಕಾಬಟ್ಟೆ ಅಳ್ತಾರಲ್ಲ?
* ಅದು ನಿಜವಾದ ಅಳು ಅಂತ ನೀವ್ಯಾಕೆ ಅಂದುಕೊಂಡಿದ್ದೀರಿ!?

ಇಂದಿರಾ ಶ್ರೀಧರ್. ದಾವಣಗೆರೆ
'ಲಂಕೇಶ್' ಜಾಣ ಜಾಣೆಯರ Hero ಆಗಿದ್ದರು, ಗೌರಿ?
* ಚೆಡ್ಡಿಗಳ ಪಾಲಿಗಂತೂ ಶೂರ್ಪನಖಿ!

...ಅಕ್ಕಿ ಕೊಟ್ರೇಶ. ಬಳ್ಳಾರಿ
...ಪ್ರೀತಿಗೆ ಕಣ್ಣಿಲ್ಲ ಅಂತಾರೆ, ಪ್ರೀತಿಸುವವರಿಗೆ?
* ಬುದ್ಧಿ ಇಲ್ಲ ಅಂತಾರೆ... ಲವ್ ಡಿಸಪಾಯಿಂಟ್ ...ಗಿರಾಕಿಗಳು!

ಬಹುಮಾನಿತ ಪ್ರಶ್ನೆ.

ಥೀ ತುಂಟಿ!

ಸೀನ ಲೇಟಾಗಿ ಮನೆಗೆ ಹಿಂದಿರುಗಿದಾಗ ಅವನ ಹೆಂಡತಿ ಆಗಲೇ ನಿದ್ದೆ ಮಾಡುತ್ತಿದ್ದಳು. ಹಲವಾರು ದಿನಗಳಿಂದ ರಾತ್ರಿ ಸಲ್ಲಾಪಗಳಲ್ಲಿ ತೊಡಗಲು ನಿರಾಕರಿಸಿದ್ದ ಆಕೆಗೆ ಈಗಲಾದರೂ ಪಾಠ ಕಲಿಸಬೇಕೆಂದು ಸೀನ ಆತುರಾತುರವಾಗಿ ಹಾಸಿಗೆ ಸೇರಿದ.



ನಿದ್ದೆ ಮಾಡುತ್ತಿದ್ದ ಹೆಂಡತಿಯನ್ನು ಹಿಡಿದು ಮುತ್ತಿಟ್ಟು ಪ್ರೇಮಿಸಿದ, ಕಾಮಿಸಿದ. ಆಕೆ ನಿದ್ದೆಗಣ್ಣಿನಲ್ಲೇ ಎಲ್ಲವನ್ನು ಆನಂದಿಸಿದಳು. ಎಲ್ಲ ಮುಗಿದ ಮೇಲೆ ಸೀನ ಬಾತ್‌ರೂಮಿಗೆ ಹೋದ. ಅಲ್ಲಿ ಆತನ ಹೆಂಡತಿ ಮುಖ ತೊಳೆಯುತ್ತಾ ನಿಂತಿದ್ದಳು.

"ಅರೆ, ನೀನು ಇಲ್ಲೇನು ಮಾಡುತ್ತಿದ್ದೀಯಾ"? ಎಂದ ಸೀನ ಅಚ್ಚರಿಯಿಂದ.

"ಶೂ! ಮೆಲ್ಲಗೆ ಮಾತಾಡು. ಹಾಸಿಗೆಯಲ್ಲಿರುವ ನನ್ನ ಅಮ್ಮ ಎದ್ದಾಳು" ಎಂದು ಪಿಸುಗುಟ್ಟಿದಳು ಸೀನನ ಹೆಂಡತಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಶಿಲ್ಪಾ ಶೆಟ್ಟಿಗೆ ಆದದ್ದು ಭಾರತಕ್ಕೆ ಆದ ಅವಮಾನವೇ?

ಜನವರಿ 24ರ ಸಂಚಿಕೆಯ ನಮ್ಮ ಪ್ರಶ್ನೆ: ಹಾಲಿವುಡ್ಡಿನ ನಟ ಗೇರ್ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಏಕೆ ಮೆಚ್ಚಿಕೊಂಡರು?
ನಿಮ್ಮ ಉತ್ತರ: ಕುಮಾರಸ್ವಾಮಿ HIV ಪೀಡಿತರ ಮನೆಯಲ್ಲಿ ಮಲಗಿದ್ದ +ve (ಪಾಸಿಟಿವ್) ಎಂದು ಗೇರ್ ಭಾವಿಸಿದ್ದರಿಂದ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಸ್. ಪುಷ್ಪ, ಬೆಂಗಳೂರು

ಹಂಪೆ: ಕಾಶ್ಮೀರಿಗಳಿಗೆ ಭಜರಂಗಿ ಕಿರುಕುಳ

'ಉಗ್ರಗಾಮಿ' ಎಂಬ ಆರೋಪದ ಮೇಲೆ ಅರೆಸ್ಟ್ ಆಗಿ ಈಗ ರಾಜ್ಯ ಪೊಲೀಸರ ವಶದಲ್ಲಿರುವ ಇಮ್ರಾನ್ ಜಲಾಲ್ ನಿಜಕ್ಕೂ ಭಯೋತ್ಪಾದಕನಾ, ಅವನ ಹಿನ್ನೆಲೆ ಏನೆಂಬ ಬಗ್ಗೆ ಸಾಕ್ಷ್ಯಾಧಾರಗಳು ಇನ್ನೂ ಖಚಿತಪಟ್ಟಿಲ್ಲ. ಆದರೆ ಇದೇ ನೆಪ ಬಳಸಿಕೊಂಡು ಭಜರಂಗ ದಳ ಹಾಗೂ ವಿಶ್ವಹಿಂದೂ ಪರಿಷತ್‌ನವರು ಹಂಪೆಯಲ್ಲಿ ನೆಲೆಸಿರುವ ಇನ್ನಿತರ ಕಾಶ್ಮೀರಿಗಳೆಲ್ಲರೂ ಟೆರರಿಸ್ಟ್‌ಗಳೆಂದು ಅಪಪ್ರಚಾರ ಶುರು ಮಾಡಿಬಿಟ್ಟಿದ್ದಾರೆ. ಅಷ್ಟೇ ಅಲ್ಲ ಈ ಕಾಶ್ಮೀರಿಗಳೆಲ್ಲರೂ ಹಂಪೆ ಬಿಟ್ಟು ತೊಲಗಬೇಕೆಂದೂ, ಇವರಿಗೆ ಮನೆ ಅಂಗಡಿ ಬಾಡಿಗೆಗೆ ನೀಡಿರುವ ಸ್ಥಳೀಯರು ಅವರ ಜಾಗ ಬಿಡಿಸಬೇಕೆಂದೂ ಚೀರಿಕೊಳ್ಳುತ್ತಿದ್ದಾರೆ. ಭಜರಂಗಿ ಅನಿಲ್ ಜೋಶಿ, ಮಹೇಶ್ ಹಾಗೂ ಆರ್‌ಎಸ್‌ಎಸ್‌ನ ಕೇಶವರೆಂಬ ಮೋಲ್ಬಾತಿ ಹಿಂದೂ ವೀರರಿಗೆ ಈಗ ಇದೇ ಫುಲ್‌ಟೈಂ ಕೆಲಸವಾಗಿದೆ.


ಇಮ್ರಾನ್

ಇಲ್ಲಿನ ವಿಪರ್ಯಾಸ ಹೇಗಿದೆ ನೋಡಿ.

ಇಮ್ರಾನ್ ಒಬ್ಬ ಉಗ್ರಗಾಮಿ ಹೌದಾ ಅಲ್ಲವಾ ಎಂಬ ಬಗ್ಗೆ ನಡೆದಿರುವ ತನಿಖೆ ಇನ್ನೂ ಪೂರ್ಣಗೊಂಡಿಲ್ಲ, ಪೊಲೀಸರು ಆರೋಪ ಪಟ್ಟಿಯನ್ನು ಕೋರ್ಟಿಗೆ ಹಾಕಿಲ್ಲ, ಕೋರ್ಟ್ ವಿಚಾರಣೆ ಹಾಗೂ ತೀರ್ಪೆಂಬುದಂತೂ ಇನ್ನೂ ದೂರದ ಮಾತಾಯಿತು. ವಸ್ತು ಸ್ಥಿತಿ ಹೀಗಿದ್ದಾಗಲೂ ಸಂಘ ಪರಿವಾರ ತಾನೇ ಪೊಲೀಸು-ಕೋರ್ಟು

ಈಶ

ಎಲ್ಲಾ ಆಗಿ ಕಾಶ್ಮೀರಿಗಳೆಲ್ಲಾ ದುಷ್ಟರೆಂಬಂತೆ ತೀರ್ಪು ನೀಡಿಬಿಟ್ಟಿದ್ದಾರೆ.


"ಕಾಶ್ಮೀರಿಗಳನ್ನು ಓಡಿಸಿ ಹಂಪೆ ಉಳಿಸಿ" ಎಂಬ ಕಾನೂನುಬಾಹಿರ ದೊಂಬಿ ಚಾಲೂ ಮಾಡಿದ್ದಾರೆ. ಭಜರಂಗಿಗಳ ಈ ಕಿರುಕುಳ ಒಂದೆಡೆಯಾದರೆ ಮತ್ತೊಂದೆಡೆ ಪೊಲೀಸರು 'ನಾವು ಅನುಮತಿ ಕೊಡುವವರೆಗೂ ನೀವ್ಯಾರು ಊರು ಬಿಟ್ಟು ಹೋಗುವಂತಿಲ್ಲ, ನಿತ್ಯ ಠಾಣೆಗೆ ಬಂದು ಸಹಿ ಮಾಡಿ ಹೋಗಿ' ಎಂದು ತಾಕೀತು ಮಾಡಿಬಿಟ್ಟಿದ್ದಾರೆ.

ಹಾಗಾದರೆ ಈ ಕಾಶ್ಮೀರಿಗಳೀಗ ಏನು ಮಾಡಬೇಕು? ಕಾಶ್ಮೀರದಲ್ಲೇ ಉಳಿಯುವುದಾದರೆ ಮಿಲಿಟೆಂಟ್ ಚಟುವಟಿಕೆಗಳ ಭೀತಿ, ಭಾರತೀಯ ಮಿಲಿಟರಿಯವರ ನಿತ್ಯ ದೌರ್ಜನ್ಯಕ್ಕೆ ಬಲಿಯಾಗುತ್ತಿರಬೇಕು. ಅದು ಬೇಡ ಎಂದು ಭಾರತದಲ್ಲೇ ಬೇರೆ ಪ್ರಾಂತ್ಯಕ್ಕೆ ಹೋಗಿ ನೆಲೆಸಿದರೆ ಹಿಂದೂತ್ವವಾದಿಗಳ ಕಾಟ.....! ಹಾಗಾದರೆ ಇವರೆಲ್ಲಾ ಕಾಶ್ಮೀರಿಗಳಾಗಿ ಹುಟ್ಟಿದ್ದೇ ತಪ್ಪಾ?

ಈ ಗದ್ದಲದ ನಡುವೆ ನಿರುದ್ಯೋಗಿ ಸಂಶೋಧಕ ಚಿದಾನಂದಮೂರ್ತಿ ಬೆಂಗಳೂರಿನಿಂದ ನೂರಾರು ಕಿಲೋಮೀಟರ್ ಪ್ರಯಾಣ ಮಾಡಿ ಹಂಪೆಗೆ ಹೋಗಿ "ಹಂಪೆ ಹಿಂದೂಗಳ ಪವಿತ್ರ ಭೂಮಿ, ಇಲ್ಲಿ ಮುಸ್ಲಿಮರಿರಕೂಡದು" ಎಂದು ಸ್ಥಳೀಯರ ಹತ್ತಿರ ಚಾಡಿ ಚುಚ್ಚುವ ಘನಂದಾರಿ ಕೆಲಸ ಮಾಡುತ್ತಿದ್ದಾರೆ.

'ಕೆಲಸವಿಲ್ಲದ ಬಡಗಿ ಮಾಡಿದಂತೆ!

ಹಂಪೆ ಸುತ್ತಮುತ್ತಲಿನ ಕಮಲಾಪುರ, ಕಡ್ಡೀ ರಾಂಪುರ ಗ್ರಾಮಗಳಲ್ಲಿರುವ ಮುಸ್ಲಿಮರೆಲ್ಲರನ್ನೂ ಭಯೋತ್ಪಾದಕರೆಂಬಂತೆ ಭಜರಂಗಿಗಳು ಕಿರುಚಿಕೊಳ್ಳುತ್ತಿದ್ದಾರೆ. ಅವರೆಲ್ಲರೂ ಪಾಕ್ ಏಜಂಟರು, ಇಮ್ರಾನ್‌ಗೆ ನೆರವಾದವರೆಂದೂ ತೀರ್ಮಾನ ಮಾಡಿಬಿಡಲಾಗಿದೆ. ರಾಜ್ಯ ಪೊಲೀಸರು ಈ ಪ್ರಕರಣದ ಸೂಕ್ಷ್ಮತೆಯನ್ನು ಈಗಲಾದರೂ ಅರ್ಥ ಮಾಡಿಕೊಳ್ಳಬೇಕಿದೆ. ಸಮಾಜಘಾತುಕ ಹಿಂದೂ ಫ್ಯಾಸಿಸ್ಟ್ ಸಂಘಟನೆಗಳು ಇಮ್ರಾನ್ ಬಂಧನವನ್ನೇ ನೆಪವಾಗಿರಿಸಿಕೊಂಡು ಇನ್ನುಳಿದ ಮುಸ್ಲಿಮರಿಗೆ ಕಿರುಕುಳ ನೀಡದಂತೆ ನೋಡಿಕೊಳ್ಳಬೇಕಿದೆ. ಇಷ್ಟಕ್ಕೂ ಈಗಾಗಲೇ ಮೂರು ಬಾರಿ ಮಂಪರು ಪರೀಕ್ಷೆಯ ನಂತರವೂ ಪೊಲೀಸರ ತನಿಖೆ ಮುಂದೆ ಸಾಗುತ್ತಿಲ್ಲ, ಏಕೆ ಎಂಬ ಪ್ರಶ್ನೆ ಕೇಳಲೇಬೇಕಿದೆ.


ಇಮ್ರಾನ್ ತಂದೆ ಶಂಶುದ್ದೀನ್

ಇಮ್ರಾನ್ ಪಾಕ್‌ಗೆ ಹೋಗಿದ್ದ


ಇಮ್ರಾನ್ ಜಲಾಲ್‌ಗೆ ಕಾಶ್ಮೀರದ ಅಥವಾ ಪಾಕ್ ಬೆಂಬಲವಿರುವ ಉಗ್ರಗಾಮಿಗಳ ಸಂಪರ್ಕ ಇತ್ತೀಚೆಗೆ


ಹಂಪೆಯಲ್ಲಿರುವ ಕಾಶ್ಮೀರಿಗಳು

ಇತ್ತೇ ಎಂಬುದು ಇನ್ನು ಮುಂದೆ ಗೊತ್ತಾಗಬೇಕಿದೆ. ಆದರೆ ಇದೇ ಇಮ್ರಾನ್ 1989 ರಲ್ಲೇ ಒಮ್ಮೆ ಗಡಿ ದಾಟಿ ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರಕ್ಕೆ ಹೋಗಿ 6 ತಿಂಗಳು ಇದ್ದು ಬಂದಿದ್ದನೆಂಬ ವಿಚಾರ ಈಗ ರಾಜ್ಯ ಪೊಲೀಸರಿಗೆ ಗೊತ್ತಾಗಿದೆ. ಕಾಶ್ಮೀರಿ ಪೊಲೀಸರಿಗೆ ಇದು 1994 ರಲ್ಲೇ ಗೊತ್ತಿತ್ತು. ಇದನ್ನು ಬಾರ್ಡರ್ ಸೆಕ್ಯುರಿಟಿ ಫೋರ್ಸಿನವರಿಗೆ ತಿಳಿಸಿದ್ದು ಬೇರ್‍ಯಾರೂ ಅಲ್ಲ ಸ್ವತಃ ಇಮ್ರಾನ್ ತಂದೆ ಶಂಸುದ್ದೀನ್!

ಜಮ್ಮು-ಕಾಶ್ಮೀರ್ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಶಂಸುದ್ದೀನ್‌ಗೆ ಮಗ ಇಮ್ರಾನ್ ಒಮ್ಮೆ ಅಕ್ರಮವಾಗಿ ಪಾಕ್‌ಗೆ ಹೋಗಿ ಬಂದಿದ್ದಾನೆನ್ನುವ ವಿಷಯ ಗೊತ್ತಾದೊಡನೆ ಬುದ್ಧಿವಾದ ಹೇಳಿ ಬೆಂಗಳೂರಿನ ಆಚಾರ್ಯ ಪಾಲಿಟೆಕ್ನಿಕ್‌ಗೆ ಓದಲು ಕಳಿಸಿದ್ದರು. ಕೆಲ ಸ್ವತಂತ್ರ ಕಾಶ್ಮೀರ್ ಪರವಿರುವ ಹೋರಾಟಗಾರರು ತಮ್ಮೊಡನೆ ಸೇರುವಂತೆ ಇಮ್ರಾನ್‌ನನ್ನು ಒತ್ತಾಯಿಸುತ್ತಿದ್ದರು. ಆದರೆ ಇಮ್ರಾನ್‌ಗೆ ಅದು ಬೇಕಿರಲಿಲ್ಲ ಎನ್ನುತ್ತಾರೆ ತಂದೆ ಶಂಸುದ್ದೀನ್. ಹಾಗಾಗಿ ಕಾಶ್ಮೀರದಲ್ಲಿ ಮಿಲಿಟರಿಯವರ ಹಾಗೂ ಉಗ್ರಗಾಮಿಗಳಿಬ್ಬರ ಕಿರುಕುಳಗಳಿಂದ ಪಾರಾಗಲು ಬೆಂಗಳೂರಿಗೆ ಬಂದ ಇಮ್ರಾನ್ ತನ್ನ ಓದು ಮುಗಿಸಿ ಮತ್ತೆ ಕಾಶ್ಮೀರಕ್ಕೆ ಮರಳಿದ್ದು 1994 ರಲ್ಲಿ. ಆಗಲೇ ಶಂಸುದ್ದೀನ್ ತನ್ನ ಮಗನ ಪೂರ್ವಾಪರಗಳನ್ನೆಲ್ಲಾ ಸ್ಥಳೀಯ ಪೊಲೀಸರಿಗೆ ಹೇಳಿರುತ್ತಾರೆ. ಮುಂದೆಂದೂ ತೊಂದರೆಯಾಗದಿರಲೆಂಬ ಕಾರಣಕ್ಕೆ ತಮಗೆ ಗೊತ್ತಿದ್ದನ್ನು ಪೊಲೀಸರಿಗೆ ತಿಳಿಸಿ, ಮಗನ ಬಾಳು ನೆಮ್ಮದಿಯಾಗಿರಲೆಂದು ತಂದೆ ಆಶಿಸಿದ್ದರು.

7.7.94 ರಂದು ಗಡಿ ದಾಟಿದ ಆರೋಪದ ಮೇಲೆ ಇಮ್ರಾನ್ ಅರೆಸ್ಟಾಗಿದ್ದ. 40 ದಿನಗಳ ಕಾಲ ವಿಚಾರಣೆ ನಡೆಸಿದ ಪೊಲೀಸರು ಅವನ ಬೆಂಗಳೂರು ಕಾಲೇಜಿನ ಅಟೆಂಡೆನ್ಸ್, ದಿನಚರಿ ಎಲ್ಲಾ ಚೆಕ್ ಮಾಡಿ ನಂತರ ಯಾವ ಆರೋಪವನ್ನು ಮಾಡದೆ ದಿನಾಂಕ 14.8.94 ರಲ್ಲೇ ರಿಲೀಸ್ ಮಾಡಿದ್ದರು.. ಅಲ್ಲಿನ ಜಿಲ್ಲಾಧಿಕಾರಿ ಹಾಗೂ ಮಿಲಿಟರಿ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆ ಸ್ಕ್ರೀನಿಂಗ್ ನಡೆಸಿ ಇಮ್ರಾನ್‌ನನ್ನು ರಿಲೀಸ್ ಮಾಡಿತ್ತು. ನಂತರ ಕಾಶ್ಮೀರದಲ್ಲೇ ಐಟಿಸಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ಇಮ್ರಾನ್ ತನ್ನ ಕೆಲವು ಸ್ನೇಹಿತರು, ಮಿಲಿಟೆಂಟ್ ಚಟುವಟಿಕೆಗಳಲ್ಲಿ ಸೇರುವಂತೆ ಒತ್ತಾಯಿಸುತ್ತಿದ್ದಾರೆಂದು ತಂದೆಗೆ ಹೇಳಿಕೊಂಡಾಗ ಗಾಭರಿಯಾದರು ಶಂಸುದ್ದೀನ್. ತನ್ನ ಬಂಧುಗಳಿದ್ದ ಹಂಪೆಯಲ್ಲೇ ಒಂದು ಅಂಗಡಿ ಖರೀದಿಸಿ ಇಮ್ರಾನ್‌ನನ್ನು ದೂರದ ಹಂಪೆಗೆ ಕಳಿಸಿದ್ದರು.


ಚಿದಾನಂದಮೂರ್ತಿ

ಅಲ್ಲಿಂದಾಚೆಗೆ ತನ್ನ ಪಾಡಿಗೆ ತಾನು ವ್ಯಾಪಾರ ಮಾಡಿಕೊಂಡಿದ್ದ ಇಮ್ರಾನ್ ಬಗ್ಗೆ ಸ್ಥಳೀಯರ್‍ಯಾರಿಗೂ ಅನುಮಾನ ಬಂದಿರಲಿಲ್ಲ. ಡಿಸೆಂಬರ್ 28 ರಂದು ಹೊಸಪೇಟೆಯ ತನ್ನ ಮನೆಯಲ್ಲೇ ಅರೆಸ್ಟ್ ಆಗಿದ್ದೂ ಯಾರಿಗೂ ಗೊತ್ತಾಗಿರಲಿಲ್ಲ. ಆದರೆ ಇದನ್ನೇ ಸಿಸಿಬಿ ಪೊಲೀಸರು ಜನವರಿ 5 ರಂದು ಬೆಳಗಿನ ಜಾವ ಬೆಂಗಳೂರಿನ ಹೊರವಲಯದಲ್ಲಿ ಪಾಕ್ ಭಯೋತ್ಪಾದಕನ ಬಂಧನವೆಂಬ ವೀರೋಚಿತ ಫ್ಯಾಂಟಮ್ ಕತೆ ಹೆಣೆದಿದ್ದಾರೆ. ಆಶ್ಚರ್ಯವೆಂದರೆ ಡಿಸೆಂಬರ್ 29 ರಂದು ಕಾಶ್ಮೀರಿ ಪೊಲೀಸರು ಶಂಸುದ್ದೀನ್ ಮನೆಗೆ ಹೋಗಿ ಇಮ್ರಾನ್ ಬಗ್ಗೆ ಕೂಲಂಕಶವಾಗಿ ವಿಚಾರಿಸಿ ಬಂದಿದ್ದರು. ಅಂದರೆ ಅವರಿಗೆ ಇಮ್ರಾನ್ ಡಿಸೆಂಬರ್ 28 ರಂದೇ ಅರೆಸ್ಟಾಗಿದ್ದು ಗೊ[...] ಎಂದಾಯಿತಲ್ಲವೆ! ಒಂದು ವೇಳೆ ಇಮ್ರಾನ್‌ಗೆ ನಿಜ[...] ಉಗ್ರರ ಜೊತೆ ಸಂಪರ್ಕಗಳಿದ್ದು, ಬೆಂಗಳೂ[...] ಐಐಎಸ್‌ಸಿ ದಾಳಿಯಲ್ಲಿ ಅವನ ಕೈವಾಡವಿದ್ದರೆ, ಸ[...] ಸಾಕ್ಷ್ಯಾಧಾರಗಳು ಸಿಕ್ಕರೆ ಕೋರ್ಟಿ[...] ಶಿಕ್ಷೆಯಾಗುವುದು ಖಚಿತ. ಆ[...] ಮುಸ್ಲಿಂ ದ್ವೇಷವನ್ನೇ ಕಸುಬು ಮ[...] ಕೊಂಡಿರುವ ಸಂಘ ಪರಿವಾರದ[...] ಇದರಲ್ಲಿ ತಲೆ ಹಾಕದಂತೆ ಪೊಲೀ[...] ನೋಡಿಕೊಳ್ಳಬೇಕಿದೆ.

ಪೊಲೀಸರು 'ಇಮ್ರಾನ್‌ಗೆ ಉ[...] ಸಂಪರ್ಕವಿದೆ' ಎಂದರೆ ಭಜರಂಗಿ[...] 'ಅಲ್ ಖೈದಾ ಲಿಂಕ್' ಎಂದು ತಿ[...]ತ್ತಾರೆ, ಇಮ್ರಾನ್ ಹಂಪೆಯ[...] ಎಂಬುದನ್ನೇ ಬಳಸಿಕೊಂಡು ಅಲ್ಲಿ[...] ಮುಸ್ಲಿಮರೆಲ್ಲಾ ಭಯೋತ್ಪಾದಕರೆ[...] ಸಂಘ ಪರಿವಾರ ಅಪಪ್ರಚಾರ [...] ಮಾಡುತ್ತಿದೆ. ಪೊಲೀಸರು ತಮ್ಮ ಪೊಲೀಸ್ ದ[...] ಮಾಡಲಿ ಆದರೆ ಭಜರಂಗಿಗಳು social polic[...] ಮಾಡಲು ಅವರಿಗೆ ಅಧಿಕಾರ ಕೊಟ್ಟವರ್‍ಯಾರು?

ನಾಟಕೀಯ ಬಂಧನ ಏಕೆ?

ಜನವರಿ 5ರ ಬೆಳಿಗ್ಗೆ ಇಮ್ರಾನ್ ಅರೆಸ್ಟ್ ಆಗ[...] ಎಂಬುದು ಈಗ ನಾನಾ ಮೂಲಗಳಿಂದ ಖಚಿತಪ[...] ಡಿಸೆಂಬರ್ 29ರ ರಾತ್ರಿ ಕಾಶ್ಮೀರದ ತನ್ನ ಮ[...] ಫೋನ್ ಮಾಡಿದ್ದ ಇಮ್ರಾನ್ ಬಿಕ್ಕಿಬಿಕ್ಕಿ ಅತ್ತಿದ್ದ[...] ಆದರೆ ಅದಾಗಲೇ ಅರೆಸ್ಟ್ ಆಗಿದ್ದ ವಿಚಾರ ಹೇಳ[...] ಬಹುಶಃ ಪೊಲೀಸರು ಅವಕಾಶ ಕೊಟ್ಟಿರಲಿಲ್ಲ.

ಬೆಂಗಳೂರಿನ ಐಐಎಸ್‌ಸಿ ದಾಳಿಯ ರೂವಾ[...] ಇಮ್ರಾನ್ ಎಂಬುದಾಗಿ ಪೊಲೀಸರು ಹಾ[...] ಮೀಡಿಯಾಗಳು ಈಗಾಗಲೇ ತೀರ್ಪು ನೀಡಿಬಿಟ್[...] ಆದರೆ ಅದನ್ನು ಸಮರ್ಥಿಸುವ ಸಾಕ್ಷ್ಯಾಧಾರಗ[...] ಪೊಲೀಸರಿಗೆ ಇನ್ನೂ ಸಿಕ್ಕಿಲ್ಲ.... ಮೂರು ಬ[...] ಮಂಪರು ಪರೀಕ್ಷೆಯ ನಂತರವೂ! ಇದು ಹೀ[...] ಮುಂದುವರೆದರೆ ಇಮ್ರಾನ್‌ಗೂ ಮೂಲ್ಕಿ ರಫೀ[...] ಸ್ಥಿತಿ (ಎನ್‌ಕೌಂಟರ್) ಬಂದರೂ ಆಶ್ಚರ್ಯವಿಲ್ಲ.

ಇಷ್ಟೆಲ್ಲಾ ಆಗಿಯೂ ಉಳಿಯುವುದೂ ಮತ್ತ[...] ಪ್ರಶ್ನೆ...

ವಿಚಾರಣೆಗೆಂದು ಕರೆದೊಯ್ದು ತಮ್ಮ ವಶದ[...] ಇರಿಸಿಕೊಂಡಿದ್ದ ಇಮ್ರಾನ್‌ನನ್ನು ಸಿಸಿಬಿ ಪೊಲೀ[...] 'ಸಿನೀಮಿಯ ರೀತಿಯಲ್ಲಿ' ಮತ್ತೆ ಅರೆಸ್ಟ್ ಮಾಡಿದ್ದ[...] ಅದೂ AK-47 ಸಮೇತ!

ಬೆಳಗಾಂ ಸಮ್ಮೇಳನ ತಮಾಷೆಗಳು

ಹಾಲಿ ಕೋ-ಜಾ ಸರ್ಕಾರ ನಡೆಸುತ್ತಿರುವವರಿಗೆ ಒಂದು ಸಾಹಿತ್ಯ ಸಮ್ಮೇಳನ ನಡೆಸುವುದೆಂದರೆ ಅವರ ಪಾರ್ಟಿ ಕಾರ್ಯಕರ್ತರ ಮೀಟಿಂಗ್ ನಡೆಸಿದಷ್ಟೇ ಸಲೀಸೆಂಬ ಭಾವನೆ ಇರುವಂತಿದೆ. ಮುಂದಿನ ಫೆಬ್ರವರಿ 23, 24, 25 ರಂದು ಬೆಳಗಾಂನಲ್ಲಿ ಇವರು ನಡೆಸಲು ಹೊರಟಿರುವ 2 ನೇ ವಿಶ್ವ ಕನ್ನಡ ಸಮ್ಮೇಳನ ಈಗ ರಾಡಿಯಾಗಿ, ಗೊಂದಲದ ಗೂಡಾಗಿ ಹೋಗಿದೆ.

ಈಗಿನ ಕುಮಾರಸ್ವಾಮಿ-ಯಡಿಯೂರಪ್ಪನ ಸರ್ಕಾರಕ್ಕೆ ತಮ್ಮದೆಂದು ಹೇಳಿಕೊಳ್ಳಲು ಈಗ ಯಾವ ಸಾಧನೆಗಳೂ ಇಲ್ಲ. ಜೊತೆಗೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಚಡ್ಡಿಗಳಿಗೆ ಗೂಸಾ ಬೇರೆ ಬಿದ್ದು ಅವಮಾನವಾಗಿತ್ತಲ್ಲ, ಇವೆಲ್ಲಾ ನಷ್ಟಗಳನ್ನು ತುಂಬಿಕೊಳ್ಳಲೆಂದೇ ಈ ಹೊಸ ಅರ್ಜೆಂಟ್ ಸಮ್ಮೇಳನ ಏರ್ಪಾಡಾಗುತ್ತಿರು ವಂತಿದೆ. ಈ ಜಾತ್ರೆಗಾಗಿ ಸರ್ಕಾರ ಅನಾಮತ್ತು 17 ಕೋಟಿ ರೂಪಾಯಿ ಖರ್ಚು ಮಾಡಲು ಮುಂದಾಗಿದೆ. ಬೆಳಗಾವಿ ನಮ್ಮದೇ ಎಂದು ಮತ್ತೆ ದೃಢವಾಗಿ ಹೇಳಲು ಅಲ್ಲಿ ಒಮ್ಮೆ ವಿಧಾನಸಭಾ ಅಧಿವೇಶನ ನಡೆಸಲಾಗಿದೆ. ಈಗ ಅಲ್ಲೇ ಇನ್ನೊಂದು ವಿಧಾನಸೌಧ ನಿರ್ಮಿಸುವ ಸಿದ್ಧತೆಯೂ ಆಗುತ್ತಿದೆ. ಇದಕ್ಕೆ ಪೂರಕವಾಗಿ ಈಗ ವಿಶ್ವ ಕನ್ನಡ ಸಮ್ಮೇಳನದ ತಯಾರಿ ನಡೆದಿದೆ.


ಬಸವರಾಜ್ ಕಲ್ಗುಡಿ

ಇದೆಲ್ಲಾ ಏನೇ ನಡೆಯಲಿ ಆದರೆ ನಮ್ಮ ಕನ್ನಡ ಸಾಹಿತಿಗಳು ಹೇಗಿರುತ್ತಾರೆ ಎನ್ನಲು ಕೆಲ ವಿಚಿತ್ರಗಳನ್ನು ಇಲ್ಲಿ ವಿವರಿಸಿದೆ.

ಸುವರ್ಣ ಕರ್ನಾಟಕ ಆಚರಣೆ ನಿಮಿತ್ತ ನಡೆಯುತ್ತಿರುವ ಈ ಸಮ್ಮೇಳನದ ಸಂದರ್ಭದಲ್ಲೇ 105 ಪ್ರಮುಖ ಕೃತಿಗಳ ಪುನರ್ ಮುದ್ರಣ ಮಾಡಲಾಗುತ್ತಿದೆ. ಅದಕ್ಕಾಗಿ ಒಂದು ಸಮಿತಿಯನ್ನೇ ರಚಿಸಲಾಗಿದೆ. ಆಶ್ಚರ್ಯವೇನೆಂದರೆ ಈ ಸಮಿತಿಯ ಸದಸ್ಯರಾಗಿರುವ ಬಹುತೇಕರು ತಮ್ಮ ಪುಸ್ತಕಗಳನ್ನೇ ರೆಕಮೆಂಡ್ ಮಾಡಿಕೊಂಡಿರುವುದು! ಕೆಲವರು ಇನ್ನೂ ಮುಂದೆ ಹೋಗಿ ತಮ್ಮ ಹೆಂಡತಿ, ತಮ್ಮ ಭಾಮೈದರ ಹೆಸರಿನಲ್ಲೂ ಒಂದೊಂದು ಪುಸ್ತಕ ಪ್ರಿಂಟಿಸಲು ಅವಕಾಶ ಕೊಡಿಸಿಬಿಟ್ಟಿದ್ದಾರೆ. ಪ್ರತಿ ಪುಸ್ತಕಕ್ಕೆ 20 ಸಾವಿರ ರೂ. ಸಂಭಾವನೆ ಹಂಚುವಂತೆ ವ್ಯವಸ್ಥೆಯೂ ಆಗಿದೆ. ಬೆಂಗಳೂರು ವಿ.ವಿ.ಯ ಕನ್ನಡ ವಿಭಾಗದ ಡಾ. ಬಸವರಾಜ ಕಲ್ಗುಡಿಯವರು 'ವಿಚಾರ ಸಾಹಿತ್ಯ ಸಂಕಲನ' ಎಡಿಟ್ ಮಾಡುತ್ತಿದ್ದಾರೆ, ಜೊತೆಗೆ ಅವರ ಪತ್ನಿ ಎಚ್.ಟಿ. ಶಿವಲೀಲಾ ಎಂಬುವರೂ ಒಂದು ಪುಸ್ತಕದ ಸಂಪಾದಕಿ!!

ಕಲ್ಗುಡಿಯೇನೋ ವಿದ್ವಾಂಸರು, ಬರೆಯಲಿ ಎನ್ನಬಹುದು. ಆದರೆ ಅವರ ಪತ್ನಿ ಅಸಲಿಗೆ ಬರಹಗಾರ್ತಿಯೇ ಅಲ್ಲ, ಬಹುಶಃ ಅದಕ್ಕೇ ಇರಬಹುದು ಶಿವಲೀಲಾಗೆ 'ಆಹಾರ ಪೋಷಣೆಯ ಪರಿಚಯ' ಎಂಬ ಅಡುಗೆ ಸಾಹಿತ್ಯ ಬರೆಯುವ ಜವಾಬ್ದಾರಿ ವಹಿಸಲಾಗಿದೆ.

ಅಂದರೆ ಇಪ್ಪತ್ತು+ಇಪ್ಪತ್ತು=ನಲವತ್ತು ಸಾವಿರ ರೂ, ಕಲ್ಗುಡಿ ದಂಪತಿಗಳಿಗೆ ಬಂದಂತಾಗಲಿಲ್ಲವೆ.

ಇಂತಹ ದಂಪತಿ-ಸಾಹಿತಿಗಳ ಇನ್ನೂ ಹತ್ತಾರು ಹೆಸರುಗಳು ಕೇಳಿಬರುತ್ತಿವೆ. ಸಮ್ಮೇಳನಕ್ಕೆ ಇನ್ನೂ ಒಂದೇ ತಿಂಗಳು ಬಾಕಿ ಇರುವುದರಿಂದ ಎಲ್ಲಾ ಕೆಲಸಗಳಿಗೂ ಅರ್ಜೆಂಟರ್ಜೆಂಟಾಗಿ ತಯಾರಿ ನಡೆಯುತ್ತಿದೆ. ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಈಗ ಇವರದ್ದೇ ನಿತ್ಯ ಮೀಟಿಂಗ್. ಜೋರಾಗಿ ಬಾಯಿ ಮಾಡುವವರದ್ದೇ ಅಲ್ಲಿ ರಾಜ್ಯಭಾರ. ಇಂತದ್ದೇ ಒಂದು ಪೂರ್ವಸಿದ್ಧತಾ ಮೀಟಿಂಗ್‌ನಲ್ಲಿ ಆಹ್ವಾನಿತ ಸಾಹಿತಿಯೊಬ್ಬ ಆರು ಪುಟಗಳ ಲಿಸ್ಟ್ ಒಂದನ್ನು ತಂದಿದ್ದನಂತೆ. ಈತ ಎಷ್ಟು ಚೆನ್ನಾಗಿ ಪ್ರಿಪೇರ್ ಆಗಿ ಬಂದಿದ್ದಾನೆಂದು ಖುಷಿಯಿಂದ ಇಲಾಖಾ ನಿರ್ದೇಶಕ ವಿಠಲಮೂರ್ತಿ 'ನಿಮ್ಮ ಸಲಹೆ ಏನು ಓದಿ ಹೇಳಿ' ಅಂದಿದ್ದಾರೆ. ಕೂಡಲೆ ಎದ್ದು ನಿಂತು ಆತ ಓದಿದ್ದು ಯಾರ್‍ಯಾರಿಗೆ ಪ್ರಶಸ್ತಿ ಕೊಡಬೇಕೆಂಬ ಪಟ್ಟಿ!

ಪುಸ್ತಕದ್ದೇ ಇನ್ನೊಂದಿಷ್ಟು ರಗಳೆ ಹೇಳಬೇಕೆಂದರೆ ಸರಿಯಾಗಿ ಪ್ರೂಫ್ ಕೂಡ ನೋಡದೇ ಎಷ್ಟೋ ಪುಸ್ತಕಗಳು ಪ್ರಿಂಟ್ ಆಗಿ ಬಿಟ್ಟಿವೆ. ಅಂತಹ ತಮ್ಮ ಪುಸಕ್ತಗಳತ್ತ ಒಮ್ಮೆ ಕಣ್ಣು ಹಾಯಿಸಿದ ಸಾಹಿತಿಗಳು ರಾಶಿ ರಾಶಿ ಮುದ್ರಣ ದೋಷ ನೋಡಿ ಕಂಗಾಲಾಗಿ ತಾವೇ ಮತ್ತೊಮ್ಮೆ ಕರಡು ತಿದ್ದಲು ಕುಳಿತಿದ್ದಾರೆ. ಬಸವರಾಜ ಕಲ್ಗುಡಿ, ನಿರುದ್ಯೋಗಿ ಚಡ್ಡಿ ಸಂಶೋಧಕ ಚಿದಾನಂದ ಮೂರ್ತಿ ಇವರೇ ಆ ಮಹಾನುಭಾವರು.

ಈ ಸಮ್ಮೇಳನ ನಡೆಯುತ್ತಿರುವುದು ಬೆಳಗಾವಿಯಲ್ಲಾದರೆ ಸಂಬಂಧಿಸಿದ ಸಭೆಗಳೆಲ್ಲಾ ಬೆಂಗಳೂರಿ[...] ಆಗುತ್ತಿವೆ. ಬೆಳಗಾವಿ ಜಿಲ್ಲಾಡಳಿತದ್ದೇನಿದ್ದರೂ ಸೌಕ[...] ಕಲ್ಪಿಸುವ ಕೆಲಸ ಮಾತ್ರ. ಅದಕ್ಕಾಗಿ ಸರ್ಕಾರ 5 ಕೋ[...] ಹಣ ನೀಡಿದೆ. ಬೆಳಗಾವಿ ಡಿವಿಸಿ ಅಮಿತಾ ಪ್ರ[...] ಹಾಗೂ ಡಿಸಿ ಶಾಲಿನಿ ರಜನೀಶ್ ಬರೀ ಆಫೀಸರ್‌ಗ[...] ಸೇರಿಸಿಕೊಂಡು ರಹಸ್ಯ ಸಭೆ ರೀತಿ ಏನೇನೋ [...] ಗಂಟೆ ಮಾತಾಡುತ್ತಿರುತ್ತಾರೆ. ಜನಪ್ರತಿ ನಿಧಿಗಳಿಗಾ[...] ಸಾಹಿತಿ-ಪತ್ರಕರ್ತರಿಗೆ ಏನು ತಯಾರಿ ನಡೆದಿದೆ [...] ಬಗ್ಗೆ ಕಿಂಚಿತ್ತೂ ಸುಳಿವು ಸಿಗದಂತೆ ಈ ಕೆಲಸಗಳಾಗು[...]

ಇವತ್ತು ಓಸಿ-ಮಟ್ಕಾ [...] ಅಕ್ರಮ ದಂಧೆಗಳೇ ಪ[...] ಆಗಿ ನಡೆಯುತ್ತಿರುವಾಗ ಕನ್ನಡ ಸಮ್ಮೇಳನದ ಬೆಳಗಾವಿ ಜಿಲ್ಲಾಡಳಿತ ಗ[...] ಮಾಡುತ್ತಿರುವುದೇ ತಮ[...]

ಅಂದಹಾಗೆ ಈ ವಿಶ್ವ[...] ಸಮ್ಮೇಳನದ ವಿ[...] ಆಕರ್ಷಣೆಗಾಗಿ ನಟಿ ಐಶ್ವ[...]ರ್ಯಳನ್ನು ಕರೆಸುವ ಮಾತು ಕೇಳಿಬರುತ್ತಿದೆ. ನೆಟ್ಟಗೆ [...] ಮಾತಾಡಲಿಕ್ಕೂ ಬಾರದ ರೈ ಅಲ್ಲಿಗೆ ಬಂದು [...] ಕಡಿದು ಕಟ್ಟೆ ಹಾಕಲು ಸಾಧ್ಯ? ಅಕಸ್ಮಾತ್ ರೈ ಬೆಳಗಾ[...] ಬಂದರೆ ಅವಳು ಯಾವ ಮನೆಯಲ್ಲಿ ಉಳಿಯಬೇ[...] ಬಗ್ಗೆ ಡಿಸಿ ಶಾಲಿನಿ, ಶಾಸಕ ನಾಡಗೌಡ, ಸಂಸದ ಸುರ[...] ಅಂಗಡಿ ಬೀದಿ ಜಗಳಕ್ಕಿಳಿದಿರುವುದಂತೂ [...] ತಮಾಷೆಯಾಗಿದೆ.


ಗಾತ್ರದ ವಿರುದ್ಧ ಗುಣದ ಹೋರಾಟ



ಪ್ರಗತಿಪರರ ಸಂಯಮದ ಹೋರಾಟ

'ಗುಣದ ವಿರುದ್ಧ ಶತ್ರು ಗಾತ್ರವನ್ನು ತೋರಿಸುತ್ತಾನೆ' ಎಂದು ಜನತೆಯ ಸಂಗಾತಿಯೊಬ್ಬರು ಹೇಳುತ್ತಾರೆ. ಇದು 27 ರಂದು ದಾವಣಗೆರೆಯಲ್ಲಿ ವಿರಾಟ ಹಿಂದೂ ಸಮಾಜೋತ್ಸವವನ್ನು ನಡೆಸಲು ಸಂಘ ಪರಿವಾರಿಗಳು 'ಸುಟ್ಟಹೆವು, ಮೆಟ್ಟಹೆವು ದುರುಳ ದೈತ್ಯರನು.... ಹಿಂದೂ ಧರ್ಮ ಪ್ರತಿಷ್ಠಾಯ ಸಿದ್ಧ ಖಡ್ಗ ಸದಾವಯಂ' ಎಂಬಂತಹ ಉದ್ರೇಕಕಾರಿ ಘೋಷಣೆಗಳೊಂದಿಗೆ, 'ಎಲ್ಲಾ ಮರೆತು ಬನ್ನಿ ನಾವೆಲ್ಲರೂ ಸಮಾನ' ಎಂಬ ಹಸಿ ಸುಳ್ಳಿನ ಘೋಷಣೆಗಳ ಬ್ಯಾನರ್‌ಗಳು, ಬಾವುಟ ಮತ್ತು ಬಂಟಿಂಗ್ಸ್‌ಗಳಿಗಾಗಿ ಹಲವು ಲಕ್ಷಗಳನ್ನು ಖರ್ಚು ಮಾಡಿ ದಾವಣಗೆರೆ ನಗರ ಹಾಗೂ ಹಳ್ಳಿಗಳಲ್ಲೂ ಇವುಗಳನ್ನು ಕಟ್ಟಿ ಜನತೆಯಲ್ಲಿ ಭಯಭೀತ ವಾತಾವರಣವನ್ನು ಸೃಷ್ಟಿಸಿ ಈ ಸಮಾಜೋತ್ಸವಕ್ಕೆ ಒಂದು ಲಕ್ಷ ಜನರು ಭಾಗವಹಿಸುತ್ತಾರೆ ಎಂದು ಹೇಳಿ ತಮ್ಮ ಗಾತ್ರದ ಬಗ್ಗೆ ಕೊಚ್ಚಿಕೊಂಡಿದ್ದರು. ಆದರೆ-

ದಾವಣಗೆರೆಯ ಪ್ರಗತಿಪರ ಸಂಘಟನೆಗಳ ಹೋರಾಟ ಒಕ್ಕೂಟದ ಅಡಿಯಲ್ಲಿ ದಿ. **26.1.2007** ರಂದೇ ವಿರಾಟ ಹಿಂದೂ ಸಮಾಜೋತ್ಸವದ ವಿರೂಪವನ್ನು ಬಯಲಿಗೆಳೆಯಲು ಮತ್ತದರ ವಿರುದ್ಧವಾಗಿ ಹೋರಾಟವನ್ನು ರೂಪಿಸಲು ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ದಲಿತ ಸಂಘರ್ಷ ಸಮಿತಿ (ಕೃಷ್ಣಪ್ಪ ಸ್ಥಾಪಿತ), ಬಹುಜನ ಸಮಾಜ ಪಕ್ಷ, ಎಸ್‌ಎಫ್‌ಐ, ಗುರಿ ಸಂಸ್ಥೆ ಸಂಘಟನೆಗಳು ಕೋಮುವಾದಿಗಳ ಗಾತ್ರದ ವಿರುದ್ಧ ಗುಣವನ್ನು ಪ್ರದರ್ಶಿಸಲು ಮುಂದಾಗಿದ್ದವು.



ಕಟೌಟುಗಳಲ್ಲಿ ಸಂಘಿಗಳ ಹುಚ್ಚು ಆರ್ಭಟ

ಆದರೆ ಈ ಹೋರಾಟದಲ್ಲಿ 'ಸಮಾಜವಾದಿ ಪಕ್ಷ' ನೇರವಾಗಿ ಭಾಗವಹಿಸುತ್ತದೆಂದು ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರೆಲ್ಲರ ಮುಂದೆ ಈ ಪಕ್ಷದ ನಾಯಕ ಅದ್ಯಾವ ಯಕ್ಕಡದ ನಾಲಿಗೆಯಿಂದ ಹೇಳಿಕೆ ನೀಡಿದ್ದನೋ ಗೊತ್ತಿಲ್ಲ. ಕೊನೆಯ ಹಂತದಲ್ಲಿ 'ಈ ಹೋರಾಟಕ್ಕೆ ಬೆಂಬಲಿಸುವುದಿಲ್ಲ, ವಿರಾಟ ಸಮಾವೇಶ ಶಾಂತಿಯುತವಾಗಿ ನಡೆಯಲಿ' ಎಂದು ಪತ್ರಿಕಾ ಹೇಳಿಕೆ ನೀಡಿ ಹಿಂದೆ ಸರಿದಿದ್ದ. ಹೋರಾಟದಲ್ಲಿ ಭಾಗವಹಿಸುತ್ತೇವೆಂದು ಕರಪತ್ರದಲ್ಲಿ ಹೆಸರು ಹಾಕಿಕೊಳ್ಳಲು ಸೂಚಿಸಿದ್ದ ಇತರೆ ಮೂರು ಸಂಘಟನೆಗಳು ಇದೇ ದಾರಿಯನ್ನು ಹಿಡಿದಿದ್ದವು.

ಕನ್ನಡಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳು ಹಿಂದೂ ವಿರಾಟ ಸಮಾಜೋತ್ಸವಕ್ಕೆ ಶುಭಕೋರಿ ಬ್ಯಾನರ್‌ಗಳನ್ನು ಹಾಕಿದ್ದವು. ಜನತಾವಾಣಿ ಪತ್ರಿಕೆಯ ಸಂಪಾದಕ ಷಡಾಕ್ಷರಪ್ಪ ಸ್ವಾಗತ ಸಮಿತಿಯ ಉಪಾಧ್ಯಕ್ಷರುಗಳ ಪಟ್ಟಿಯಲ್ಲಿದ್ದರೆ, ಉದಯ ಟಿವಿ ಹಾಗೂ ನಗರವಾಣಿ ದಿನಪತ್ರಿಕೆ ವರದಿಗಾರ ಬಿ.ಎನ್. ಮಲ್ಲೇಶ ಸ್ವಾಗತ ಸಮಿತಿಯ ಸದಸ್ಯನಾಗಿದ್ದ. ಎಲ್ಲರೂ ಗ್ರಹಿಸಿದ್ದಂತೆ ಕನ್ನಡಪ್ರಭ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳು ಹಿಂದೂ ವಿರಾಟ ಸಮಾಜೋತ್ಸವವೆಂಬ ಜನ ವಿರೋಧಿ ಜಾತ್ರೆಗೆ ಇನ್ನಿಲ್ಲದ ಪ್ರಚಾರ ನೀಡಿದವು. ಆದರೆ ಪ್ರಜಾವಾಣಿ ಪತ್ರಿಕೆ ಮಾತ್ರ ವಸ್ತುನಿಷ್ಠತೆಯಿಂದ ವರ್ತಿಸಿತ್ತು.

ವಿಷಾದವೆಂದರೆ ಬಸವಣ್ಣನವರ ತತ್ವಗಳನ್ನು ಒಪ್ಪಿಕೊಂಡಿದ್ದೇವೆಂದು ಹೇಳಿಕೊಳ್ಳುವ ಐದು ಮಂದಿ ಅವೈದಿಕ ಮಠಗಳ ಮಠಾಧೀಶರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಒಕ್ಕೂಟದ ವತಿಯಿಂದ ಹೋರಾಟದ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದ ದಿನ ದಂದೇ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಉದ್ರೇಕಕಾರಿ ಬ್ಯಾನರ್‌ಗಳನ್ನು ತೆಗೆಸಿಹಾಕಲು ಮನವಿ ನೀಡಲಾಗಿತ್ತಾದರೂ ಕೆಲವು ಬ್ಯಾನರ್‌ಗಳನ್ನು ಮಾತ್ರ ತೆಗೆಸಿ ಉಳಿದವನ್ನು ಹಾಗೇ ಬಿಡಲಾಗಿತ್ತು.

ವಿರಾಟ ಹಿಂದೂ ಸಮಾಜೋತ್ಸವದ ವಿರುದ್ಧದ ಹೋರಾಟದಲ್ಲಿ ಭಾಗವಹಿಸಬಾರದೆಂಬ ಒತ್ತಡಗಳು ಬೆದರಿಕೆಗಳಿದ್ದಾಗ್ಯೂ ವಿವಿಧ ಸಂಘಟನೆಗಳ ನಾಯಕರುಗಳಾದ ಆಲೂರು ನಿಂಗರಾಜ್, ಸೀಟಿ, ವಿನಾಯಕ ಪೂಜಾರ್, ಹರೀಶ್, ಅಸ್ಗರ್ ಹಾಗೂ ಉಷಾ ಕೈಲಾಸದ್‌ರವರ ನೇತೃತ್ವದಲ್ಲಿ ದಿ. **26.1.2007** ರಂದು ಸೌಹಾರ್ದ ನಡಿಗೆ ಕಾರ್ಯಕ್ರಮವು ಅಂಬೇಡ್ಕರ್ ಹಾಗೂ ಕುವೆಂಪುರವರ ಘೋಷಣೆಗಳೊಂದಿಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಇದರಲ್ಲಿ ಭಾಗವಹಿಸಿದ್ದ ಜನರು ಕಡಿಮೆ ಇದ್ದರೂ ಕೂಡ ಸಂಘ ಪರಿವಾರದ ಗಾತ್ರದ ವಿರುದ್ಧ ಗುಣಾತ್ಮಕವಾಗಿ ಗೆದ್ದು, ಹಿಂದೂಗಳೆಲ್ಲಾ ಸಮಾನರೆಂದಾದರೆ ದಲಿತರನ್ನು ಶೃಂಗೇರಿ ಮಠದ ಪೂಜಾರಿಗಳನ್ನಾಗಿ ನೇಮಿಸುತ್ತೇವೆಂದು ಘೋಷಿಸಬೇಕು, ಕಂಬಾಲಪಲ್ಲಿ ದಲಿತರ ಹತ್ಯೆ ಕೇಸನ್ನು ಪುನರ್ ಪರಿಶೀಲನೆಗೆ ಕೈಗೆತ್ತಿಕೊಳ್ಳುತ್ತೇವೆಂದು ಘೋಷಿಸಬೇಕು, ಜಾತಿ ವಿನಾಶದ ಕುರಿತು ಕನಿಷ್ಠ ಯೋಜನೆಯನ್ನು ಘೋಷಿಸಬೇಕೆಂಬ ಸವಾಲುಗಳನ್ನು ಸಂಘ ಪರಿವಾರದ ಮುಂದಿಟ್ಟರು.

ಹಿಂದೂ ವಿರಾಟ ಸಮಾಜೋತ್ಸವದಲ್ಲಿ ಒಂದು ಲಕ್ಷ ಜನರು ಭಾಗವಹಿಸುತ್ತಾರೆಂದು ಸಂಘ ಪರಿವಾರದ ನಾಯಕರು ಹೇಳಿದ್ದಾರಾದರೂ ಅವರು ಹೇಳಿಕೆ ನೀಡಿದ್ದ ಅರ್ಧದಷ್ಟಿರಲಿ, ಕಾಲುಭಾಗದಷ್ಟೂ ಜನರು ಸೇರಿರಲಿಲ್ಲ. **26**ರ ಕಾರ್ಯಕ್ರಮದಲ್ಲಿ ಹೋರಾಟ ಒಕ್ಕೂಟವು ಮುಂದಿಟ್ಟಿದ್ದ ಸವಾಲುಗಳನ್ನು ಸಂಘ ಪರಿವಾರದ ನಾಯಕರಿಗೆ ಸ್ವೀಕರಿಸಲು ಸಾಧ್ಯವಾಗದೆ ಗಾತ್ರದಲ್ಲಿ ದೊಡ್ಡವರಿದ್ದರೂ ಗುಣಾತ್ಮಕವಾಗಿ ಸೋತಿದ್ದರು.

-ಚಂದ್ರಶೇಖರ ತೋರಣಘಟ್ಟ

"ಮುಗಿಯದ ಚೆಡ್ಡಿಗಳ ವಿರಾಟ್ ಭಿಕ್ಷಾಟನೆ



ವಿರಾಟ್ ಹಿಂದೂಗಳೆಂದು ಹೇಳಿಕೊಂಡು ಸಭೆ ಮಾಡಿದ ಚೆಡ್ಡಿಗಳು ಸಭೆಗಳಿಗಿಂತ ಮೊದಲು ವಿರಾಟ್ ಭಿಕ್ಷಾಟನೆಯನ್ನು ಮಾಡಿದವಂತಲ್ಲಾ, ಪ್ರತಿಯೊಂದು ಮನೆ ಬಾಗಿಲಿಗೂ ಹೋಗಿ ಕದ ತಟ್ಟುವುದು, ಮನೆಯೊಡೆಯರು ಬಾಗಿಲಿಗೆ ಬಂದ ಕೂಡಲೆ ಪಾಚಿಗಟ್ಟಿದ ಹಲ್ಲು ಬಿರಿದು "ಕೇವಲ ಆರು ರೂಪಾಯಿ ಈ ಕೇಸರಿ ಬಾವುಟ. ಓಂ ನೋಡಿ ಎಷ್ಟು ಚೆನ್ನಾಗಿ ಪ್ರಿಂಟಾಗಿದೆ. ಇದನ್ನು ತೆಗೆದುಕೊಂಡು ಮನೆ ಮೇಲಕ್ಕೆ ಸಿಕ್ಕಿಸಿಕೊಳ್ಳಿ. ಇಲ್ಲ ನಿಮ್ಮ ವಾಹನಕ್ಕೆ ಸಿಗಿಸಿಕೊಳ್ಳಿ" ಎಂದು ಜೇಬಿನಿಂದ ನಾಲ್ಕು ರೂಪಾಯಿ ಚಿಲ್ಲರೆಯನ್ನು ತೆಗೆದು ಕೊಟ್ಟು ಪ್ರತಿಮನೆಯಿಂದ ಆರು ರೂಪಾಯಿ ವಸೂಲಿ ಮಾಡಿದವಂತಲ್ಲಾ. ಬೃಹತ್ ನಗರಗಳ ಪ್ರತಿಮನೆಯಿಂದ ಕೇವಲ ಆರು ರೂ. ಎಂದರೆ ಎಷ್ಟಾಯ್ತು? ಎಷ್ಟೇ ಆಗಲಿ, ಮಂಗಳಾರತಿ ತಟ್ಟೆ ಕಾಸಿನಿಂದಲೇ ಮುಂದೆ ಬಂದವರಲ್ಲವೆ ಇವರು? ಅದರ ರುಚಿ ಹಿಡಿದ ಚೆಡ್ಡಿಗಳು ಹಿಂದೆ ವಸೂಲಿ ಮಾಡಿದ ಶ್ರೀರಾಮ ಪಾದುಕೆ ಕಾಸು, ಜ್ಯೋತಿ ಹಣ, ಇಟ್ಟಿಗೆ ದುಡ್ಡು, ಯಾವ ವಸೂಲಿಗೂ ಲೆಕ್ಕ ಕೊಡಲಿಲ್ಲವಂತಲ್ಲಾ. ಈಗಲೂ ಕೂಡ ಆರು ರೂಪಾಯಿಗಳ ವಸೂಲಿ ಲೆಕ್ಕ ಯಾವ ಹಾರುವನ ಜೇಬಲ್ಲಿ ಉಳಿಯುತ್ತದೊ, ಏನೊ ಎಂದು ವಿಚಾರವಾದಿಗಳು ಶಾನೆ ಹೊಟ್ಟೆ ಕಿಚ್ಚಿನಿಂದ ನರಳಿದರಂತಲ್ಲಾ, ಥೂತ್ತೇರಿ!

* * * * * * *

ಚೆಡ್ಡಿಗಳ ಈ ಸುಲಿಗೆ ಸಂತೆಯ ಸಮಾರಂಭಗಳಲ್ಲಿ ವಿಶ್ವಮಾನವ ಸಂದೇಶ ಸಾರಿದ್ದ, ಪುರೋಹಿತಶಾಹಿಗಳ ಹುಟ್ಟಡಗಿಸಬೇಕೆಂದು ಹೇಳಿದ್ದ ಕುವೆಂಪು ಅಳಿಯ ಚಿದಾನಂದಗೌಡನೆಂಬ ಮೂರ್ಖ, ಯಾವ ಎಗ್ಗೂ ಇಲ್ಲದೆ ಕೇಸರಿ ಚೆಡ್ಡಿ ತೊಟ್ಟು ಚೆಡ್ಡಿಗಳ ಸಭೆಗಳಲ್ಲಿ ಓಡಾಡುತ್ತಿದ್ದಾನಂತಲ್ಲಾ. ಈತನ ಓಡಾಟವನ್ನು ನೋಡಿದ ಹಳೆ ಚೆಡ್ಡಿಗಳು "ನಾವು ಕುವೆಂಪುಗೆ ಈಗಲಾದರೂ ಸರಿಯಾದ ಉತ್ತರ ಕೊಡಬೇಕಾದರೆ ಈ ಚಿದಾನಂದಗೌಡನನ್ನು ವಿರಾಟ್ ಚೆಡ್ಡಿಗಳ ಸಭೆಯಲ್ಲೇ ಕೂರಿಸಿಕೊಳ್ಳಬೇಕು" ಎಂದು ಸಂಚು ರೂಪಿಸಿ ಹಾಗೇ ಮಾಡಿದವಂತಲ್ಲಾ.





"ಕುವೆಂಪು ಯೂನಿವರ್ಸಿಟಿಯ ಉಪಕುಲಪತಿಯಾಗಿದ್ದ ಈ ಚಿದಾನಂದಗೌಡನಿಗಿಂತ ಗಜೇಂದ್ರಗಡನೆಂಬ ಸಾಬಿಯೇ ಪರವಾಗಿಲ್ಲ, ಆತ ಕುವೆಂಪು ವಿ.ವಿ. ಕುಲಪತಿಯಾಗಿದ್ದಾಗ ಮಸೀದಿಗೆ ಕಾಸು ಕೊಟ್ಟರೂ ಚಿದಾನಂದನಂತೆ ಚೆಡ್ಡಿ ತೊಟ್ಟರಲಿಲ್ಲ" ಎಂದು ಕುವೆಂಪು ವಿ.ವಿ.ಯ ವಿಚಾರವಾದಿಗಳು ಯಾರಿಗೂ ಕೇಳದಂತೆ ಮಾತನಾಡಿಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!!

* * * * * * *

ಕರ್ನಾಟಕ ಸರ್ಕಾರದ ಮಂತ್ರಿ ಮಂಡಲದ ವಿಸ್ತರಣೆ ಮತ್ತೆ ಜೋಡೆತ್ತಿನಂತಹ ಪ್ರಬಲ ಕೋಮಿನ ಪಾಲಾಗಿದೆಯಂತಲ್ಲಾ, ಚೆನ್ನಮ್ಮನನ್ನು ಕೇವಲ ಮಕ್ಕಳಿರುವ ಯಂತ್ರ ಮಾಡಿಕೊಂಡಿದ್ದ ದೇವೇಗೌಡರು, ಅದೇ ಸಿದ್ಧಾಂತವನ್ನು ತನ್ನ ಪಾರ್ಟಿಯಲ್ಲೂ ಪ್ರತಿಪಾದಿಸಿ, ಕೇವಲ ಹೊರೆ ಹೊರುವ ಕೆಲಸಕ್ಕೆ ಮಹಿಳೆಯನ್ನು ಬಳಸಿಕೊಂಡು ಫಲವನ್ನೆಲ್ಲಾ ಗಂಡಸರಿಗೇ ಬಡಿಸಿದ್ದಾರಲ್ಲ, ಹೀಗೆ ಮಾಡಿರುವುದರಲ್ಲಿ ಯಾವ ಸಂಕೋಚ, ನಾಚಿಕೆ, ಮಾನ, ಮರ್ಯಾದೆಗಳನ್ನು ಲೆಕ್ಕಿಸಿಲ್ಲವಂತಲ್ಲಾ, ಈ ನಡುವೆ ಮಂತ್ರಿ ಪದವಿ ಮನೆ ಬಾಗಿಲಿಗೆ ಬರುತ್ತದೆಂದು ಒಳಮನಸ್ಸಿನಲ್ಲೇ ಲೆಕ್ಕ ಹಾಕಿದ್ದ ಮಹಿಮಾ ಪಟೇಲ್ ದಿಲ್ಲಿಯ ಬಸ್ಸತ್ತಿ ಹೊರಟರಂತಲ್ಲಾ, "ಯಾಕ್ ಸಾರ್ ದಿಲ್ಲಿ ಕಡೆ ಹೊರಟಿರಿ?" ಎಂದರೆ "ಕುಮಾರಸ್ವಾಮಿ ಬಸ್ಸಿನಲ್ಲಿ ಸೀಟಿರಲಿಲ್ಲ, ಅದಕ್ಕೆ ದಿಲ್ಲಿ ಬಸ್ಸತ್ತಿದೆ" ಎಂದು ಮೌನದಲ್ಲೇ ಸನ್ನೆ ಮಾಡಿ ಧ್ಯಾನಸ್ಥರಾದರಂತಲ್ಲಾ, ಥೂತ್ತೇರಿ!!

* * * * * * *

"ಮಹಿಮಾ ಹೇಳಿಕೇಳಿ ಮುಖ್ಯಮಂತ್ರಿಯಾಗಿದ್ದವರ ಮಗ. ಅವನ ಅಪ್ಪನ ಋಣಭಾರದವರು ಆತನ ಹತ್ತಿರ ಹೋಗಬಹುದು. ಅದರಲ್ಲೂ ಲಿಂಗಾಯತರಿಗೆ ಹೋಗಿ ಮಾತನಾಡಲು ಒಂದು ಜಾಗಸಿಕ್ಕಂತಾಗಬಹುದು. ಆಗ ಅವರೆಲ್ಲಾ ಒಟ್ಟಾಗಬಹುದು" ಎಂಬ ನರಿಬುದ್ಧಿಯಿಂದ ಮಹಿಮಾನನ್ನು ಮಂತ್ರಿ ಮಾಡದೆ ದೆಹಲಿ ಟಿಕೆಟ್ ಕೊಟ್ಟಿರುವ ದೇವೇಗೌಡರ ಸಂಚಿನಲ್ಲಿ, ಕುಮಾರಣ್ಣನ ಸಂಪುಟದ ಪೂರ್ಣಯ್ಯನವರಾದ ಎಂ.ಪಿ. ಪ್ರಕಾಶರ ಕೈವಾಡವಿಲ್ಲವೆಂದು, ಮಲೈ ಮಹದೇಶ್ವರನ ಮೇಲೆ ಆಣೆ ಮಾಡಿ ಹೇಳುತ್ತಿರುವ ಮಹದೇವ ಪ್ರಸಾದ್ ಎಂಬ ಹೊಸ ಮಂತ್ರಿ, "ನನಗೆ ಕುಮಾರಣ್ಣನವರು ಯಾವ ಖಾತೆ ಕೊಟ್ಟರೂ ಸರಿ. ಅದನ್ನು ಪ್ರಸಾದವೆಂದೇ ಸ್ವೀಕರಿಸುತ್ತೇನೆ. ಅನುಭವದ ದೃಷ್ಟಿಯಿಂದ ನಾನು ನಜೀರ್ ಸಾಹೇಬರನ್ನು ಹತ್ತಿರದಿಂದ ನೋಡಿದ್ದೆ. ನಾಗರತ್ನಮ್ಮನನ್ನು ದೂರದಿಂದ ನೋಡಿದ್ದೆ. ಎಂ.ಪಿ. ಪ್ರಕಾಶರ ಹಿಂದೆಯೇ ಇರುತ್ತೇನೆ. ಇದಕ್ಕಿಂತ ಇನ್ನೇನು ಬೇಕು" ಎಂದರಂತಲ್ಲಾ, "ಯಾವ ಖಾತೆ ಕೊಟ್ಟರೂ ಸರಿ. ಅದನ್ನು ಗೌಡರ ಮನೆಯವರೇ ನಿರ್ದೇಶಿಸುವುದರಿಂದ ನಮಗಂತಹ ತೊಂದರೆಯೇ ಇಲ್ಲ" ಎಂದು ಮಾತ್ರ ಹೇಳಲಿಲ್ಲವಂತಲ್ಲಾ, ಥೂತ್ತೇರಿ!!!

-ಯಾಹೂ

ಸರ್ಕಾರಿ ಆದೇಶ ಲೆಕ್ಕಕಿಲ್ಲ

ಹೊಸನಗರ ಪಂಚಾಯತ್ ವಿಶೇಷತೆ

ಶಿವಮೊಗ್ಗ ಜಿಲ್ಲೆಯ ಹೊಸನಗರ ಪಟ್ಟಣ ಪಂಚಾಯತಿ ಯಲ್ಲಿ ಸರ್ಕಾರಿ ಆದೇಶ ಉಲ್ಲಂಘಿಸಿ ನಡೆಸಿರುವ ಬಸ್ ನಿಲ್ದಾಣ ಕಾಮಗಾರಿಯ ಅಕ್ರಮ ಟೆಂಡರ್ ಪ್ರಕರಣ ದಿನಕ್ಕೊಂದು ಹೊಸ ತಿರುವು ಪಡೆಯುತ್ತಾ ಭಾರೀ ವಿವಾದ ಸೃಷ್ಟಿಸಿದೆ.

6 ಸ್ಥಿರ ಪಂಚಾಯತ್ ಸದಸ್ಯರ ಭಾರೀ ವಿರೋಧದ ನಡುವೆಯೂ ಒಂದೂವರೆ ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗೆ ಮಾಜಿ ಅಧ್ಯಕ್ಷ ಸುಧಾಕರ್ ಮತ್ತು ಮುಖ್ಯಾಧಿಕಾರಿ ಮಂಜುನಾಥ್ ಅಕ್ರಮ ಟೆಂಡರ್ ನಡೆಸಿರುವುದನ್ನು ಸಾರ್ವಜನಿಕರು ಮುಸಿಮುಸಿ ಟೀಕಿಸುತ್ತಿದ್ದಾರೆ.

ಅಧಿಕಾರಾವಧಿ ಒಂದು ವಾರವಿರುವಾಗ ಕಡಿಮೆ ಮೊತ್ತಕ್ಕೆ ಟೆಂಡರ್ ಕರೆದು ನಿಲ್ದಾಣವನ್ನು ಒಡೆದು ಹಾಕಿಸಿದ್ದೂ ಅಲ್ಲದೇ, ಅಧಿಕಾರಾವಧಿ ಇನ್ನು ಮೂರು ದಿನಗಳಿರುವಾಗ ಕಮಿಷನ್ ಆಸೆಗೆ ಬಿದ್ದು ಅಕ್ರಮ ಟೆಂಡರ್ ನಡೆಸಿ, ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳು ಬಿಸಿಲಲ್ಲಿ ಬೇಯುವಂತೆ ಮಾಡಿದ ತಪ್ಪಿಗೆ ಸುಧಾಕರ್ ಮತ್ತು ಮಂಜುನಾಥ್‌ಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

2006 ರ ಡಿಸೆಂಬರ್ 14 ರಂದೇ ಸರ್ಕಾರದ ಸುತ್ತೋಲೆ 136 ರ ಅನ್ವಯ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು ಹಾಗೂ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು, ಸ್ಥಳೀಯ ಸಂಸ್ಥೆ ಅಧಿಕಾರ ಅವಧಿ ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪುರಸಭಾ ಕಾಯ್ದೆ 1964, 155 ಮತ್ತು 156 ರ ಅನ್ವಯ ಟೆಂಡರ್ ಪ್ರಕ್ರಿಯೆ ಪಾರದರ್ಶಕತೆ ಅನುಸರಿಸುವಂತೆ ಮತ್ತು ಆಯವ್ಯಯ ಅಂದಾಜಿಗೆ ಅನುಗುಣವಾಗಿ ಕ್ರಿಯಾ ಯೋಜನೆ ವೆಚ್ಚ ಭರಿಸುವಂತೆ ಸ್ಪಷ್ಟವಾಗಿ ಸೂಚಿಸಿತ್ತು.

ಆದರೂ ಸುಧಾಕರ್ ಮತ್ತು ಮಂಜುನಾಥ್ ಜೋಡಿ ಎಂತಹ ಅವಘಡ ಸೃಷ್ಟಿಸಿದ್ದಾರೆಂದರೆ, ಅಧಿಕಾರಾವಧಿಯಲ್ಲಿ ಪ್ರಾರಂಭಗೊಂಡ ಕಾಮಗಾರಿಗಳ್ಯಾವೂ ಪೂರ್ಣಗೊಳ್ಳದ ಸ್ಥಿತಿಯಲ್ಲಿದ್ದರೂ ಕಾನೂನು ಉಲ್ಲಂಘಿಸಿ ಇದ್ದ ಬಸ್ ನಿಲ್ದಾಣವನ್ನೂ ಒಡೆದು ಹಾಕಿ, ಟೆಂಡರ್‌ದಾರರಿಂದ ಭಕ್ಷೀಸು ಪಡೆದು ಅಕ್ರಮ ಟೆಂಡರ್ ನಡೆಸಿ, ಪ್ರಯಾಣಿಕರಿಗೆ ಬದಲೀ ವ್ಯವಸ್ಥೆಯನ್ನೂ ಮಾಡದೇ ಸಾರ್ವಜನಿಕರ ಧೀಮಾರಿಯನ್ನೇ ಶಹಭಾಷ್‌ಗಿರಿ ಎಂದು ಭಾವಿಸುತ್ತಿದ್ದಾರೆ!

ಹೊಸನಗರ ತಾಲ್ಲೂಕಿನಲ್ಲಿ ಇದೊಂದು ದೊಡ್ಡ ಸುದ್ದಿಯಾಗಿದ್ದರೂ ಇದರ ಬಗ್ಗೆ ಜಿಲ್ಲಾಧಿಕಾರಿಗಳಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲೀ ಏಕೆ ಗಮನ ಹರಿಸುತ್ತಿಲ್ಲ ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಎಲ್ಲೋ ದಲಿತರ ಭೂಮಿ ಕೊಳ್ಳೆಯಾದರೆ, ಇನ್ನೆಲ್ಲೋ ಸರ್ಕಾರಿ ಜಮೀನನ್ನು ನೆಲಗಳ್ಳನೊಬ್ಬ ನುಂಗಿದನೆಂದರೆ, ಇತ್ತ ಗಾಂಧಿನಗರದಲ್ಲಿ ಸಮೃದ್ಧ ಮುಂಗಾರು ಮಳೆ!

ಲ್ಯಾಂಡ್ ಮಾಫಿಯಾಗಳಿಗೀಗ ಗಾಂಧಿನಗರವೇ ಬಾತ್ಯಾಕಾತ ನೌಕೆ!

ಒಂದು ಅಂದಾಜಿನ ಪ್ರಕಾರ ಸರಿಸುಮಾರು ನೂರಿಪ್ಪತ್ತು ಕೋಟಿಯಷ್ಟು ನೆಲಗಳ್ಳರ ಕಪ್ಪು ಹಣ ಗಾಂಧಿನಗರಕ್ಕೆ ಹರಿದು ಬಂದಿದೆ. ಇತ್ತೀಚೆಗೆ ತೆರೆಕಂಡ ಅರ್ಧಕ್ಕರ್ಧದಷ್ಟು ಕನ್ನಡ ಚಿತ್ರಗಳೆಲ್ಲ ಸೃಷ್ಟಿಯಾಗಿದ್ದೇ ಇಂಥ ಕಪ್ಪು ಹಣದಿಂದ!

ವಿಷಯ ದುಡ್ಡಿನದಲ್ಲ, ಗಾಂಧಿನಗರದ ಸಿನಿಮಾ ಕಲ್ಚರ್ ಅದೆಷ್ಟು ಎಕ್ಕುಟ್ಟಿದೆ ಎಂಬುದು.

ನಟಿ ಮಾನ್ಯ ಬಿಕಿನಿ ತೊಟ್ಟು ಕುಣಿಯಲಿಲ್ಲ ಎಂದು ನಿರ್ಮಾಪಕ ಮೋಹನ್‌ದಾಸ್ ಪೈ ಬುಸುಗುಟ್ಟಿದ್ದು ದೊಡ್ಡ ಸುದ್ದಿಯಾಗುತ್ತದೆ. ನಟಿ ವಿಜಯಲಕ್ಷ್ಮಿ ಜಗ್ಗೇಶ್‌ಗೆ ಚಪ್ಪಲಿ ತೋರಿಸಿದ್ದು, ರಕ್ಷಕ ಶೂಟಿಂಗ್‌ನಲ್ಲಿ ಕೊಳ್ಳೆಗಾಲದ ಎಮ್ಮೆಲ್ಲೇ ಬಾಲರಾಜ್ ಗುಂಡು ಹಾರಿಸಿದ್ದು, ಕೀಚಕ ಶ್ರೀವತ್ಸ ತನ್ನ ಅಕ್ಕನಂಥ ಶೃತಿಗೆ ಅವಾಚ್ಯ ಪದ ಪ್ರಯೋಗಿಸಿದ್ದು ಇತ್ಯಾದಿಗಳೆಲ್ಲ ಪ್ರತಿನಿತ್ಯ ಸುದ್ದಿಯಾಗುತ್ತವೆ ನಿಜ. ಆದರೆ ಇದೆಲ್ಲದರ ಹಿಂದೆ ಒಬ್ಬನಲ್ಲಾ ಒಬ್ಬ ಭೂಕಂಟಕನಿರುತ್ತಾನೆ ಎಂಬ ವಾಸ್ತವ ಏಕೆ ಯಾರಿಗೂ ಗೊತ್ತಾಗುತ್ತಿಲ್ಲ.


ಪೂಜಾರಿಯ ಶರಣ್

ಬಳ್ಳಾರಿಯ ಮೈನ್ಸ್ ಧಣಿ ಸಂತೋಷ್ ಲಾಡ್, ಆತನ ಅಣ್ಣ ಅನಿಲ್ ಲಾಡ್, ಬಸವೇಶ್ವರನಗರದ ರಿಯಲ್ ಎಸ್ಟೇಟಿಯರ್ ಭೈರೇಗೌಡ, ಹೆಣ್ಣೂರು ಬಾಣಸವಾಡಿಯ ಲ್ಯಾಂಡ್ ಡೀಲರುಗಳಾದ ಜಿ.ಎಲ್. ರೆಡ್ಡಿ ಮತ್ತು ಗೋವರ್ಧನಮೂರ್ತಿ, ಸತ್ಯ ಇನ್‌ಲವ್‌ನ ಪ್ರೊಡ್ಯೂಸರ್ ರಮೇಶ್, ಆನೇಕಲ್ ಬಾಲರಾಜ್, ಹನಿಮೂನ್ ಎಕ್ಸ್‌ಪ್ರೆಸ್ ಮತ್ತು ತೆನಾಲಿ ರಾಮದ ನಿರ್ಮಾಪಕ ಎಸ್.ವಿ. ಬಾಬು, ರಕ್ಷಕ ಪ್ರೊಡ್ಯೂಸರ್ ಭಾನುಪ್ರಕಾಶ್, ಪೂಜಾರಿ ಚಿತ್ರದ ಕಾರಣ ಪುರುಷ ಮಲ್ಲಿಕಾರ್ಜುನ, ಮಿಸ್ಟರ್ ಬಕ್ರಾ ತೆಗೆದ ಬಾಬುರೆಡ್ಡಿ, ವಿದ್ಯಾರ್ಥಿ ಪ್ರೊಡ್ಯೂಸರ್‌ಗಳಾದ ಎ.ಜಿ. ನಾಯ್ಡು ಮತ್ತು ಟಿ. ನಾಗಚಂದ್ರ, ಗಂಡಹೆಂಡತಿ ಚಿತ್ರದ ಶೋಭಾ ರಾಜಣ್ಣ, ಗಂಡುಗಲಿ ಕುಮಾರರಾಮ ಮಾಡಿದ ಪಟ್ಟಾಭಿ ರಾಮ್ ಹೀಗೆ ರಿಯಲ್ ಎಸ್ಟೇಟ್ ದಂಧೆಯ ಗಳಿಕೆಯನ್ನೆಲ್ಲ ಗಾಂಧಿನಗರಕ್ಕೆ ಸುರಿದು ಕೈಸುಟ್ಟುಕೊಂಡವರ ಪಟ್ಟಿ ದಿನೇದಿನೇ ಬೆಳೆಯುತ್ತಲೇ ಇದೆ.

ತೀರ ಇತ್ತೀಚೆಗೆ ಮುಂಗಾರು ಮಳೆ ನಿರ್ಮಾಪಕ ಅಡಕಮಾರನಹಳ್ಳಿ ಕೃಷ್ಣಪ್ಪನವರು ಅಷ್ಟಿಷ್ಟು ಲಾಭ ಕಂಡಿದ್ದು ಬಿಟ್ಟರೆ ಮಿಕ್ಕ ಬಹುತೇಕರನ್ನೆಲ್ಲ ಗಾಂಧಿನಗರದ ವಂಚಕರೇ ತಲೆ ಬೋಳಿಸಿ ಕಳಿಸಿದ್ದಾರೆ. ರಿಯಲ್ ಎಸ್ಟೇಟ್ ದಂಧೆಯ ಕಿಲಾಡಿ ಬುದ್ಧಿ ಸಿನಿಮಾ ವಿಷಯದಲ್ಲಿ ಮಾತ್ರ ಆದೇಕೋ ಉಲ್ಟಾಪಲ್ಟಾ. ಹೋಗಲಿ ಉತ್ತಮ ಸಿನಿಮಾಗಳಾದರೂ ಬರುತ್ತಿವೆಯಾ? ಇಷ್ಟೆಲ್ಲಾ ದುಡ್ಡು ಹರಿದು ಬಂದರೂ ಗಾಂಧಿನಗರ ವೇಕೆ ಉದ್ಧಾರವಾಗುತ್ತಿಲ್ಲ? ಸಿನಿಮಾ ಮಾಡಲು ಬಂದ ಲ್ಯಾಂಡ್ ಡೀಲರುಗಳು ಮತ್ತೇಕೆ ಗಾಂಧಿನಗರದತ್ತ ತಲೆ ಹಾಕುತ್ತಿಲ್ಲ? ಅಷ್ಟಕ್ಕೂ ಲ್ಯಾಂಡ್ ಡೀಲರುಗಳೆಲ್ಲ ಬೇರೆಲ್ಲವನ್ನೂ ಬಿಟ್ಟು ಸಿನಿಮಾಕ್ಕೇ ಏಕೆ ದುಡ್ಡು ಸುರಿಯುತ್ತಿದ್ದಾರೆ?


ಮದನ್ ಮಲ್ಲು

ಹಕೀಕತ್ತಿಷ್ಟೆ. ಲ್ಯಾಂಡ್ ಡೀಲರುಗಳಿಗೆ ತಮ್ಮ ಬ್ಲಾಕ್ ಮನಿ ಬಿಳಿದಾಗಬೇಕು. ಸಣ್ಣಪುಟ್ಟ ಲ್ಯಾಂಡ್ ಬ್ರೋಕರಿಕೆ ಮಾಡಿಕೊಂಡಿದ್ದು, ದಲಿತರದ್ದೋ ಸರ್ಕಾರದ್ದೋ ಭೂಮಿ ಕೊಳ್ಳೆ ಹೊಡೆದವನಿಗೆ ಏಕಾಏಕಿ ಕೋಟಿಗಟ್ಟಲೆ ದುಡ್ಡು ಬಂದು ಬಿತ್ತೆಂದರೆ ತಲೆ ನಿಲ್ಲೋಲ್ಲ. ಅಂಥವನನ್ನು ಯಾರೋ ಸಿನಿಮಾ ಖದೀಮನೊಬ್ಬ ಸಲೀಸಾಗಿ ಯಾಮಾರಿಸಿ ಬಿಡುತ್ತಾನೆ. ಒಂದು ಕೋಟಿ ಖರ್ಚು ಮಾಡಿ ಮೂರು ಕೋಟಿ ಖರ್ಚಾಯಿತೆಂದು ಸಲೀಸಾಗಿ ಲೆಕ್ಕ ಕೊಡಬಹುದು. ಸಿನಿಮಾದಲ್ಲಿ ನಷ್ಟವೇ ಆಗಿದ್ದರೂ ಇಷ್ಟೆಲ್ಲಾ ಲಾಭ ಬಂತೆಂದು ಸುಳ್ಳು ಲೆಕ್ಕವನ್ನೂ ತೋರಿಸಬಹುದು.


ಪೂಜಾ ಕನ್ವಾಲ್

ಇದು ಲ್ಯಾಂಡ್ ಡೀಲರ್ ಒಬ್ಬನ ಲೆಕ್ಕಾಚಾರವಾದರೆ ಅಂಥವನನ್ನು ಕಿತ್ತು ತಿನ್ನುವುದಕ್ಕೆಂದೇ ಹೊಂಚಿ ಕೂತ ವಂಚಕರ ಹಿಂಡು ಗಾಂಧಿನಗರದಲ್ಲಿದೆ. ಇದಕ್ಕೆ ಸ್ಟೂಡೆಂಟ್ ಸಿನಿಮಾ ಪ್ರೊಡ್ಯೂಸರ್‌ಗಳಾದ ಜಿ.ಎಲ್. ರೆಡ್ಡಿ ಮತ್ತು ಗೋವರ್ಧನ್ ಮೂರ್ತಿಯೇ ಲೇಟೆಸ್ಟ್ ಉದಾಹರಣೆ. ಇವರಿಗೆ ಹೆಚ್ಚೂಕಮ್ಮಿ ಒಂದೂವರೆ ಕೋಟಿಯಷ್ಟು ಮುಂಡಾಯಿಸಿದವನು ಗಾಂಧಿನಗರದ ಹಳೇ ಕಿಲಾಡಿ ಮದನ್‌ಮಲ್ಲು.

ವರ್ಷಕ್ಕೊಂದು ಕನ್ನಡ ಸಿನಿಮಾ ತೆಗಿಬೇಕು ಎಂಬ ದೊಡ್ಡ ಗುರಿಯಿಟ್ಟುಕೊಂಡೇ ಬಂದವರು ಜಿ.ಎಲ್. ರೆಡ್ಡಿ ಮತ್ತು ಗೋವರ್ಧನ್ ಮೂರ್ತಿ. ದೇವನಹಳ್ಳಿ, ಹೊಸಕೋಟೆ ಸುತ್ತಮುತ್ತ ಲ್ಯಾಂಡ್ ಡೀಲ್ ಮಾಡಿಯೇ ಕೋಟಿಗಟ್ಟಲೇ ಸಂಪಾದಿಸಿದ್ದ, ವಯಸ್ಸಿನ್ನೂ 30 ಮೀರದ ಈ ಯುವ ಕುಬೇರರಿಬ್ಬರಿಗೂ ಮಂಕುಬೂದಿ ಎರಚಿದ ಮಲ್ಲು ಹೇಗೋ ಸಿನಿಮಾ ಹುಚ್ಚು ಹಿಡಿಸಿಬಿಟ್ಟ. ಮೊದಲೇ ಬ್ಲಾಕ್‌ಮನಿ. ಬಿಳಿದಾಗಲಿ ಬಿಡು ಎಂದೇ ಸ್ನೇಹಿತರಿಬ್ಬರೂ ಚಿತ್ರ ನಿರ್ಮಾಣಕ್ಕೆ ಸಮ್ಮತಿಸಿದ್ದಾರೆ.

ಆ ಹೊತ್ತಿಗಾಗಲೇ ತೆಲುಗಿನ ಸೂಪರ್‌ಹಿಟ್ 'ದಿಲ್' ಚಿತ್ರದ ರೀಮೇಕ್ ಹಕ್ಕು ಖರೀದಿಸಿಟ್ಟುಕೊಂಡಿದ್ದ ಮಲ್ಲು ಕನ್ನಡದಲ್ಲೂ ಇದು ಸೂಪರ್ ಹಿಟ್ಟಾಗುತ್ತೆ ಎಂದ. ಮಕ್ಕಿಕಾಮಕ್ಕಿ ಕಾಪಿ ಹೊಡೆದರೂ ಹತ್ತು ಕೋಟಿ ಗ್ಯಾರಂಟಿ ಎಂದು ತಲೆ ತಿಕ್ಕಿದ. ಆದಕ್ಕೆ ತನ್ನ ಮಗ ಮಯೂರ್ ಪಟೇಲನನ್ನೇ ಹೀರೋ ಮಾಡಿದ. ಹೀರೋ ಸಂಭಾವನೆಯೆಂದು ಹದಿನೈದು ಲಕ್ಷ ಮತ್ತು ಜೊತೆಗೊಂದು ಕಾರ್ ಕಿತ್ತ. ತನ್ನ ಪಕ್ಕಾ ಭಟ್ಟಂಗಿ ಗಂಗು ಎಂಬ ಸರಬರಾಜುದಾರನನ್ನೇ ಪ್ರೊಡಕ್ಷನ್ ಮ್ಯಾನೇಜರ್ ಮಾಡಿಕೊಂಡ. ಎಂ.ಡಿ. ಶ್ರೀಧರ್ ಎಂಬ ನಾಮಕಾವಸ್ತೆಯನ್ನು ತಂದು ಇವನೇ ಡೈರೆಕ್ಟರ್ ಎಂದ. ಸಿನಿಮಾದ ಗಂಧ ಗಾಳಿ ಗೊತ್ತಿಲ್ಲದ ಗೆಳೆಯರಿಬ್ಬರು ಕೇಳಿದ್ದಕ್ಕೆಲ್ಲ ದುಡ್ಡು ಬಿಚ್ಚತೊಡಗಿದರು.

ಸ್ಟೂಡೆಂಟ್ ಮುಗಿಯುವ ಹೊತ್ತಿಗೆ ಬಜೆಟ್ಟೆ ಮೂರು ಕೋಟಿಯಾಗಿತ್ತು! ಅಥವಾ ಹಾಗಂಥ ಮಲ್ಲು

ರಾ. ಸೋಮನಾಥ್

ನಂಬಿಸಿದ್ದ. ಮೊದಲೇ ತೆಲುಗಿನಲ್ಲಿ ಹಿಟ್ಟಾಗಿತ್ತಲ್ಲ; ಕನ್ನಡದಲ್ಲೂ ಹಿಟ್ಟಾಗುತ್ತೆ ಎಂದು ಏಕಾಏಕಿ ಐವತ್ತು ಪ್ರಿಂಟ್ ಹಾಕಿಸಿಬಿಟ್ಟ. ನೋಡಿದ ಡಿಸ್ಟ್ರಿಬ್ಯೂಟರುಗಳ್ಯಾರೂ ಅದನ್ನು ಮೂಸಿ ಕೂಡ ನೋಡಲಿಲ್ಲ. ಕೊನೆಗೆ ತಾನೇ ನಿಂತು ಬಿಡುಗಡೆ ಮಾಡಿದನಾದರೂ ಸ್ಟೂಡೆಂಟ್ ನೆಟ್ಟಗೆ ಒಂದು ವಾರ ಕೂಡ ಓಡಲಿಲ್ಲ.

ಮಲ್ಲು ನಂಬಿ ಮೂರು ಕೋಟಿ ಸುರಿದ ಜಿ.ಎಲ್. ರೆಡ್ಡಿ ಮತ್ತು ಗೋವರ್ಧನ ಮೂರ್ತಿ ಜೋಡಿಗೆ ನಯಾಪೈಸೆಯ ಲಾಭ ಬರುವುದಿರಲಿ ಹಾಕಿದ ದುಡ್ಡಿನ ಹತ್ತು ಪರ್ಸೆಂಟ್ ಕೂಡ ಗಿಟ್ಟಲಿಲ್ಲ. ಹಾಗಂಥ ಮಲ್ಲು ದಡ್ಡನೇನಲ್ಲ. ಏನೂ ಗೊತ್ತಿಲ್ಲದ ನಿರ್ಮಾಪಕರಿಗೆ ಕಳ್ಳ ಲೆಕ್ಕ ತೋರಿಸಿಯೇ ಸರಿಸುಮಾರು ಒಂದು ಕೋಟಿ ಜೇಬಿಗಿಳಿಸಿದ್ದಾನೆ. ಸ್ಟೂಡೆಂಟ್ ನೋಡಿದ ಯಾರೂ ಅದಕ್ಕೆ ಮೂರು ಕೋಟಿ ಖರ್ಚಾಗಿದೆಯೆಂದರೆ ಎದ್ದೂ ಬಿದ್ದು ನಗುತ್ತಾರೆ.


ರಕ್ಷಕದ ಭಾನು ಪ್ರಕಾಶ್

ವರ್ಷಕ್ಕೊಂದು ಕನ್ನಡ ಸಿನಿಮಾ ತೆಗಿತೀವಿ ಎಂದೇ ಆಸೆ ಹೊತ್ತು ಬಂದಿದ್ದ ಗೆಳೆಯರೀಗ ಸಿನಿಮಾದವರೆಂದರೇನೇ ಜಾ[illegible] ಮಾಡುತ್ತಾರೆ. ಇಲ್ಲಿ ಲಾಭ ಎಂಬುದು [illegible] ವಂಚಕನಿಗಾದರೆ ನಷ್ಟ ಕನ್ನಡ ಚಿತ್ರರಂಗಕ್[illegible] ನಂಬಿ ದುಡ್ಡು ಹಾಕಿದ ನಿರ್ಮಾಪಕನಿಗೆ!

ಮಲ್ಲುವನ್ನೂ ಮೀರಿಸುವಂಥ ವಂಚಕರ[illegible] ನಗರದಲ್ಲಿದ್ದಾರೆ. ಈ ಪೈಕಿ ಅತ್ಯಂತ ಖ[illegible] ಕೂಟಕ್ಕೆ ಮಂಡ್ಯ ನಾಗರಾಜ್ ಎಂಬಾತನೇ [illegible] ಪೊಲೀಸ್ ಮಂಜು, ಸುಂದರ್, ತುಳಸಿರಾಂ, [illegible] ಫೈಟರ್ ಕೃಷ್ಣ ಈ ಗ್ಯಾಂಗಿನ ಈತರೇ [illegible] ಇವರು ನಟರಾ, ನಿರ್ಮಾಪಕರಾ, ನಿದೇ[illegible] ಎಂಬುದೇ ಯಾರಿಗೂ ಗೊತ್ತಿಲ್ಲ. ಇಲ್ಲಿಗೆ ಐದು[illegible] ಹಿಂದೆ ಇವರೆಲ್ಲ ಸೇರಿ ದಾಳಿ ಎಂಬ ಚಿತ್ರಕ್[illegible] ಆದಕ್ಕೆ ಈಶ್ವರ್ ಬಾ[illegible] ಎಂಬಾತನನ್ನು ತಂದು [illegible] ಪಟ್ಟ ಕಟ್ಟಿದ್ದರು. ಕೆ.ವಿ. ರಾ[illegible] ಟೀ-ಬೀಡಿ ಸಪ್ಲೈ ಮಾಡು[illegible] ಬಾಳೇಗುಂದಿ ಓರ್ವ [illegible] ಬಾಯ್. ನಿರ್ದೇಶನದ [illegible] ಗೊತ್ತಿಲ್ಲ. ಇವರೆಲ್ಲ ಸೇ[illegible] ಕೇರಿಯ ಹುಡುಗಿ ಸ[illegible] ಸ್ಟಾರ್ ಮಾಡಿಬಿಡ್ತೀವಿ ಎಂ[illegible] ಶೂಟಿಂಗ್ ಮಾಡಿದ್ದೇ [illegible] ಕೊನೆಕೊನೆಗೆ ಇವರ ಕಾಟ[illegible] ಹೀರೋಯಿನ್ ಸರಿತಾ [illegible] ಕ್ಯಾಮೆರಾ ಸಹಾಯಕನ[illegible] ಮದುವೆಯಾಗಿ ಬಚಾ[illegible]


ಮಂಡ್ಯ ನಾಗರಾಜ್[illegible]



ಗಣಿಕಳ್ಳರ ದುಡ್ಡಲ್ಲಿ ಸಿನಿಮಾ ಹಂಗಾಮಾ

ರಿಯಲ್ ಎಸ್ಟೇಟ್ ದುಡ್ಡಷ್ಟೇ ಅಲ್ಲ ಬಳ್ಳಾರಿಯ ಗಣಿ ಲೂಟಿಯ ದುಡ್ಡೂ ಗಾಂಧಿನಗರಕ್ಕೆ ಕಾಲಿಕ್ಕಿದೆ. ಒಂದು ಮೂಲದ ಪ್ರಕಾರ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪರಮಾಪ್ತ ಎಮ್ಮೆಲ್ಲೇ ಅನಿಲ್‌ಲಾಡ್ ಮತ್ತು ಅವರ ಸಹೋದರ ಸಂತೋಷ್ ಲಾಡ್ ಸೇರಿ UFO ತಾಂತ್ರಿಕತೆಯೊಂದಿಗೆ ಸ್ಯಾಟಲೈಟ್ ಸಿನಿಮಾ ಸಿಸ್ಟಮ್ ಆರಂಭಿಸಲಿದ್ದಾರೆ. ಅದಕ್ಕೆಂದು ಇಷ್ಟರಲ್ಲೇ ಹದಿನೈದು ಚಿತ್ರಮಂದಿರಗಳನ್ನು ಖರೀದಿಸಲಿದ್ದಾರೆ ಎಂಬುದು ಒಂದು ಸುದ್ದಿ. ಜೊತೆಗೆ ಕರ್ನಾಟಕದಲ್ಲಿ ಮೂವತ್ತಕ್ಕೂ ಹೆಚ್ಚು ಚಿತ್ರಮಂದಿರಗಳನ್ನು ಇದಕ್ಕೆ tie up ಮಾಡಿಕೊಳ್ಳಲಿದ್ದಾರೆ.




ಅನಿಲ್ ಲಾಡ್

ಇದು 500 ಕೋಟಿ ರೂಪಾಯಿಗಳ ಯೋಜನೆಯಂತೆ. ಒಮ್ಮೆ ಎಲ್ಲೋ ಕುಳಿತು ಕಂಪ್ಯೂಟರಿಗೆ ಸಿನಿಮಾ ಒಂದರ ಸೀಡಿ ತುರುಕಿ ಅದನ್ನು ಕರ್ನಾಟಕದೆಲ್ಲೆಡೆಯ ಚಿತ್ರಮಂದಿರಗಳಲ್ಲಿ ಪ್ರೇಕ್ಷಕ ನೋಡಬಹುದಾದ ವ್ಯವಸ್ಥೆ ಜಾರಿಗೆ ಬಂತೆಂದರೆ ಸಿನಿಮಾದ ರೀಲುಗಳ ಡಬ್ಬ ಸಾಗಿಸುವ, ಅದನ್ನು ಆಯಾ ಟಾಕೀಸಿನ ಪ್ರೊಜೆಕ್ಟರಿಗೆ ಹಾಕುವ ಪದ್ಧತಿಯೇ ರದ್ದಾಗುತ್ತದೆ. ಕರ್ನಾಟಕದ ಬಹುತೇಕ ಟಾಕೀಸುಗಳು ಅನಿಲ್‌ಲಾಡ್ ನಿಯಂತ್ರಣಕ್ಕೆ ಬರುತ್ತವೆ.

ಇದಿಷ್ಟೇ ಅಲ್ಲ; ವರ್ಷವೊಂದಕ್ಕೆ ಸರಿಸುಮಾರು 25 ಸಿನಿಮಾಗಳನ್ನು ನಿರ್ಮಿಸುವುದು ಲಾಡ್ ಸಹೋದರರ ಗುರಿ. ಈ ತರದ ಇನ್ನೂರು ಚಿತ್ರಗಳನ್ನು ಲಾಡ್ ಬ್ರದರ್ಸ್ ನಿರ್ಮಿಸುತ್ತಾರಂತೆ. ಇಷ್ಟೊಂದು ಚಿತ್ರಗಳನ್ನು ಕೇವಲ ಸಿನಿಮಾ ಟಾಕೀಸುಗಳನ್ನು ನಂಬಿ ಲಾಡ್ ಸಹೋದರರು ನಿರ್ಮಿಸುತ್ತಿಲ್ಲ. ಮುಖ್ಯಮಂತ್ರಿ ಕುಮಾರಸ್ವಾಮಿಯವರ ಹೊಸ ಟೀವಿ ಚಾನೆಲ್ 'ಕನ್ನಡ ಕಸ್ತೂರಿ'ಯ ಸಿನಿಮಾ ಬರವನ್ನು ನೀಗಿಸಬೇಕಲ್ಲ. ಈಗಾಗಲೇ ಮುನ್ನೂರಕ್ಕೂ ಹೆಚ್ಚು ಚಿತ್ರಗಳನ್ನು ಕಸ್ತೂರಿ ಚಾನಲ್ಲಿಗೆಂದು ಖರೀದಿಸಿ ಇಡಲಾಗಿದೆ. ಉದಯ ಟೀವಿ, ಈಟೀವಿಗಳ ಸಂಗ್ರಹದ ಮುಂದೆ ಇದು ಯಾವ ಲೆಕ್ಕ?

ಅದಕ್ಕೆ ಲಾಡ್ ಬ್ರದರ್ಸ್ ಮುಂದೆಬಿಟ್ಟು ಸಿನಿಮಾ ನಿರ್ಮಾಣಕ್ಕೆ ಕೈಹಾಕಿದ್ದಾರೆ ಮುಖ್ಯಮಂತ್ರಿ ಕುಮಾರಸ್ವಾಮಿ. ಕನ್ನಡಿಗರ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡಿದ ದುಡ್ಡಲ್ಲೇ ಸಿನಿಮಾ ಹಂಗಾಮಾ ಶುರುವಾಗಲಿದೆ. ಆದರೆ, ಗಾಂಧಿನಗರದ ತುಂಬ ವಂಚಕರೇ ತುಂಬಿದ್ದಾರಲ್ಲ?



ಸ್ಟೂಡೆಂಟ್‌ನ ಮೂರ್ತಿ, ರೆಡ್ಡಿ

...ನೇ ಅಲ್ಲಿ ಗುಂಡು ತುಂಡು ಟೆಂಡು. ...ಸಮೃದ್ಧ ಎಂದರ್ಥ. ಇವರೆಲ್ಲ ಸೇರಿ ...ಎಂಬ ಮತ್ತೊಂದು ಚಿತ್ರಕ್ಕೆ ಕೈಯಿಟ್ಟು ...ಡೀಲರ್ ಭಾನುಪ್ರಕಾಶ್‌ಗೆ ಸರಿಸುಮಾರು ...ಕೋಟಿಗೆ ಉಂಡೆನಾಮ ತಿಕ್ಕಿದ್ದಾರೆ. ...ದಲ್ಲಿ ಈ ಭಾನುಪ್ರಕಾಶ್ ರಕ್ಷಕದಲ್ಲಿ ...ವನ್ನು ನಟಿಸುತ್ತೇನೆಂದು ಬಂದ. ಹೇಗೂ ...ಕುಮಾರ್ ಆದಕ್ಕೆ ಹೀರೋ ಆದ್ದರಿಂದ ...ಮಾ ಓಡೋಡುತ್ತೆ ಎಂದು ವಂಚಕರ ಗ್ಯಾಂಗ್ ... ಅರ್ಧ ಸಿನಿಮಾ ಕೂಡ ಮುಗಿಯದೇ ...ಟಿಂಗ್ ನಿಂತಿತು, ಆಗ ಭಾನುಪ್ರಕಾಶ್ ಇದೀ... ತಾನೇ ನಿರ್ಮಾಪಕನಾದ.

ಆದರೆ ಡೈರೆಕ್ಟರ್‌ಗಿರಿಯಲ್ಲಿನ್ನೂ ಮಂಡ್ಯ ನಾಗ...ನೇ ಇದ್ದನಲ್ಲ; ಲ್ಯಾಂಡು ಮಾರಿ ಗಳಿಸಿದ ಭಾನು...ಶನ ದುಡ್ಡೆಲ್ಲ ಮುಕ್ಕಾಲು ಸಿನಿಮಾಕ್ಕೇ ಖಾಲಿಯಾ...ತು. ಕೊನೆಗೆ ಕೊಳ್ಳೆಗಾಲದ ಶೋಕಿಲಾಲ ಶಾಸಕ ...ರಾಜನನ್ನೂ ಮತ್ತೊಬ್ಬ ಹೀರೋ ಎಂದು ಅಟ್ಟಕ್ಕೇ ... ಬಂದಷ್ಟು ದುಡ್ಡು ಕುಯ್ಯಲು ವಂಚಕರ ಗ್ಯಾಂಗ್ ... ಹಾಕಿತು. ಕೊಳ್ಳೇಗಾಲದ ಕಾಡಿನಲ್ಲಿ ಶೂಟಿಂಗ್ ...ವಾಯಿತು. ಬೇಕಾಬಿಟ್ಟಿ ಹುಡುಗಿಯರು, ಸಿಕ್ಕಾಪಟ್ಟೆ ಗುಂಡು ಜೊತೆಗೆ ಕಾಡು. ಕುಡಿದು ಚಿತ್ತಾಗಿದ್ದ ಎಮ್ಮೆಲ್ಲೇ ಬಾಲರಾಜ್ ಯಾವ ಹುಡುಗಿಯ ವಿಷಯಕ್ಕೆ ಬಿದ್ದು ರಿವಾಲ್ವರ್ ತೆಗೆದನೊ ಅಂತೂ ಗುಂಡು ಹಾರಿತ್ತು, ಶೂಟಿಂಗ್ ಅಷ್ಟಕ್ಕೇ ಖತಂ!

ಲ್ಯಾಂಡ್ ಡೀಲರ್ ಭಾನುಪ್ರಕಾಶನ ಒಂದು ಕೋಟಿ, ಎಮ್ಮೆಲ್ಲೇ ಬಾಲರಾಜನ ಕಾಲುಕೋಟಿಯಷ್ಟು ದುಡ್ಡನ್ನು ರಕ್ಷಕ ನುಂಗಿದೆ. ಸಿನಿಮಾ ಮಾತ್ರ ಡಬ್ಬಾ ಬಿಟ್ಟು ಹೊರಬರುತ್ತಿಲ್ಲ, ಸದ್ಯಕ್ಕೆ ಬಿಡುಗಡೆಯಾಗುವ ಸೂಚನೆಗಳೂ ಇಲ್ಲ!

ಹಾಗಂತ ಲ್ಯಾಂಡ್ ಖದೀಮರೇನೂ ದಡ್ಡರಲ್ಲ, ಕೆಲವರು ಶೋಕಿಗೆ ಬರುತ್ತಾರೆ, ಬಂದು ಸಮಾ ಬೋಳಿಸಿಕೊಳ್ಳುತ್ತಾರೆ. ಇಂಥವರನ್ನು ವಂಚಿಸಲೆಂದೇ ಹುಟ್ಟಿಕೊಂಡ ನಕಲಿ ನಿರ್ದೇಶಕರು, ಪ್ರಳಯಾಂತಕ ಪ್ರೊಡಕ್ಷನ್ ಮ್ಯಾನೇಜರ್‌ಗಳು ಗಾಂಧಿನಗರದ ಸಿನಿಮಾ ಸಂಸ್ಕೃತಿಯನ್ನೇ ಗಬ್ಬೆಬ್ಬಿಸಿದ್ದಾರೆ. ಕರಿಯ ನಿರ್ಮಾಪಕ ಆನೇಕಲ್ ಬಾಲರಾಜ್, ಮಿಸ್ಟರ್ ಬಕ್ರಾ ನಿರ್ಮಾಪಕ ಬಾಬುರೆಡ್ಡಿ, ಚನ್ನಪಟ್ಟಣದ ಎಮ್ಮೆಲ್ಲೆ ಯೋಗೇಶ್ವರ್, ತೆನಾಲಿರಾಮ ಮತ್ತು ಹನಿಮೂನ್ ಎಕ್ಸ್‌ಪ್ರೆಸ್ ನಿರ್ಮಾಪಕ ಎಸ್.ವಿ. ಬಾಬು, ಕೈವಾರ ತಾತಯ್ಯಕ್ಕೆ ದುಡ್ಡು ಹಾಕಿದ ವಿ. ರಾಮು ಇತ್ಯಾದಿಗಳೆಲ್ಲ ಇಂಥ ಮೋಜಿಗೆ ಬಿದ್ದೇ ತಲೆ ಬೋಳಿಸಿಕೊಂಡಿದ್ದಾರೆ.



ನೀತು


ಪೂಜಾರಿಯ ಮಲ್ಲಿಕಾರ್ಜುನ

ಇವರ ಕಣ್ಣಿಗೆ ನಟಿಯರೆಂದರೇನೇ ಕಾಸಿಗೆ ದೊರಕುವ ಗೊಂಬೆಗಳು. ಇತ್ತೀಚೆಗೆ ಬಿಡುಗಡೆಯಾದ ಪೂಜಾರಿ ಚಿತ್ರದ ಡೈರೆಕ್ಟರ್ ಶರಣ್ ದಾವಣಗೆರೆ ಉರುಫ್ ಶರಣ್ ಗಬ್ಬೂರ್ ಒಬ್ಬನೇ ಪ್ರೊಡ್ಯೂಸರ್ ಮಲ್ಲಿಕಾರ್ಜುನ ಎಂಬ ರಿಯಲ್ ಎಸ್ಟೇಟ್ ಶೋಕಿಲಾಲನಿಗೆ ಐವತ್ತು ಲಕ್ಷಕ್ಕೆ ಮುಂಡಾಯಿಸಿದ್ದಾನೆ. ಕಾಮಾಕ್ಷಿಪಾಳ್ಯ, ಸುಂಕದ ಕಟ್ಟೆ ಏರಿಯಾಗಳಲ್ಲಿ ಲ್ಯಾಂಡು ಹೊಡೆದೇ ಕುಬೇರನಾದ ಮಲ್ಲಿಕಾರ್ಜುನ ಹುಟ್ಟಾ ಶೋಕಿಲಾಲ. ಇಂಥವನಿಗೆ ಶರಣ್ ದಾವಣಗೆರೆ ಅದೇನು ಆಸೆ ಹುಟ್ಟಿಸಿದನೊ.

ಪಟ್ಟಾಭಿರಾಮನ ದುಡ್ಡು ಕುಮಾರರಾಮ ನುಂಗಿದ್ದು

ಗಂಡುಗಲಿ ಕುಮಾರರಾಮ ಬರೀ ಸರಿಸುಮಾರು ಐದು ಕೋಟಿಯಷ್ಟು ರಿಯಲ್ ಎಸ್ಟೇಟ್ ದುಡ್ಡನ್ನು ನುಂಗಿ ಹಾಕಿದೆ. ಬೋಳಿಸಿಕೊಂಡಿದ್ದು ಎಂ.ಎಸ್. ರಾಮಯ್ಯನವರ ಮಗ ಎಂ.ಆರ್. ಪಟ್ಟಾಭಿರಾಮ್ ರಿಯಲ್ ಎಸ್ಟೇಟ್ ದಂಧೆಗೂ ಸಿನಿಮಾ ದಂಧೆಗೂ ಏನೆಲ್ಲಾ ವ್ಯತ್ಯಾಸ ಎಂಬುದಕ್ಕೆ ಇದೊಂದೇ ಉದಾಹರಣೆ ಸಾಲದೆ?



ಎಂಥಾ ಕತೆ? ಯಾವ ಹೀರೋ? ಯಾರು ಯೋಗ್ಯ ಡೈರೆಕ್ಟರ್? ಇತ್ಯಾದಿಗಳ ಅಂದಾಜು ಲ್ಯಾಂಡ್ ಡೀಲರುಗಳಿಗಿರುವುದಿಲ್ಲ, Of course ಪಟ್ಟಾಭಿರಾಮ್‌ಗೆ ಅನೇಕ ಲ್ಯಾಂಡ್ ಕುಳಗಳಿಗಿದ್ದಂಥ ಖಯಾಲಿಯಿರಲಿಲ್ಲ, ಕನ್ನಡ ಚಿತ್ರರಂಗಕ್ಕೆ ಕೈಲಾದಷ್ಟು ಮಾಡಬೇಕೆಂಬ ಕಳಕಳಿಯೂ ಪ್ರಾಮಾಣಿಕವಾಗಿತ್ತು, ಯಡವಟ್ಟಾಗಿದ್ದು ಭಾರ್ಗವನಂಥ ಪಕ್ಕಾ ಖದೀಮನನ್ನು ನಂಬಿದ್ದು ಭಾರ್ಗವ ಹುಟ್ಟಾ ಜಾತಿ ಕ್ರಿಮಿ. ಯಾರೇ ಸಿಕ್ಕರೂ ಹೆಗಲ ಮೇಲೆ ಕೈಹಾಕಿ ಜನಿವಾರ ತಡಕುತ್ತಾನೆ. ಈತ ಬಂದು ವರನಟ ರಾಜ್ ಮಾಡದೇ ಬಿಟ್ಟಿದ್ದ ಯಾವುದೋ ಕಾಲದ ಗಂಡುಗಲಿ ಕುಮಾರರಾಮದ ಪ್ರಸ್ತಾಪ ಮಾಡಿದಾಗ ಪಟ್ಟಾಭಿರಾಮ್ ನಂಬಿಬಿಟ್ಟರು.


ಭಾರ್ಗವ


ಪಟ್ಟಾಭಿರಾಮ

ಅಂಥದೊಂದು ಚಿತ್ರಕ್ಕೆ ಭಾರ್ಗವನಂಥ ನಿರ್ದೇಶಕ ಮತ್ತು ಶಿವರಾಜ್ ಕುಮಾರ್ ತರದ ಹೀರೋ ಆಯ್ಕೆಯೇ ಸರಿ ಹೊಂದುತ್ತಿರಲಿಲ್ಲ, ಹೋಗಲಿ ಚಿತ್ರದ ಬಜೆಟ್ಟನ್ನಾದರೂ ಹುಷಾರಾಗಿ ನಿಭಾಯಿಸಿದರೆ? ಅನಗತ್ಯ ಅದ್ದೂರಿ ಸೆಟ್ಟುಗಳು, ರಾಜಸ್ಥಾನದ ಮರುಭೂಮಿ ಸೀನು, ವಿಪರೀತ ಕಾಸ್ಟ್ಯೂಮ್ಸ್ ವ್ಯರ್ಥ ಐಟಂ ಡ್ಯಾನ್ಸ್ ಇತ್ಯಾದಿಗಳಿಂದಾಗಿ ಮೂಲ ಕತೆಯೇ ಮಹತ್ವ ಕಳೆದುಕೊಂಡಿತು.

ಹೀಗೆ ವಿಪರೀತ ಖರ್ಚು ಮಾಡಿಸಿದ ಭಾರ್ಗವ ಇದ್ಯಾವುದನ್ನೂ ಚಿತ್ರಕ್ಕೆ ಅನಿವಾರ್ಯವಾಗಿ ಮಾಡಿರಲಿಲ್ಲ, ಎಲ್ಲಕ್ಕೂ ಒಳಗೊಳಗೇ ಕಮೀಷನ್ ಹೊಡೆದಿದ್ದ, ಕಳ್ಳ ಲೆಕ್ಕ ಬರೆದಿದ್ದ, ಬಲ್ಲವರು ಹೇಳುವಂತೆ ಭಾರ್ಗವ ಪಟ್ಟಾಭಿರಾಮ್‌ಗೆ ಕಮ್ಮಿಯೆಂದರೂ ಒಂದುಕಾಲು ಕೋಟಿ ಮುಂಡಾಯಿಸಿಬಿಟ್ಟ!

ಪ್ರಿಂಟು ಮತ್ತು ಪಬ್ಲಿಸಿಟಿ ಮುಗಿಯುವ ಹೊತ್ತಿಗೆ ಮೂರೂವರೆ ಕೋಟಿಯಿದ್ದ ಕುಮಾರರಾಮನ ಬಜೆಟ್ಟು ಐದು ಕೋಟಿ ಮುಟ್ಟಿತ್ತು, ಸಿನಿಮಾ ಬಿಡುಗಡೆಯಾದ ಮೊದಲ ವಾರಕ್ಕೆ ಅದರ ಹಣೆಬರಹ ಗೊತ್ತಾಗಿತ್ತು, ಸ್ಯಾಟಲೈಟ್ ರೇಟ್ ಸೇರಿಸಿದಂತೆ ಬಂದ ಕಲೆಕ್ಷನ್ನು ಬರೀ ಒಂದು ಕೋಟಿ ನಲವತ್ತು ಲಕ್ಷ ಮಾತ್ರ. ಪಟ್ಟಾಭಿರಾಮ್‌ಗೆ ಒಟ್ಟೂ ಮೂರೂವರೆ ಕೋಟಿಯ ಲುಕ್ಸಾನಾಗಿತ್ತು, ಆದರೇನಂತೆ ಭಾರ್ಗವನ ಒಂದು ಕೋಟಿಯ ಹೊಸ ಬಂಗಲೆ ಖರೀದಿಯತ್ನ ನಿರಾತಂಕವಾಗಿತ್ತು.

ಭಾರ್ಗವನಂಥವರೇ ಮುಂಡಾಯಿಸಲು ನಿಂತಾಗ ಕಾಂಜೀಪೀಂಜಿಗಳು ಯಾವ ಲೆಕ್ಕ?

ಯಾವುದೋ ಡಬ್ಬಾ ಚಿತ್ರಕತೆ ರೆಡಿ ಮಾಡಿ ಜೋಕ್‌ಫಾಲ್ಸ್ ನಾಯಕಿ ನೀತು ಎಂಬಾಕೆಯನ್ನು ಬುಕ್ ಮಾಡಿದ. ಶುರುವಿನಲ್ಲೇ ಫಾರಿನ್ ಶೂಟಿಂಗು. ಪ್ರೊಡ್ಯೂಸರ್ ಮಲ್ಲಿಕಾರ್ಜುನ್ ಹೀರೋಯಿನ್ ನೀತು ಜೊತೆ ಶೂಟಿಂಗ್ ಮಾಡಿದ್ದೇ ಮಾಡಿದ್ದು, ಶರಣ್ ಕೊನೆಗೆ ಮಲ್ಲಿಕಾರ್ಜುನನಿಗೆ ಎರಡೂ ಮುಕ್ಕಾಲು ಕೋಟಿಯ ಲೆಕ್ಕ ಕೊಟ್ಟ, ತಳಬುಡ ಗೊತ್ತಿಲ್ಲದ ಮಲ್ಲಿಕಾರ್ಜುನ ಅದನ್ನು ನಂಬಿಬಿಟ್ಟ. ಈಗ ಪೂಜಾರಿ ತೆರೆಕಂಡಿದೆ. ಶರಣ್ ಅದರ 35 ಪ್ರಿಂಟ್ ಹಾಕಿಸಿದ್ದಾನೆ. ಸಿನಿಮಾ ನೋಡಿದ ಯಾರೂ ಎರಡೂ ಮುಕ್ಕಾಲು ಕೋಟಿಯ ಮಾತು ಹಾಳಾಗಲಿ, ಒಂದು ಕೋಟಿ ಖರ್ಚಾಗಿರುವುದನ್ನು ಒಪ್ಪುವುದಿಲ್ಲ, ಎರಡೇ ದಿನಕ್ಕೆ ಪೂಜಾರಿ ನೆಗೆದು ಬಿದ್ದಿದೆ. ಎರಡೂ ಮುಕ್ಕಾಲು ಕೋಟಿಯಲ್ಲಿ ಒಂದೇ ಒಂದು ಪೈಸೆಯ ದುಡ್ಡು ನಿರ್ಮಾಪಕ ಮಲ್ಲಿಕಾರ್ಜುನನ ಕೈ ಸೇರಲ್ಲ.

ತಲೆ ಬೋಳಿಸಿಕೊಳ್ಳಲು ತಿರುಪತಿಗೇ ಏಕೆ, ಗಾಂಧಿ ನಗರವೇ ಓಕೆ ಎಂಬುದು ಲ್ಯಾಂಡ್ ಡೀಲರ್ ಮಲ್ಲಿಕಾರ್ಜುನನ ಅನುಭವದ ಮಾತು.

ತಮಾಷೆಯೇನು ಗೊತ್ತೆ? ಯಾವ ಶರಣ್ ದಾವಣಗೆರೆಯನ್ನು ಗ್ರೇಟ್ ಡೈರೆಕ್ಟರ್ ಎಂದು ಲ್ಯಾಂಡ್ ಡೀಲರ್ ಮಲ್ಲಿಕಾರ್ಜುನ ಭಾವಿಸಿದ್ದನೋ ಅಸಲಿಗೆ ಆತನಿಗೆ ಅಂಥ ಯೋಗ್ಯತೆ ಇಲ್ಲ, ಪ್ರಾರಂಭದಲ್ಲಿ ಹಲೋ ಯಮದಂತ ತಗಡು ಚಿತ್ರದ ಡೈರೆಕ್ಟರ್ ಮಹ್ಮದ್‌ಗೌಸ್ ಉರುಫ್ ಎ.ಆರ್. ಬಾಬುಗೆ ಈತ ಸಹಾಯಕನಾಗಿದ್ದ, ಆನಂತರ ಒಂದೆರಡು 16mm ಸೆಕ್ಸ್ ಸಿನಿಮಾ ತೆಗೆದ. ಚಿಕ್ಕಪೇಟೆಯ ಕೊಳಕಲು ಲಾಡ್ಜ್‌ಗಳಲ್ಲಿ ರೂಂ ಹಾಕಿ ಹುಡುಗಿಯರನ್ನು ಅಲ್ಲಿಗೇ ಕರೆಸುತ್ತಿದ್ದ. ಕುಳ್ಳರ ಲೋಕ ಎಂಬ ಡಬ್ಬಾ ಸಿನಿಮಾ ತೆಗೆದ. ಸಾಕಿದ ಗಿಣಿ ಎಂಬ ಮತ್ತೊಂದು ಚಿತ್ರ ನಿರ್ಮಿಸಿ ಅದರ ಪ್ರೊಡ್ಯೂಸರ್ ರಾಜಣ್ಣನನ್ನು ಬೀದಿಪಾಲು ಮಾಡಿದ್ದ.


ರಾಜೀವ್‌ನ ರಾಜಣ್ಣ

ಇಂಥವನ ಜಾತಕ ಕೂಡ ನೋಡದೇ ಸರಿಸುಮಾರು ಎರಡೂ ಮುಕ್ಕಾಲು ಕೋಟಿ ದುಡ್ಡನ್ನು 'ಪೂಜಾರಿ' ಚಿತ್ರಕ್ಕಾಗಿ ಸುರಿದ ಮಲ್ಲಿಕಾರ್ಜುನ್ ಈಗ ತಲೆತಲೆ ಚಚ್ಚಿಕೊಳ್ಳುತ್ತಾನೆ.

ಅಪರೂಪಕ್ಕೊಬ್ಬಂತೆ ಲ್ಯಾಂಡ್ ದುಡ್ಡು ಗಾಂಧಿನಗರಕ್ಕೆ ಬರುತ್ತಿವೆ. ಆದರೆ ಅದು ವಂಚಕರ ಕೈ ಸೇರಿ ಕಳಪೆ ಚಿತ್ರಗಳ ಮೂಲಕ ಮಣ್ಣುಪಾಲಾಗುತ್ತಿದೆ. ಇದೇ ಗಾಂಧಿನಗರದ ಘಟಿಬಾವಂತರು, ತಂತ್ರಜ್ಞರ ಕೈ ಸೇರಿದ್ದರೆ! [illegible]

[illegible]

ಮೆಗಾಸಿಟಿಯ ದುಡ್ಡು ಮಣ್ಣುಪಾಲು

ಬೇರೆಲ್ಲರಿಗಿಂತಲೂ ದೊಡ್ಡ ಮಟ್ಟದಲ್ಲಿ ಗಾಂಧಿನಗರಕ್ಕೆ ರಿಯಲ್ ಎಸ್ಟೇಟ್ ದುಡ್ಡನ್ನು ತಂದು ಸುರಿದ ಖ್ಯಾತಿ ಸಲ್ಲುವುದಿದ್ದರೆ ಅದು ಚನ್ನಪಟ್ಟಣದ ಎಮ್ಮೆಲ್ಲೆ ಯೋಗೇಶ್ವರ್‌ಗೇ ಸಲ್ಲಬೇಕು.

ಮೊದಲು ತಾನೇ ಹೀರೋ ಆಗಿ ಉತ್ತರಧ್ರುವದಿಂ ದಕ್ಷಿಣ ಧ್ರುವಕೂ ನಿರ್ಮಿಸಿದ. ಅದಕ್ಕೆಂದು ತನ್ನ ಮೆಗಾಸಿಟಿಯಿಂದ 3 ಕೋಟಿ ಸುರಿದ. ರಾಜಸ್ಥಾನಕ್ಕೂ ಹೋಗಿ ಶೂಟಿಂಗ್ ಮಾಡಿಸಿದ. ಡೈರೆಕ್ಟರ್ ರಾಜ್ ಕಿಶೋರ್ ಕೈಯಲ್ಲಿ 3 ಕೋಟಿ ನಿಲ್ಲುತ್ತಾ? ಬಿಡುಗಡೆಯಾದ ವಾರಕ್ಕೇ ಉತ್ತರ ಧ್ರುವದಿಂ ತೋಪಾಗಿತ್ತು, ಯೋಗೇಶ್ವರ್‌ಗೆ ಬುದ್ಧಿ ಬರಲಿಲ್ಲ. ಮತ್ತೆ 4 ಕೋಟಿ ಸುರಿದು ಸೈನಿಕ ನಿರ್ಮಿಸಿದ. ಈ ಬಾರಿ ಸುಖಧರೆ ಬ್ಲೇಡು ಹಾಕಿದ್ದ. ಬಿದ್ದ ಸೈನಿಕ ಮತ್ತೆ ಏಳಲಿಲ್ಲ. ಯೋಗೇಶ್ವರ್ ಹಾಕಿದ ನಾಲ್ಕೂ ಕೋಟಿಗೆ ನಮಃಶಿವಾಯ.



ಇಷ್ಟಾದ ಮೇಲೂ ಹುಚ್ಚು ಬಿಡಲಿಲ್ಲ, 'ಪ್ರೀತಿ ನೀ ಇಲ್ಲದೆ ನಾ ಹೇಗಿರಲಿ' ಚಿತ್ರಕ್ಕೆ ತೆರೆಮರೆಯಲ್ಲಿ ಫೈನಾನ್ಸ್ ಮಾಡಿದ ಯೋಗೇಶ್ವರ್ ನಿರ್ದೇಶನಕ್ಕೆಂದು ಈಶ್ವರ ಬಾಳೇಗುಂದಿ ಎಂಬ ವಂಚಕನನ್ನು ಆಯ್ಕೆಕೊಂಡಿದ್ದ, ಬಾಳೇಗುಂದಿ 20 ಲಕ್ಷ ಬೋಳಿಸಿದ. 'ಪ್ರೀತಿ ನೀ ಇಲ್ಲದೆ' ಕೂಡ ನೆಲಕಚ್ಚಿತು. ಛಲಬಿಡದ ತ್ರಿವಿಕ್ರಮನಂತೆ ಯೋಗೇಶ್ವರ್ ಕೊನೆಗೆ 'ಬದ್ರಿ' ಎಂಬ ಚಿತ್ರಕ್ಕೆ ಕೈಯಿಟ್ಟು ಮತ್ತೆ ಹಿಂಬಾಗಿಲಿಂದ ನಿರ್ಮಾಪಕನಾದ. ಬದ್ರಿಗೆ ನಿರ್ದೇಶಕನಾದವನು ಶಿವಾಜಿರಾವ್. ಈತನೂ ತಿರುಪತಿ ಗಿರಾಕಿಯೇ. ಯೋಗೇಶ್ವರ್‌ಗೆ ಆತ ಹತ್ತು ಲಕ್ಷ ವಂಚಿಸಿದ. ಬದ್ರಿಯೂ ಬರಕತ್ತಾಗಲಿಲ್ಲ. ಮತ್ತು ಹೊಸ ಚಿತ್ರಕ್ಕೆ ಕೈಹಾಕಿ ಮತ್ತೊಮ್ಮೆ ತಾನೇ ಹೀರೋ ಆಗಲು ಯೋಗೇಶ್ವರ್ ಪಾಲಿಗೆ ಲಕ್ಷ್ಮಿ ಕೃಪೆಯೇ ಇರಲಿಲ್ಲ, ಹತ್ತು ಕೋಟಿ ಮೆಗಾಸಿಟಿ ದುಡ್ಡು ಕಳೆಕೊಂಡರೂ, ಅದಕ್ಕೆಂದು ತನ್ನ ಸಂಸಾರವೇ ಸರ್ವನಾಶವಾದರೂ ಯೋಗೇಶ್ವರ್‌ಗೆ ಬುದ್ಧಿ ಬರಲಿಲ್ಲ ಎಂದರೆ ಏನೆನ್ನಬೇಕು? ಸಿನಿಮಾ ಹುಚ್ಚಾ? ಅಥವಾ ಆತ್ಮಹತ್ಯಾ ಯತ್ನವಾ?


ಅದು ತಮ್ಮಯ್ಯನ ಕೊನೆಯ ದಿನವಾಗಿತ್ತು


ತಮ್ಮಯ್ಯ

ಬಹುಶಃ ರಸ್ತೆ ದಾಟಿ ಬಿಟ್ಟಿದ್ದರೆ ತಮ್ಮಯ್ಯ ಬಚಾವಾಗುತ್ತಿದ್ದ. ಇನ್ನೇನು ದಾಟಬೇಕೆನ್ನುವಷ್ಟರಲ್ಲೇ ಲಾರಿಯೊಂದು ಸಾಕ್ಷಾತ್ ಸಾವಿನಂತೆ ಅಡ್ಡ ಬಂದಿತ್ತು. ಕ್ಷಣ ನಿಂತ. ಅಷ್ಟರಲ್ಲೇ ಹಿಂಬಾಲಿಸಿ ಬಂದಿದ್ದ ಸೂರಿ ಬೀಸಿದ ಲಾಂಗು ಆತನ ತಲೆ ಸೀಳಿ ಹಾಕಿತ್ತು. ಆತನೊಂದಿಗೆ ಬಂದಿದ್ದ ಹಂತಕರೆಲ್ಲ ಒಂದೊಂದು ಲಾಂಗ್ ಬೀಸಿದ್ದಾರೆ. ಆರ್‌ಕೆ ಅಡ್ಡೆಯ ಎದುರಿಗೇ ಜನ ನೋಡು ನೋಡುತ್ತಿದ್ದಂತೆ ತಮ್ಮಯ್ಯ ನೆಲಕ್ಕುರುಳಿದ್ದ. ತಮ್ಮಯ್ಯನ ಪಾಲಿಗೆ ಅದೇ ಕೊನೆಯದಿನವಾಗಿ ಪರಿಣಮಿಸಿತ್ತು....

ಪರಿಸ್ಥಿತಿಯೇ ಹಾಗಿತ್ತು. ಯಾವುದೋ ವಿನಾಶವೊಂದಕ್ಕೆ ತವಕಿಸುವಂತಿದ್ದ ತಿಮ್ಮೇನಹಳ್ಳಿ ಊರಿಗೆ ಊರೇ ಇಬ್ಭಾಗವಾಗಿತ್ತು. ಹಿರಿಯರಂತಿದ್ದವರೆಲ್ಲ ಕುಡಿದು ಕುಡಿದೇ ಯಾವತ್ತಿಗೋ ಕಾಲಾಧೀನರಾಗಿದ್ದರು. ಹಿಂದೆ ಗುರುವಿಲ್ಲ ಮುಂದೆ ಗುರಿಯಿಲ್ಲ, ಮಾಡಲು ಕೆಲಸವಿಲ್ಲ, ಭೂಮಿ ಕೈತಪ್ಪಿ ಹೋದರೇನಂತೆ ಮನೆ ಬಾಡಿಗೆ ಬರುತ್ತಿದೆಯಲ್ಲ? ಪೋಲಿ ಬಿದ್ದ ಮಕ್ಕಳು ರೌಡಿಗಳಾಗಿ, ಜೈಲಿಗೆ ಹೋಗಿ, ಒಬ್ಬರನ್ನೊಬ್ಬರು ಕೊಂದುಕೊಳ್ಳಲು ನಿಂತಾಗಲೂ ಇದು ವಿನಾಶವಲ್ಲದೇ ಮತ್ತೇನಲ್ಲ ಎಂಬುದು ಬಹುಶಃ ಅಳಿದುಳಿದ ಹಿರಿಯರ್‍ಯಾರಿಗೂ ತೋಚಲಿಲ್ಲವೋ? ಅಥವಾ ಬೇಕಿರಲಿಲ್ಲವೋ ಬಲ್ಲವರ್‍ಯಾರು?

ಆ ಹೊತ್ತಿಗೆ ಗೋವಿಂದರಾಜನಗರಕ್ಕೆ ಕೌನ್ಸಿಲರ್ ಆಗಿದ್ದ ಸೋಮಣ್ಣನ ಶಿಷ್ಯ ಚನ್ನಪ್ಪ ಕೂಡ ಇದೇ ಗೊಲ್ಲರ ಪೈಕಿ. ಸಾಕ್ಷಾತ್ ಸೋಮಣ್ಣನವರಿಗೇ ತಿಮ್ಮೇನಹಳ್ಳಿಯ ಮೇಲೊಂದು ಹಿಡಿತವಿತ್ತು. ಮಾಜಿ ಕೌನ್ಸಿಲರ್ ರಂಗಪ್ಪನವರ ಮಗ ತಮ್ಮಯ್ಯನೇ ಅವರ ಪಕ್ಕಾ ಅನುಯಾಯಿಯಾಗಿದ್ದ. ಆಗ ವಿಜಯನಗರಕ್ಕೆ ಎಸಿಪಿಯಾಗಿದ್ದದ್ದು ಬೆಂಗಳೂರು ಕಂಡ ಮಹಾ ಚಾಣಾಕ್ಷ ಪೊಲೀಸ್ ಅಧಿಕಾರಿ ಬೆಂಕಿ ಮುನಿಯಪ್ಪ, ತಿಮ್ಮೇನಹಳ್ಳಿಗಾಗಲಿ, ವಿಜಯನಗರಕ್ಕಾಗಲಿ ಅವರೇನೂ ಹೊಸಬರಾಗಿರಲಿಲ್ಲ. ಈಗ ಆರ್‌ಪಿಸಿ ಲೇಔಟಿಗೆ ಕೌನ್ಸಿಲರ್ ಆಗಿರುವ ಜೈರಾಮ್ ಕಾಂಗ್ರೆಸ್ ನಾಯಕನಾಗಿದ್ದ. ಮಾಜಿ ಮಂತ್ರಿ ನಜೀರ್ ಬಲಗೈ ಬಂಟನಂತಿದ್ದ ಜೈರಾಮ್ ಒಂದಾನೊಂದು ಕಾಲಕ್ಕೆ ಬಿನ್ನೀಪೇಟೆಯ ಅನಧಿಕೃತ ಶಾಸಕನಂತಿದ್ದ ಕಾಲವಿತ್ತು. ಜೊತೆಗೆ ವಿಜಯನಗರ ಹೊಸಳ್ಳಿ ಭಾಗದ ಪ್ರಭಾವಿ ಸಮಾಜ ಸೇವಕ ಸಿಸಿಬಿ ನಟರಾಜ್ ಆಗಿನ್ನೂ ಎಸಿಪಿ ಬೆಂಕಿ ಮುನಿಯಪ್ಪನವರ ತಂಡದಲ್ಲಿ ನಿಪುಣ ಕಾನ್‌ಸ್ಟೇಬಲ್.


ಜೇಕೆ ಮತ್ತು ಸೂರಿ

ಇವರೆಲ್ಲ ಮನಸ್ಸು ಮಾಡಿದ್ದರೆ ತಿಮ್ಮೇನಹಳ್ಳಿಯ ಹುಡುಗರ ಜಿದ್ದಾಜಿದ್ದಿಯನ್ನು ಬಗೆಹರಿಸುವುದು ಯಾವ ಲೆಕ್ಕ?

ವಾಸ್ತವವೇನೆಂದರೆ ಹುಡುಗಾಟಿಕೆಯಲ್ಲಿ ಆರಂಭವಾದ ಹುಡುಗರ ಹೊಡೆದಾಟವೀಗ ವಿಪರೀತಕ್ಕೆ ಹೋಗಿತ್ತು. ಅದಕ್ಕೆ ಮೂಲ ಕಾರಣವಾಗಿದ್ದು ಅರುಣನ ಹತ್ಯೆ. ಅರುಣನ ಹತ್ಯೆಯಲ್ಲಿ ತಮ್ಮಯ್ಯನ ಪಾತ್ರವಿರಲಿಲ್ಲವಾದರೂ ಕೊಂದವರೆಲ್ಲ ತಮ್ಮಯ್ಯನ ಹುಡುಗರೆ. ಅದು ಗೋವಿಂದನನ್ನು ಯಾಪಾಟ ರೊಚ್ಚಿಗೇಳಿಸಿತ್ತೆಂದರೆ, ಅದಕ್ಕೆ ದೊಡ್ಡ ತಲೆಯನ್ನೇ ತೆಗೆದುಬಿಡಲು ಲೆಕ್ಕಹಾಕಿದ್ದ. ಇಂಥ ದುಸ್ಸಾಹಸವೊಂದಕ್ಕೂ ಮುನ್ನ ಜೇಕೆಯಂಥ ಬಲಾಢ್ಯನನ್ನು ತನ್ನ ಬೆನ್ನಿಗಿಟ್ಟುಕೊಳ್ಳಲೆಂದೇ ಗೋವಿಂದನ ಗ್ಯಾಂಗ್ ಲೇಔಟ್ ಮಂಜನನ್ನು ಮುಗಿಸಿತ್ತು. ಮಂಜನ ಕೊಲೆ ಕೇಸಿನಲ್ಲಿದ್ದ ಗೋವಿಂದನ ಬಂಟರಾದ ಸೂರಿ, ಕಬ್ಬಡಿ ನರಸಿಂಹ, ಮೊಬೈಲ್ ರವಿ, ಬಿಎನ್, ಲಕ್ಷ್ಮೀಶ, ನೀರಾನೆ ಹರೀಶ ಮುಂತಾದವರೆಲ್ಲರಿಗೂ ಜಾಮೀನು ಸಿಕ್ಕಿತ್ತು, Of course ಗೋವಿಂದನಿಗೂ ಜಾಮೀನು ಗಿಟ್ಟಿಸಿ ಹೊರಬರುವ ಅವಕಾಶವಿತ್ತಾದರೂ ಬೇಕಂತಲೇ ಆತ ಜಾಮೀನನ್ನು ತಿರಸ್ಕರಿಸಿ ಜೈಲಲ್ಲೇ ಕೂತುಬಿಟ್ಟ.

ಅದು ಘಾತಕ ತಂತ್ರ. ಒಬ್ಬ ಹಂತಕ ಹಾಗೇ ಜಾಮೀನು ತಿರಸ್ಕರಿಸಿ ಜೈಲು ಹೊಕ್ಕಿ ಕೂತನೆಂದರೆ ಒಂದೋ ಆತನಿಗೆ ಪ್ರಾಣಭೀತಿ ಅಥವಾ ಇಷ್ಟರಲ್ಲೇ ಮತ್ತೊಂದು ಕೊಲೆಗೆ ಆತ ಕೈ ಹಾಕುತ್ತಾನೆ ಎಂದರ್ಥ.

ಈ ಎರಡೂ ಅನಿವಾರ್ಯತೆಗಳು ಒಟ್ಟೊಟ್ಟಿಗೇ ಗೋವಿಂದನಿಗೊದಗಿ ಬಂದಿತ್ತು. ಆ ಹೊತ್ತಿಗೆ ತಮ್ಮಯ್ಯ ವಿಜಯನಗರದಲ್ಲಿ ಅದೆಷ್ಟು ಆಳವಾಗಿ ಬೇರುಬಿಟ್ಟಿದ್ದನೆಂದರೆ ಕಾರ್ಪೋರೇಷನ್ ಚುನಾವಣೆಯ ತನಕ ಆತನೇನಾದರೂ ಬದುಕಿದ್ದರೆ ಖಂಡಿತ ತಿಮ್ಮೇನಹಳ್ಳಿಯ ಕಾರ್ಪೋರೇಟರ್ ಆಗಿಬಿಡುತ್ತಿದ್ದ. ಆ ಮಟ್ಟಕ್ಕೆ ಆತನನ್ನು ಎಮ್ಮೆಲ್ಲೇ ಸೋಮಣ್ಣ ಬೆಂಬಲಿಸುತ್ತಿದ್ದ. ತಿಮ್ಮೇನಹಳ್ಳಿಯ ಮೇಲೆ ನೂರಕ್ಕೂ ಅಧಿಕ ಬಂಟರೊಂದಿಗೆ ದಾಳಿ ನಡೆಸಿ ಇನ್ಸ್‌ಪೆಕ್ಟರ್ ಮೈಲಾರಪ್ಪನವರ ಅಮಾನತ್ತಿಗೆ ಕಾರಣನಾಗಿದ್ದ ತಮ್ಮಯ್ಯನನ್ನು ಗೂಂಡಾ ಕಾಯ್ದೆಯ ಮೇಲೆ ಪೊಲೀಸರು ಜೈಲಿಗೆ ದಬ್ಬಿದಾಗ ಆತನಿಗೆ ಜಾಮೀನು ಸಿಗುವುದಕ್ಕೇ ನಾಲ್ಕು ವರ್ಷಗಳಾಗಿದ್ದವು. ಹೊರಬರುತ್ತಿದ್ದಂತೆ ವಿಜಯನಗರದ ಕುಖ್ಯಾತ ಲ್ಯಾಂಡ್ ಮಾಫಿಯಾ ಆರ್‌ಕೆ ನಾಯ್ಡು ಆತನನ್ನು ಕರೆದೊಯ್ದು ತನ್ನ ಅಡ್ಡೆಯಲ್ಲಿಟ್ಟುಕೊಂಡಿದ್ದ. ಸೈಟು ಕೊಡುತ್ತೇನೆಂದು ವಂಚಿಸಿದ್ದ ಸಹಸ್ರಾರು ಜನರನ್ನು ತಮ್ಮಯ್ಯನನ್ನು ಮುಂದಿಟ್ಟುಕೊಂಡೇ ಆರ್.ಕೆ. ಹೆದರಿಸಿದ್ದ. ತಮ್ಮಯ್ಯನಿಗೆಂದೇ ಆರ್.ಕೆ. ಸ್ಯಾಂಟ್ರೋ ಕಾರೊಂದನ್ನು ಕೊಡಿಸಿಕೊಟ್ಟಿದ್ದ. ಅದು ತಮ್ಮಯ್ಯನ ಅದೃಷ್ಟದ ಅಕೌಂಟು ಸಮೃದ್ಧಿಯಾಗಿದ್ದ ಕಾಲ. ಗೂಂಡಾ ಕಾಯ್ದೆಯ ಅಡಿಯಲ್ಲಿ ನಾಲ್ಕು ವರ್ಷಗಳ ಕಾಲ ಜೈಲಲ್ಲಿದ್ದ ತಮ್ಮಯ್ಯನಿಗೆ ವಿಶಿಷ್ಟ ಶಕ್ತಿಯೊಂದಿತ್ತು. ಆತ ಜೈಲಲ್ಲಿದ್ದ ಕಟ್ಟಾ ಖದೀಮರು, ರಣಘಾತಕಿಗಳು, ಕಳ್ಳರು, ವಂಚಕರು, ಮಜೂರ್‌ಗಳು, ಡಕಾಯಿತರು, ತಲೆಹಿಡುಕರು ಎಲ್ಲರ ಜೊತೆಗೂ ಸಲೀಸಾಗಿ ಪಳಗಿಬಿಡುತ್ತಿದ್ದ. ಅಷ್ಟೇ ಚಾಣಾಕ್ಷತೆಯಿಂದ ಅವರ ಬಾಯಿಬಿಡಿಸಿಕೊಳ್ಳುತ್ತಿದ್ದ.

ಹೀಗೆ ಜೈಲಲ್ಲಿದ್ದಾಗ ಆತ ಬೆಳೆಸಿಕೊಂಡ ಕಾಂಟ್ಯಾಕ್ಟು, ಕಲೆ ಹಾಕಿದ ಮಾಹಿತಿ ಎಲ್ಲವನ್ನೂ ಆತನಷ್ಟೇ ಚಾಣಾಕ್ಷತೆಯಿಂದ ಬಳಸಿಕೊಂಡಿದ್ದು ನಿಷ್ಣಾತ ಕ್ರೈಂ ಕಾನ್‌ಸ್ಟೇಬಲ್ ಸಿಸಿಬಿ ನಟರಾಜ್. ಆತನನ್ನು ವಿಜಯನಗರದ ಎಸಿಪಿ ಬೆಂಕಿ ಮುನಿಯಪ್ಪನವರಿಗೆ ಪರಿಚಯಿಸಿ ಕೊಟ್ಟಿದ್ದೂ ಇದೇ ನಟರಾಜ್. ಕ್ರೈಂ ಜಗತ್ತಿನಲ್ಲಿ ಇದರ ಪರಿಣಾಮ ಹೇಗಿತ್ತೆಂದರೆ; ಹೊಸಕೋಟೆಯ ಸೀರಿಯಲ್ ಕಿಲ್ಲರ್‌ಗಳಾದ ಶ್ಯಾಮ್ ಮತ್ತು ರವಿ ತಂಡವನ್ನು ತಮ್ಮಯ್ಯ ಜೈಲಿಂದ ಹೊರಬಿದ್ದ ಆರೇ ತಿಂಗಳಲ್ಲಿ ಬೆಂಕಿ ಮುನಿಯಪ್ಪನವರ ತಂಡ ಹಿಡಿದು ಹಾಕಿತ್ತು!

ರಿವೇಂಜ್ ಕಿಲ್ಲಿಂಗ್ಸ್ 15

ರಾ. ಸೋಮನಾಥ್

ಸಂಜೆ ಹೊತ್ತಾದರೆ ಬೆಂಗಳೂರು ಹೊರವಲಯದಲ್ಲಿ ಬೈಕ್‌ನಲ್ಲಿ ಓಡಾಡುತ್ತಾ ಕೈಗೆ ಸಿಕ್ಕ ಬೈಕ್ ಸವಾರರನ್ನು ಹಿಂಬಾಲಿಸಿ ರಾಡಿನಿಂದ ಬಲವಾಗಿ ತಲೆಗೆ ಹೊಡೆಯುತ್ತಿದ್ದರು ಶ್ಯಾಂ ಮತ್ತು ರವಿ. ತಲೆಗೆ ಪೆಟ್ಟು ತಿಂದು ಬೈಕ್ ಸಮೇತ ನೆಲಕ್ಕೆ ಬಿದ್ದವನೇನಾದರೂ ಬದುಕಿದ್ದರೆ ಮತ್ತೆ ಹೊಡೆದು ಕೊಲ್ಲುತ್ತಿದ್ದರು. ಸತ್ತವನ ಜೇಬಲ್ಲಿದ್ದದ್ದನ್ನೆಲ್ಲ ಹೊತ್ತೊಯ್ಯುತ್ತಿದ್ದರು. ಹಾಗೇ ಹೊಡೆತ ತಿಂದು ನೆಲಕ್ಕೆ ಬಿದ್ದು ಸತ್ತವನ ಬಳಿ ಕೆಲವೊಮ್ಮೆ ಐದೋ ಹತ್ತೋ ರೂಪಾಯಿಗಳಿರುತ್ತಿದ್ದವು. ಇಂಥವನನ್ನು ಕೊಂದರೆ ತಮಗಾಗುವ ಲಾಭವೆಷ್ಟು ಎಂಬುದನ್ನೂ ವಿವೇಚಿಸದೆ ಕೊಂದು ಬಿಡುತ್ತಿದ್ದ ಶ್ಯಾಮ್ ಅಂಡ್ ರವಿ ಗ್ಯಾಂಗ್ ಹೀಗೆ ಎರಡು ಡಜನ್ ಹತ್ಯೆಗಳನ್ನೆಸಗಿಯೂ ಆತನಕ ಪೊಲೀಸರಿಗೆ ಸಿಕ್ಕೇ ಇರಲಿಲ್ಲ.


ಕೊಲೆಯಾದ ತಮ್ಮಯ್ಯನ ಸಮಾಧಿ

ಇಂಥ ಸರಣಿ ಹಂತಕ ಜೋಡಿಯ ಮಾಹಿತಿ ಕಲೆ ಹಾಕಿ ಅವರನ್ನು ಬೆಂಕಿ ಮುನಿಯಪ್ಪನವರಿಗೆ ಹಿಡಿದು ಕೊಟ್ಟಿದ್ದೇ ತಮ್ಮಯ್ಯ. ತಮಿಳುನಾಡಿನ ಪರಮ ಕುಖ್ಯಾತ ಡಕಾಯಿತ ತಿರುಪತ್ತೂರಿನ ಕಮಲ್ ರಾಮಸ್ವಾಮಿಯನ್ನು ಹಿಡಿಯಲು ಸತತ ಹತ್ತು ವರ್ಷ ಪ್ರಯತ್ನಪಟ್ಟರೂ ತಮಿಳನಾಡು ಪೊಲೀಸರಿಂದಾಗಲಿಲ್ಲ. ಅಂಥವನನ್ನು ಎಸಿಪಿ ಬೆಂಕಿ ಮುನಿಯಪ್ಪನವರ ತಂಡ ಹಿಡಿದು ಹಾಕಿದಾಗ ಕರ್ನಾಟಕ ಮತ್ತು ತಮಿಳುನಾಡುಗಳೆರಡಕ್ಕೂ ಅಚ್ಚರಿ!


ಇನ್ಸ್‌ಪೆಕ್ಟರ್ ಚಲಪತಿ

ಇದಕ್ಕೆ ಕಾರಣನಾದವನು ತಮ್ಮಯ್ಯ. ಈ ಎರಡೂ ತಂಡಗಳನ್ನು ಹಿಡಿದಿದ್ದಕ್ಕಾಗಿ ಸಿಸಿಬಿ ನಟರಾಜ್ ಸೇರಿದಂತೆ ಎಸಿಪಿ ಬೆಂಕಿ ಮುನಿಯಪ್ಪನವರ ತಂಡಕ್ಕೆ ರಾಷ್ಟ್ರಪತಿ ಪದಕ ಪ್ರಾಪ್ತಿಯಾಯಿತು. ಆಗ ಬೆಂಗಳೂರು ದಕ್ಷಿಣ ಡಿಸಿಪಿಯಾಗಿದ್ದ ನಿಸಾರ್ ಅಹ್ಮದ್, ಜಂಟಿ ಕಮಿಷನರ್ ಸುರೇಶ್ ಬಾಬು ಮುಂತಾದ ಹಿರಿಯ ಪೊಲೀಸ್ ಅಧಿಕಾರಿಗಳಿಗೆಲ್ಲ ಇಂಥದೊಂದು ಭರ್ಜರಿ ಭೇಟೆಗಾಗಿ ರಾಷ್ಟ್ರಪತಿ ಪದಕವೇನಾದರೂ ಸಿಕ್ಕಿದ್ದರೆ ಅದಕ್ಕೆ ಕಾರಣನಾದವನೇ ತಿಮ್ಮೇನಹಳ್ಳಿ ತಮ್ಮಯ್ಯ. ಬಹುಶಃ ಈತನಕ ಪೊಲೀಸ್ ಇಲಾಖೆ ಆತನಂಥ ಓರ್ವ ಚಾಣಾಕ್ಷ ಮತ್ತು ಕಾರ್ಯಸಮರ್ಥ ಪೊಲೀಸ್ ಇನ್‌ಫಾರ್ಮೆಂಟ್‌ನನ್ನು ಕಂಡಿರಲಿಕ್ಕಿಲ್ಲ. 1999 ರಿಂದ ತಾನು ಕೊಲೆಯಾದ 2001 ರ ತನಕ ಆತ ಅರವತ್ತಕ್ಕೂ ಹೆಚ್ಚು ಪ್ರಕರಣಗಳ ತನಿಖೆಗೆ ಪ್ರಮುಖ ಕಾರಣಕರ್ತನಾಗಿದ್ದ. ಈ ಪೈಕಿ ವಿಜಯನಗರಕ್ಕೆ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ರೈ ಸರ್ವೀಸ್ ರಿವಾಲ್ವರನ್ನು ಯಾರೋ ಕಳ್ಳನೊಬ್ಬ ಕದ್ದಿದ್ದನ್ನು ಆತ ಅದೆಷ್ಟು ಚಾಕಚಕ್ಯತೆಯಿಂದ ಪತ್ತೆಹಚ್ಚಿಕೊಟ್ಟನೆಂದರೆ, ಕದ್ದವನು ಅದನ್ನು ತನಗೇ ಮಾರಲು ಬರುವಂತೆ ಜಾಲವೊಂದನ್ನು ಹೆಣೆದಿದ್ದ.

ಆತನ ಮೇಲೆ ಪೊಲೀಸ್ ಇಲಾಖೆಯ ಋಣವೇ ದೊಡ್ಡದಿತ್ತು. ಪಕ್ಕದಲ್ಲಿ ಜಗ್ಗಸ ಗ್ಯಾಂಗ್ ಅತ್ತಿಗುಪ್ಪೆಯಲ್ಲಿ ಸ್ವಾಮಿಯ ಗ್ಯಾಂಗ್ ಪಾಳ್ಯದಲ್ಲಿ ಟಿ.ಸಿ. ಕಾಮಾಕ್ಷಿಪಾಳ್ಯದಲ್ಲಿ ಮಚ್ಚಸ ಗ್ಯಾಂಗ್, ಲಗ್ಗೆ ಸುತ್ತಮುತ್ತಲ ಏರಿಯ ತ್ತಿದ್ದ ಮುಲಾಮು, ವಿಜ ಕಾಂತ ಮತ್ತು ಗುಂಡ ಆತನ ಮಾತನ್ನು ಚಾಚೂತಪ್ಪದೇ ತಿಮ್ಮೇನಹಳ್ಳಿ ಸುತ್ತಮುತ್ತಲ ಏರಿಯಾಗಳಲ್ಲಿ ಖ್ಯಾತಿ ಮತ್ತು ಕುಖ್ಯಾತಿಗಳೆರಡೂ ದಿನೇದಿನೇ ಕಾರ್ಪೋರೇಷನ್ ಚುನಾವಣೆಯೇನಾದರೂ ತಮ್ಮಯ್ಯ ಯಾವುದೇ ಪಕ್ಷದ ಹ ಗೆದ್ದುಬಿಡುತ್ತಿದ್ದ. ಪಕ್ಕಾ ರಾಜಕಾರಣಿಯಂ ಧರಿಸಿ, ಜೊತೆಗಿದ್ದ ಹುಡುಗರನ್ನೆಲ್ಲ ದೂರವಿ ಆಪ್ತರನ್ನಷ್ಟೇ ಜೊತೆಗಿಟ್ಟುಕೊಂಡು ಸುತ್ತು ಬದುಕಲ್ಲಿ ಬಹುಶಃ ಅದೇ ಸುವರ್ಣ ಇಷ್ಟರಲ್ಲೇ ಆತ ಮದುವೆಯಾಗುತ್ತೇನೆಂದು ಆತನ ತಾಯಿ ಜಯಮ್ಮನವರು ಹೆಣ್ಣು ನಿಶ್ಚಿತಾರ್ಥವೂ ಮುಗಿದಿತ್ತು, ಮದುವೆಗಿನ್ನು ಮಾತ್ರ ಬಾಕಿಯಿತ್ತು.


ಆದರೆ ವಿಧಿಯ ಲೆಕ್ಕಾಚಾರವೇ ಲೇಔಟ್ ಮಂಜನ ಕೊಲೆ ಕೇಸಿನಲ್ಲಿ ಜಾಮೀ ಹೊರಬರದೇ ಜೈಲಲ್ಲೇ ಕುಳಿತಿದ್ದ ಅಂಥದ್ದೊಂದು ನಿರ್ಧಾರಕ್ಕೆ ಕಾರಣವೇನೆಂ ಕಿಂಚಿತ್ತಾದರೂ ತಲೆ ಕೆಡಿಸಿಕೊಂಡಿದ್ದರೆ ಆತ ಮದುವೆಯ ಸಂಭ್ರಮದಲ್ಲಿ ಯಾಮಾರಿ

ಅದು 2001 ರ ಏಪ್ರಿಲ್ 29 ಮಾಮೂಲಿನಂತೆ ತನ್ನ ಸ್ಯಾಂಟ್ರೋ ಕಾರಿ ಹಳ್ಳಿಯ ತನ್ನ ಮನೆಯಿಂದ ಸೀದಾ ಬಂದವನು ಸರ್ವೀಸ್ ರಸ್ತೆಯಲ್ಲಿ ಅತ್ತಿಗು ಬಂಕ್ ಎದುರಿಗಿದ್ದ ಲ್ಯಾಂಡ್ ಡೀಲರ್ ಇನ್ನೇನು ಸಮೀಪಿಸಬೇಕೆನ್ನುವಷ್ಟರಲ್ಲೇ ಕಾರೊಂದು ಅಡ್ಡಗಟ್ಟದಂತಾಯ್ತು. ಕಾ ಸರಿಸಬೇಕೆಂದರೆ ಅದಕ್ಕೂ ಆಸ್ಪದವಾಗದಂ ಆಟೋ ಒತ್ತಿ ನಿಂತಿತ್ತು. ತಮ್ಮಯ್ಯನಿ ಅರ್ಥವಾಗಿತ್ತು. ಹಿಂದೆ ಮುಂದಿದ್ದ ಹದಿನೈದಕ್ಕೂ ಹೆಚ್ಚು ಮಂದಿ ಹಂತಕರು ಇಳಿಯುತ್ತಿದ್ದರೆ, ಅವರ ಕೈಯಲ್ಲಿ ಉದ್ದದ ಲಾಂಗ್! ತಿಮ್ಮೇನಹಳ್ಳಿ ಸೂರಿ!

ಕಾರಿನ ಬಾಗಿಲು ತೆಗೆದು ಪೆಟ್ರೋಲ್ ಬಂಕ್‌ನತ್ತ ಜೊತೆಗಿದ್ದ ಸ್ವಾಮಿ ಮತ್ತೆ ಕಾರಲ್ಲೇ ಇದ್ದರು. ಬಹುಶಃ ಬಿಟ್ಟಿದ್ದರೆ ತಮ್ಮಯ್ಯ ಬ ಇನ್ನೇನು ದಾಟಬೇಕೆನ್ನುವ ಯೊಂದು ಸಾಕ್ಷಾತ್ ಸಾ ಬಂದಿತ್ತು. ಕ್ಷಣ ನಿಂತ. ಅಷ್ಟ ಬಂದಿದ್ದ ಸೂರಿ ಬೀಸಿದ ತಲೆ ಸೀಳಿ ಹಾಕಿತ್ತು. ನೀರಾನೆ ಹರೀಶ, ಬಿಎನ್, ಕರಿನರಸಿಂಹ ಹಂತಕರೆಲ್ಲ ಒಂದೊಂದು ಲಾಂಗ್ ಬೀಸಿದ ಆರ್‌ಕೆ ಅಡ್ಡೆಯ ಎದುರಿಗೇ ಜನ ನೋಡು ತಮ್ಮಯ್ಯ ನೆಲಕ್ಕುರುಳಿದ್ದ. ಅಲ್ಲಿಗೆ ಗೋವಿಂದನ ಜಿದ್ದು ಮುಗಿದಂತಾಗಿತ್ತು.

ಸುದ್ದಿ ಕೇಳಿ ಗೋವಿಂದ ಜೈಲಿನ ಸರ ನಕ್ಕಿರಬೇಕು. ಅದೇನು ಮರ್ಮವೋ ಜೇ ವೇಳೆಗೆ ಇನ್ನಾವುದೋ ಕೇಸಲ್ಲಿ ಜೈಲು ಆಗ ಇನ್ಸ್‌ಪೆಕ್ಟರ್ ಆಗಿದ್ದ ಚಲಪತಿ ಇದ ಗ್ಯಾಂಗಷ್ಟೇ ಅಲ್ಲದೇ ಜೊತೆಗೆ ಜೇಕೆ ಪರಮಾಪ್ತ ನಾಯ್ಡುವನ್ನೂ ಸೇರಿಸಿ ಕೇ ಹಿಂದೆಲ್ಲಾ ಯಾರ್‍ಯಾರೋ ಹುಡುಗರ ಮುಂದಿಟ್ಟು ಶೋಕಿಸಿದ್ದ ತಾಯಿ ಜಯ ತನ್ನ ಮಗನ ಶವವನ್ನೇ ಮ ಎದೆಬಡಿದುಕೊಳ್ಳಬೇಕಾಯಿತು. ಸರಿಸು ಸಾವಿರ ಜನರಿದ್ದ ತಮ್ಮಯ್ಯನ ಅಂತ್ಯಕ್ರಿ ಪೈಕಿ ಆತನ ಬಲಗೈ ಬಂಟ ಕಾಮಾಕ್ಷಿ ಇದ್ದ. ಮತ್ತು ತಮ್ಮಯ್ಯನ ಶವದ 'ನಿನ್ನನ್ನು ಕೊಂದ ಯಾರನ್ನೂ ಉಳಿ ಭಯಂಕರ ಶಪಥಗೈದ. ಆದರೆ ಅದ ಮೊದಲೇ ತಾನೇ ನಿಕಾಲಿಯಾಗುತ್ತೇನೆಂ ಗೊತ್ತಿತ್ತು?

(ಮುಂ



ಬಂ ಮತ್ತೆ ಕಾಂಗ್ರೆಸ್‌ಗೆ

ಈ ಇಳಿ ವಯಸ್ಸಿನಲ್ಲಿ ಉತ್ತರ ಪ್ರದೇಶದ ಮುಲಾಯಂಸಿಂಗ್‌ರವರ ಸಮಾಜವಾದಿ ಪಕ್ಷದ ಸೈಕಲ್ ಹತ್ತಿ ಕರ್ನಾಟಕ ಸುತ್ತುವುದು ಸುಲಭವಲ್ಲ ಎಂಬುದು 'ಬಂ'ಗೆ ಈಗ ಅರಿವಾಗಿದೆ. ಅದಕ್ಕೆ ಹಳೆಮನೆಯೇ ಗತಿ ಎಂದು ಸೈಕಲ್ ಸವಾರಿ ನಿಲ್ಲಿಸಿ ಕಾಂಗ್ರೆಸ್ ಬಾಗಿಲು ತಟ್ಟುತ್ತಿದ್ದಾರೆ.

ಮುಗಿಯಿತೆ ಸೈಕಲ್ ಸವಾರಿ?

'ಬಂಗಾರಪ್ಪ ಅಂದ್ರೆ ಮರದಿಂದ ಮರಕ್ಕೆ ಹಾರುವ [illegible]ಗ'

-ಹಾಗಂತ ಬಹಳ ಹಿಂದೆ ಲಂಕೇಶ್ ಬರೆದಿದ್ದರು. [illegible] ಮಾತನ್ನು ಹಲವು ಬಾರಿ ಸತ್ಯ ಎಂದು [illegible]ತುಪಡಿಸಿರುವ 'ಬಂ' ಈಗ ಮತ್ತೊಮ್ಮೆ 'ಹಾರಲು' [illegible]ಟದ್ದಾರೆ!

ಬಂಗಾರಪ್ಪ ಮತ್ತೆ ಕಾಂಗ್ರೆಸ್ ಸೇರಲಿದ್ದಾರೆ!!

'ಬಂ' ರಾಜಕೀಯ ನಡವಳಿಕೆಯನ್ನು ಗಮನಿಸಿದವ[illegible] ಇದು ಆಶ್ಚರ್ಯದ ಸುದ್ದಿಯೇನೂ ಅಲ್ಲ. ಅವರಷ್ಟು [illegible] ಕಾಂಗ್ರೆಸ್ ಬಿಟ್ಟು ಮತ್ತೆ ಅದೇ ಪಕ್ಷ ಸೇರಿದ [illegible]ಕ ರಾಜ್ಯದಲ್ಲಿ ಮಾತ್ರವಲ್ಲ ದೇಶದಲ್ಲಿಯೇ ಯಾರೂ [illegible] ಈ ಇಳಿ ವಯಸ್ಸಿನಲ್ಲಿ ಉತ್ತರ ಪ್ರದೇಶದ [illegible]ಯಂಸಿಂಗ್‌ರವರ ಸಮಾಜವಾದಿ ಪಕ್ಷದ ಸೈಕಲ್ [illegible] ಕರ್ನಾಟಕ ಸುತ್ತುವುದು ಸುಲಭವಲ್ಲ ಎಂಬುದು [illegible]ಗೆ ಈಗ ಅರಿವಾಗಿದೆ. ಅದಕ್ಕೆ ಹಳೆಮನೆಯೇ [illegible]ಂದು ಕಾಂಗ್ರೆಸ್ ಬಾಗಿಲು ತಟ್ಟುತ್ತಿದ್ದಾರೆ.

ಹಣ ಬರಲಿಲ್ಲ!

[illegible] ರಾಜಕೀಯ ಆರಂಭಿಸಿದ್ದೇ ಸಮಾಜವಾದಿ [illegible] ಮತ್ತೆ ಈ ಪಕ್ಷವನ್ನು ರಾಜ್ಯದಲ್ಲಿ ಕಟ್ಟಿ [illegible]ಮಂತ್ರಿಯಾಗುತ್ತೇನೆ' ಎಂದು ಹೇಳುತ್ತಾ 'ಬಂ' [illegible] ಬಾರಿ ರಾಜ್ಯ ಸುತ್ತಿದರೂ ಉಪಯೋಗವಾಗುವ ಲಕ್ಷಣಗಳು ಕಂಡುಬರಲಿಲ್ಲ. ಇದ್ದಬದ್ದ ಬೆಂಬಲಿಗರಿಂದ ಹಣ ಖರ್ಚು ಮಾಡಿಸಿ ರ್‍ಯಾಲಿಗಳನ್ನು ನಡೆಸಿದ್ದಷ್ಟೇ ಬಂತು. ಇತ್ತ ಅಮರ್‌ಸಿಂಗ್ ಎಂಬ ಸಮಾಜವಾದಿ ಪಕ್ಷದ ರಾಜಕೀಯ ದಳ್ಳಾಳಿ ಏನೂ ಲಾಭ ಇಲ್ಲದ ಬಂಗಾರಪ್ಪರನ್ನು ದೂರ ಇಟ್ಟು, ಪಕ್ಷವನ್ನು ಹೀಗೆ ಕಟ್ಟಿ ಎಂಬ ಒಣ ವೇದಾಂತ ಹೇಳಲು ಶುರು ಮಾಡಿದ್ದಾನೆ. ಇದರಿಂದ 'ಬಂ'ಗೂ ಬೇಸರವಾಗಿದೆಯಂತೆ.



ಹುಬ್ಬಳ್ಳಿಯಲ್ಲಿ ಸಾವಿರಾರು ಜನರನ್ನು ಸೇರಿಸಿ, ಸಮಾವೇಶ ನಡೆಸಿ 'ನನಗೆ ಇನ್ನೂ ಶಕ್ತಿ ಇದೆ. ರಾಜ್ಯದಲ್ಲಿ ಪಕ್ಷ ಕಟ್ಟುತ್ತೇನೆ. ನಿಮ್ಮ ಕಡೆಯಿಂದ ಎಲ್ಲ ಸಹಕಾರ ನೀಡಿ' ಎಂದು 'ಬಂ' ನೇರವಾಗಿ 'ಸಮಾಜವಾದಿ'ಗಳಿಗೆ ಅಲವತ್ತುಕೊಂಡರೂ ಉಪಯೋಗವಾಗಲಿಲ್ಲ. ನಟಿಯರಾದ ಜಯಾ ಬಚ್ಚನ್, ಜಯಪ್ರದಾ ಅವರ ಪ್ರದರ್ಶನ ಏರ್ಪಡಿಸಿದ್ದೆಲ್ಲಾ ವೇಸ್ಟಾಯಿತು.

ಅಮಿತಾಭ್ ಬಚ್ಚನ್, ಅನಿಲ್ ಅಂಬಾನಿ ಸೇರಿದಂತೆ ಉದ್ಯಮಿಗಳ ಬೆಂಬಲ ಇರುವ ಸಮಾಜವಾದಿ ಪಕ್ಷದಿಂದ ಪಕ್ಷ ಕಟ್ಟಲು ಹಣಕಾಸಿನ ನೆರವು ದೊರೆಯಲಿದೆ ಎಂದೇ ಸಂಬದ್ಧ ಬಂಗಾರಪ್ಪಗೆ ಈಗ [illegible]ಗಿದೆ. ಸದ್ಯ ರಾಜಕೀಯ ಕಣಕ್ಕಿಳಿದು ಮಲ್ಲಯುದ್ಧ ಮಾಡುವುದಕ್ಕಿಂತ 'ಮುದಿಹುಲಿ'ಯಂತೆ ಘರ್ಜಿಸಿ, ರಾಜಕಾರಣ ಮಾಡುವುದೇ ಲೇಸು ಎಂಬ ಜ್ಞಾನೋದಯ ಕೂಡ ಆದಂತಿದೆ. ಅದಕ್ಕೆ ಕಾಂಗ್ರೆಸ್ಸೇ ಸೂಕ್ತ ಎಂದು ತೀರ್ಮಾನಿಸಿ ಕಾಶ್ಮೀರದ ಮುಖ್ಯಮಂತ್ರಿ ಗುಲಾಂ ನಬಿ ಅಜಾದ್‌ಗೆ ಫೋನ್ ಹಚ್ಚಲಾರಂಭಿಸಿದ್ದಾರೆ.

ಅಜಾದ್ ಜಾದು ನಡೆದಿತೇ?

ಗುಲಾಂ ನಬಿ ಅಜಾದ್‌ರೊಂದಿಗಿನ 'ಬಂ' ಸ್ನೇಹ ಹಳೆಯದು. ಈ ಸ್ನೇಹಿತನ ಮಾತೂ ಕೇಳದೆ ಬಿಜೆಪಿ ಸೇರಿ, ಅಲ್ಲಿಯ 'ಗರ್ಭಗುಡಿ' ಸಂಸ್ಕೃತಿಗೆ ಬೇಸತ್ತು ಸಮಾಜವಾದಿ ಪಕ್ಷ ಸೇರಿ, ಈಗ ಮತ್ತೆ ಕಾಂಗ್ರೆಸ್ ಸೇರಲು ಮುಂದಾಗಿರುವ ಈ ಹಿರಿಯ ಸ್ನೇಹಿತನನ್ನು ಪಕ್ಷಕ್ಕೆ ಬರಮಾಡಿಕೊಳ್ಳಲು ಅಜಾದ್ ಎಷ್ಟು ಉತ್ಸಾಹ ತೋರಲಿದ್ದಾರೆಂಬುದರ ಮೇಲೆ ಬಂಗಾರಪ್ಪರ ರಾಜಕೀಯ ಭವಿಷ್ಯ ನಿಂತಿದೆ. 'ಬಂ' ಪಕ್ಷ ಬಿಟ್ಟಾಗಿನಿಂದ ಮೇಡಂ ಸೋನಿಯಾಗಾಂಧಿಯವರನ್ನು ಬಾಯಿಗೆ ಬಂದಂತೆ ಬೈದಿರುವುದನ್ನು ಪಕ್ಷದ ಹೈಕಮಾಂಡ್ ಗಮನಿಸದೇ ಏನೂ ಇಲ್ಲ. ಈಗ ಯಾವ ಮುಖ ಇಟ್ಟುಕೊಂಡು ಮತ್ತೆ ಕಾಂಗ್ರೆಸ್ ಕದ ತಟ್ಟುತ್ತಿದ್ದಾರೋ ಗೊತ್ತಿಲ್ಲ. ಅಜಾದ್ ಏನಾದರೂ 'ಜಾದೂ' ಮಾಡಿದರೆ ಪಕ್ಷ ಮತ್ತೆ ಅವರಿಗೆ ಬಾಗಿಲು ತೆರೆಯಬಹುದು. ಆದರೆ 'ಬಂ'ಗೆ ಹಿಂದಿನಷ್ಟು ಗೌರವ ಸಿಕ್ಕಲಿಕ್ಕಿಲ್ಲ. ಬಂಗಾರಪ್ಪರನ್ನು ನೆಪಮಾತ್ರಕ್ಕೆ ಪಕ್ಷಕ್ಕೆ ಸೇರಿಸಿಕೊಂಡರೆ ಪಕ್ಷಕ್ಕೇನಾದರೂ ಲಾಭವಾದೀತೆ ಎಂಬ ಲೆಕ್ಕಾಚಾರ ಈಗ ನಡೆದಿದೆಯಂತೆ.

'ಬಂ' ಪರ ಸಿದ್ದು ವಕಾಲತ್ತು

ಆಶ್ಚರ್ಯಕರ ಸುದ್ದಿ ಎಂದರೆ ಇತ್ತೀಚೆಗಷ್ಟೇ ಕಾಂಗ್ರೆಸ್ ಸೇರಿ, ಪಕ್ಷದಲ್ಲಿದ್ದ ಹಿರಿಯ ನಾಯಕರ ನಿದ್ರೆಗೆಡಿಸಿರುವ ಸಿದ್ರಾಮಯ್ಯ 'ಬಂ'ರನ್ನ ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂದು ವಕಾಲತ್ತು ವಹಿಸಿರುವುದು. ಸಿದ್ರಾಮಯ್ಯನವರ ಮಾತನ್ನು ಗಂಭೀರವಾಗಿ ಪರಿಗಣಿಸುತ್ತಿರುವ ಹೈಕಮಾಂಡ್ 'ಬಂ' ಸೇರ್ಪಡೆಗೆ ಹಸಿರು ನಿಶಾನೆ ತೋರಿಸಲೂಬಹುದು.

ಜೆಡಿಎಸ್ ಮತ್ತು ಬಿಜೆಪಿ ಒಕ್ಕಲಿಗ ಮತ್ತು ಲಿಂಗಾಯಿತರ ಪಕ್ಷಗಳಾಗಿರುವುದರಿಂದ ಹಿಂದುಳಿದ ವರ್ಗದವರಿಗೆ ಕಾಂಗ್ರೆಸ್ ಆದ್ಯತೆ ನೀಡಿದಲ್ಲಿ ಅಧಿಕಾರಕ್ಕೆ ಬರುವುದು ಖಚಿತ ಎಂಬುದು ಸಿದ್ರಾಮಯ್ಯನವರ ವಾದ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಾಯಕ ಎಂದು ಗುರುತಿಸಿಕೊಂಡಿರುವ ಬಂಗಾರಪ್ಪ ಪಕ್ಷಕ್ಕೆ ಬಂದರೆ ಹಿಂದುಳಿದವರ ಮತಗಳು ಹಂಚಿಹೋಗದಂತೆ ನೋಡಿಕೊಳ್ಳಬಹುದು. ಜೊತೆಗೆ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಕಡುವೈರಿಯಾಗಿರುವ ಸಮಾಜವಾದಿ ಪಕ್ಷಕ್ಕೆ ರಾಜ್ಯದಲ್ಲಿ ನೆಲೆಯೇ ಇಲ್ಲದಂತೆ ಮಾಡಬಹುದು ಎಂದು ಸಿದ್ರಾಮಯ್ಯ ಹೈಕಮಾಂಡ್ ಗಮನ ಸೆಳೆದಿದ್ದಾರಂತೆ.


ಹಿಂದುಳಿದ ವರ್ಗಗಳ ನಾಯಕರನ್ನೆಲ್ಲಾ ಸೇರಿಸಿ, ದೇವೇಗೌಡರಿಗೆ ತಕ್ಕ ಪಾಠ ಕಲಿಸಬೇಕೆನ್ನುವುದು ಸಿದ್ದು ಆಲೋಚನೆ. 'ಬಂ' ಎಷ್ಟೇ ಬಾಯಿಬಡಿದುಕೊಂಡರೂ ಕುಮಾರಸ್ವಾಮಿ ಮತ್ತು ದೇವೇಗೌಡರು ತನ್ನನ್ನು ಮುಖ ಎತ್ತಿಯೂ ನೋಡದಿರುವುದರಿಂದ 'ಬಂ'ಗೆ ಈಗ ದೇವೇಗೌಡರೆಂದರೆ ಅಷ್ಟಕಷ್ಟೇ. ಅದಕ್ಕೆ ಸಿದ್ರಾಮಯ್ಯ 'ಬಂ'ಗೆ ಬಲೆ ಬೀಸಿದ್ದಾರೆ.

ಎಲ್ಲವೂ ಬಂಗಾರಪ್ಪ ಅಂದುಕೊಂಡಂತೆ ನಡೆದರೂ ಅವರು ಮತ್ತೆ ಮುಖ್ಯಮಂತ್ರಿಯಾಗುವುದು ಕನಸಾಗಿಯೇ ಉಳಿಯಲಿದೆ. ಆದರೆ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನವೋ, ಯಾವುದೋ ರಾಜ್ಯದ ರಾಜ್ಯಪಾಲ ಹುದ್ದೆಯೋ ದೊರೆಯಬಹುದು. ಅಧಿಕಾರದಿಂದ ದೂರ ಉಳಿದು, ಕುಂಡೆ ಸುಟ್ಟ ಬೆಕ್ಕಿನಂತಾಡುತ್ತಿರುವ ಬಂಗಾರಪ್ಪರಿಗೆ ಯಾವ ಅಧಿಕಾರ ಸಿಕ್ಕರೂ ಸಾಕೆನ್ನುವ ಸ್ಥಿತಿ ಬಂದಿದೆ!

'ಬಂ' ಬೆಂಬಲಿಗರು ದಿಕ್ಕಾಪಾಲು!



ಬಾಂಬ್ ಕೃಷ್ಣಮೂರ್ತಿ



ಕಾಗೋಡು


'ಬಂ' ಮರಳಿ ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸುದ್ದಿಯನ್ನು ಅದ್ಯಾಗೋ ಗ್ರಹಿಸಿದ ಅವರ ಬೆಂಬಲಿಗರು ಒಬ್ಬೊಬ್ಬರು ಒಂದೊಂದು ದಿಕ್ಕು ಹಿಡಿದಿದ್ದಾರೆ. 'ಬಂ'ರ ಸ್ವಾರ್ಥ ರಾಜಕಾರಣ ಅವರಲ್ಲಿ ರೇಜಿಗೆ ಹುಟ್ಟಿಸಿದೆ.

'ಬಂ' ಸಮಾಜವಾದಿ ಪಕ್ಷ ಸೇರಿದಾಗ ಬಿಜೆಪಿಯಲ್ಲಿದ್ದರೂ ಹಿಂದು-ಮುಂದೆ ನೋಡದೇ ಅವರೊಂದಿಗೆ ಗುರುತಿಸಿಕೊಂಡಿದ್ದ ಶಿವಮೊಗ್ಗ ಜಿಲ್ಲೆ ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ ಮತ್ತು ಹೊಸನಗರದ ಶಾಸಕ ಹರತಾಳು ಹಾಲಪ್ಪ 'ಬಂ'ಗೆ ಗುಡ್‌ಬೈ ಹೇಳಲು ಸಿದ್ಧತೆ ನಡೆಸಿದ್ದಾರೆ.

'ಬಂ' ವಿರುದ್ಧ ಬಹಿರಂಗವಾಗಿಯೇ ಮಾತನಾಡುತ್ತಿರುವ ಶಾಸಕ ಗೋಪಾಲಕೃಷ್ಣ ಬೇಳೂರು ಜಾತ್ಯತೀತ ಜನತಾದಳದ ಏಣಿ ಹತ್ತಿದ್ದಾರೆ. 'ಬಂ'ರೊಂದಿಗೆ ಸೇರಿ ತಾವು ಕಾಂಗ್ರೆಸ್ ಸೇರಿದರೆ ಮುಂದೆ ಶಾಸಕರಾಗುವುದು ಕಷ್ಟ ಎಂಬುವುದು ಗೋಪಾಲಕೃಷ್ಣಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ಸಾಗರ ಕ್ಷೇತ್ರದಲ್ಲಿ ಕಾಗೋಡು ತಿಮ್ಮಪ್ಪರನ್ನು ಬಿಟ್ಟು ಕಾಂಗ್ರೆಸ್ ಇವರಿಗೆಂದೂ ಟಿಕೆಟ್ ನೀಡದು. ಮುಂದೆ ರಾಜಕೀಯ ಅತಂತ್ರ ಸ್ಥಿತಿ ಅನುಭವಿಸುವುದಕ್ಕಿಂತ ಈಗಲೇ ಪಕ್ಷ ಬದಲಾಯಿಸುವುದು ಒಳ್ಳೆಯದು ಎಂಬ ನಿರ್ಧಾರಕ್ಕೆ ಶಾಸಕ ಗೋಪಾಲಕೃಷ್ಣ ಬಂದಿದ್ದಾರೆ. ಹೀಗಾಗಿ ಬಿಜೆಪಿ ತೊರೆದು ಜನತಾದಳ ಸೇರಲು ಸಿದ್ಧರಾಗಿರುವ ಶಾಸಕರೊಂದಿಗೆ ತಾವೂ ಸೇರಿಕೊಂಡಿದ್ದಾರೆ. ಒಂದು ಮೂಲದ ಪ್ರಕಾರ ಪಕ್ಷ ಸೇರುವ ಕುರಿತು ಗೋಪಾಲಕೃಷ್ಣ ಸಂತೋಷ್ ಲಾಡ್ ಮೂಲಕ ಈಗಾಗಲೇ ಮುಖ್ಯಮಂತ್ರಿ ಕುಮಾರಸ್ವಾಮಿಯೊಂದಿಗೆ ಮಾತುಕತೆ ನಡೆಸಿದ್ದಾರೆ.

ಶಾಸಕ ಹರತಾಳು ಹಾಲಪ್ಪರ ಸ್ಥಿತಿ ಇನ್ನೂ ಗೊಂದಲವಾಗಿದೆ. 'ಬಂ'ರಿಂದ ಸ್ವಲ್ಪಸ್ವಲ್ಪವೇ ದೂರ ಸರಿಯುತ್ತಿರುವ ಹಾಲಪ್ಪ 'ಬಂ' ರಾಜಕೀಯ ವರ್ಚಸ್ಸು ಕುಸಿಯುತ್ತಿರುವುದರಿಂದ ಮುಂದೇನು ಎಂಬ ಚಿಂತೆಯಲ್ಲಿದ್ದಾರೆ. ಜನತಾದಳ ಸೇರಿದರೆ ಮುಂದೆ ಬಾಂಬ್ ಕೃಷ್ಣಮೂರ್ತಿ, ಮಾಜಿ ಶಾಸಕ ಸ್ವಾಮಿರಾವ್ ಬಿಡಲಿಕ್ಕಿಲ್ಲ. ಕಾಂಗ್ರೆಸ್ ಸೇರಲು ಟಿಕೆಟ್ ಸಿಗುತ್ತದೆಯೋ ಇಲ್ಲವೋ ಎಂಬ ಆತಂಕ ಕಾಡುತ್ತಿದೆ. ಯಾವುದಕ್ಕೂ ಕ್ಷೇತ್ರ ಪುನರ್ ವಿಂಗಡನೆಯಾದಾಗ ಈ ಕ್ಷೇತ್ರ ಉಳಿಯುತ್ತದೆಯೇ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಹೀಗಾಗಿ ಬಿಜೆಪಿಯಲ್ಲಿಯೇ ದಿನ ದೂಡುತ್ತಿದ್ದಾರೆ.

ಇನ್ನು ಶಿವಮೊಗ್ಗದಲ್ಲಂತೂ ಉಳಿದುಳಿದ ಯಾವ ಬೆಂಬಲಿಗರಿಗೂ ತೋರಿಸಲು ಮುಖವೇ ಇಲ್ಲ. ಹಿರಿಯ ಪತ್ರಕರ್ತ ನಾಗೇಂದ್ರರಾವ್ ಮಾತ್ರ 'ಬಂ' ಮಾತನ್ನು ವೇದವಾಕ್ಯ ಎಂದು ಪಾಲಿಸುತ್ತಾ ಪಕ್ಷಕ್ಕೆ ಒಂದಿಷ್ಟು ಮರ್ಯಾದೆ ತರುವ ಕೆಲಸ ಮಾಡುತ್ತಿದ್ದಾರೆ.




ಬೆಚ್ಚಿಬಿದ್ದ ಖರ್ಗೆ

ಮೈತುಂಬಾ ಇರುವ ಖಾಯಿಲೆಗೆ ಯಾವಾಗಲೂ ಮಾತ್ರೆ ತಿನ್ನುತ್ತಾ ಸದಾ ಔಷಧಿಯ ಮತ್ತಿನಲ್ಲೇ ಇರುವ ಮಲ್ಲಿಕಾರ್ಜುನ ಖರ್ಗೆ ಸಿದ್ದುವಿನ ಈ ವ್ಯವಸ್ಥಿತ ರಾಜಕೀಯ ನೋಡಿ ಬೆಚ್ಚಿಬಿದ್ದಿದ್ದಾರೆ. ಹಿಂದುಳಿದ ವರ್ಗಗಳನ್ನು ಒಗ್ಗೂಡಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನನ್ನ ಪಾತ್ರವೇನು ಎಂಬ ಲೆಕ್ಕಾಚಾರ ಹಾಕುತ್ತಲೇ ಇದ್ದಾರೆಯಾದರೂ ಅವರಿಗಿನ್ನೂ ಉತ್ತರ ದೊರಕಿಲ್ಲ! [illegible] ಕಾಂಗ್ರೆಸ್‌ಗೆ ಬರುತ್ತಾರೆ ಎಂದಾದರೆ ಬರಮಾಡಿಕೊಳ್ಳಬೇಕೋ? ವಿರೋಧಿಸಬೇಕೋ? ಎಂಬ ಗೊಂದಲದಲ್ಲಿಯೇ [illegible]ರಿದ್ದಾರೆ. ಒಳಗೊಳಗೇ ಅಧಿಕಾರದ ಕನಸು ಕಾಣುತ್ತಿರುವ ಪಕ್ಷದ ಅಗ್ರ ನಾಯಕರಲ್ಲಿ ಸಮರ್ಥ [illegible] ಇಲ್ಲ. ಸಿದ್ರಾಮಯ್ಯನವರ ಹಿಂದುಳಿದವರನ್ನು ಒಗ್ಗೂಡಿಸುವ ಈ 'ರಾಜಕೀಯ'ಕ್ಕೆ ಇವರೆಲ್ಲಾ [illegible] ಸಹಕಾರ ನೀಡುತ್ತಾರೋ ಕಾದು ನೋಡಬೇಕಿದೆ.

[illegible] ಜಾತ್ಯತೀತ ಜನತಾದಳ ಮತ್ತು ಬಿಜೆಪಿ ಜಿದ್ದಾಜಿದ್ದಿಗೆ ಬಿದ್ದು 'ಜನಪ್ರಿಯ' ಕಾರ್ಯಕ್ರಮಗಳನ್ನು ಘೋಷಿಸುತ್ತಾ [illegible] ಚುನಾವಣೆ ನಡೆದರೂ ಪಕ್ಷ ಸಿದ್ಧ ಎಂಬ ಸೂಚನೆಗಳನ್ನು ನೀಡುತ್ತಿರುವಾಗ ಕಾಂಗ್ರೆಸ್‌ನಲ್ಲಿ ತಣ್ಣಗೆ 'ಬಂ' [illegible] ಬಂಗಾರಪ್ಪ ಭವಿಷ್ಯವನ್ನು ಈಗ 'ವಿದೇಶಿ ಮಹಿಳೆ' ಎಂದು ಅವರೇ ಹೀಗಳೆಯುತ್ತಿದ್ದ ಸೋನಿಯಾಗಾಂಧಿ [illegible]!

ಆಯನೂರು ಮತ್ತೆ ಜಂಪ್




ಇತ್ತ 'ಬಂ' ಕಾಂಗ್ರೆಸ್ ಕದ ತಟ್ಟುತ್ತಿದ್ದಂತಯೇ ಶಿವಮೊಗ್ಗದಲ್ಲಿ 'ಬಂ'ರ ಆಜನ್ಮ ವೈರಿ ಎಂದು ಬಿಂಬಿಸಿಕೊಳ್ಳುತ್ತಿರುವ, ಈಗ ಕಾಂಗ್ರೆಸ್‌ನಲ್ಲಿ ಇದ್ದಂತಿರುವ, ಮಾತಿನ ಮಲ್ಲ ಆಯನೂರು ಮಂಜುನಾಥ್ ಮತ್ತೆ 'ಜಂಪ್' ಹೊಡೆಯಲು ತಯಾರಿ ನಡೆಸಿದ್ದಾರೆ. ಜಾತ್ಯತೀತ ಜನತಾದಳ ಮತ್ತು ಬಿಜೆಪಿ ಅವರ ಮುಂದಿರುವ ಆಯ್ಕೆಗಳು.

ಇತ್ತೀಚೆಗೆ ಕಾರ್ಯಕ್ರಮಕ್ಕೆಂದು ಶಿವಮೊಗ್ಗಕ್ಕೆ ಹೋಗಿದ್ದ ಕುಮಾರಸ್ವಾಮಿ ಆಯನೂರು ಮಂಜುನಾಥ್‌ಗೆ ನೇರವಾಗಿಯೇ ಪಕ್ಷ ಸೇರುವಂತೆ ಆಹ್ವಾನ ನೀಡಿದ್ದಾರೆ. ಇದನ್ನು ಗಮನಿಸಿದ ಹಳೆಯ ಸ್ನೇಹಿತ ಯಡಿಯೂರಪ್ಪ ಕೂಡ ಆಯನೂರರನ್ನು ಮಾತನಾಡಿಸಿದ್ದಾರೆ. ಪಕ್ಷ ತೊರೆಯಲು [illegible] ಸಿದ್ಧತೆಗಳನ್ನು ಆಯನೂರು ನಡೆಸಿದ್ದು, ಬೆಂಬಲಿಗರ ಸಭೆ ನಡೆಸಿ, ಕಾಂಗ್ರೆಸ್ ಬಿಡುವಂತೆ ಆದೇಶ ಪಡೆದುಕೊಂಡಿದ್ದಾರೆ! ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಹೇಳಿದಂತೆ ಜಿಲ್ಲೆಯ ನರಸತ್ತಂತಿರುವ ಕಾಂಗ್ರೆಸ್ [illegible] ಬಾಲಮುದುರಿಕೊಂಡು ಕೂತಿದ್ದಾರೆ. ಶಿವಮೊಗ್ಗದ ರಾಜಕಾರಣ [illegible] ಎದಿರು ನೋಡುತ್ತಿದೆ. ಪಕ್ಷಾಂತರಿಗಳಾದ ಬಂಗಾರಪ್ಪ ಮತ್ತು ಆಯನೂರು [illegible]

ಇಲ್ಲಿ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಹೆಮ್ಮಾರಿ

ನೂರಾರು ವರ್ಷಕ್ಕೂ ಹೆಚ್ಚು ಇತಿಹಾಸವನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಕೊಪ್ಪಳದಲ್ಲಿ ಮಾತ್ರ ಮೂರು ಬಿಟ್ಟು ನಿಂತಿದೆ. ಹಿಂದೊಮ್ಮೆ ಧರಂಸಿಂಗ್ ಅವರನ್ನು ಸ್ವಾಗತಿಸಲು ಬಂದಿದ್ದ ಶಾಸಕರು ಜಿಂದಾಲ್ ವಿಮಾನ ನಿಲ್ದಾಣದಲ್ಲೇ ಅಂಗಿ-ಅಂಗಿ ಎಳೆದಾಡಿಕೊಂಡಿದ್ದರು. ಅದು ಸಾಲದೆಂಬಂತೆ, ಅದೇ ಸಂಜೆ ಪಾರ್ಟಿಯ ಕೆಲ ನಾರಿ ಮಣಿಗಳು ದುರ್ಗವ್ವ-ದ್ಯಾಮವ್ವನ ಅವತಾರ ಎತ್ತಿದ್ದರು. ಇವಾಗಿ ಇನ್ನೂ ಮೂರು ತಿಂಗಳಾಗಿಲ್ಲ, ಈಗ ನಾಯಕರಿಗಿಂತ ನಾವೇನು ಕಮ್ಮಿ ಅಂತ ಪಕ್ಷದ ಕಾರ್ಯಕರ್ತರೇ ಬಡಿದಾಡಿಕೊಂಡಿದ್ದಾರೆ. ಮೊನ್ನೆ ಇವರು ಮಾಡಿಕೊಂಡ ಗಲಾಟೆಯನ್ನು ನೋಡಿ ಸಾಮಾನ್ಯ ಜನರೇ ಛೀ... ಥೂ... ಎಂದು ಉಗುಳುತ್ತಿದ್ದಾರೆ.


ಮಲ್ಲಿನಾಥ ಪಾಟೀಲ್

ಕೊಪ್ಪಳ ಕಾಂಗ್ರೆಸ್‌ನವರಿಗೆ ಇರುವ ಒಂದು ಕೆಟ್ಟ ಚಾಳಿ ಅಂದರೆ ಅಧಿಕಾರ ಸಿಕ್ಕಿದ ಕ್ಷಣದಿಂದ ತಾವೇ ಬಡಿದಾಡಿಕೊಳ್ಳುವುದು! ಒಂಬತ್ತೂವರೆ ವರ್ಷಗಳ ಕಾಲ ಸಂಗಣ್ಣ ಆಳುತ್ತಿದ್ದಾಗ ಇಲ್ಲಿನ ಕಾಂಗ್ರೆಸಿಗರು ಗಪ್‌ಚುಪ್ ಆಗಿದ್ದರು. ಆದರೆ ಕಳೆದ ಚುನಾವಣೆಯ ಸಂದರ್ಭದಲ್ಲಿ ಸಾಂಪ್ರದಾಯಿಕ ಮತಗಳು ಒಂದಾಗಿ ಕಾಂಗ್ರೆಸ್‌ನಿಂದ ಬಸವರಾಜ್ ಹಿಟ್ನಾಳ್ ಗೆದ್ದಿದ್ದರು. ಈಗ ಶಾಸಕನ ವರ್ತನೆಯಿಂದ ಇಡೀ ಕಾಂಗ್ರೆಸ್ ಮತ್ತು ಅದರ ಬೆನ್ನುಲುಬಾಗಿದ್ದ ಮತಗಳು ಚೆಂದಿಚೆಂದಿಯಾಗಿವೆ.

[illegible]

ಸಂಗಣ್ಣ ಕರಡಿ ಬಿಜೆಪಿ ಸೇರಿ ಹಳ್ಳ ಹಿಡಿಯುವ ಲಕ್ಷಣ ಕಂಡಾಗ ದಿವಟರ್, ಸಂಗಟಿ, ಗಾಳಿ, ಆಸೀಫ್ ಅಲಿ, ಮರ್ದಾನ್‌ಸಾಬ ಇನ್ನಿತರರು ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಿದ್ದಕ್ಕೆ ಬಸವರಾಜ ಹಿಟ್ನಾಳ್ ಎಂಬ ಪುಣ್ಯಾತ್ಮ ಗೆದ್ದಿದ್ದನು. ಆದರೆ ಭಯಂಕರ ಧನಪ್ರಿಯನೂ, ಭ್ರಷ್ಟನೂ ಆಗಿರುವ ಹಿಟ್ನಾಳ್, ಸಾಮಾನ್ಯ ಕಾರ್ಯಕರ್ತರಿರಲಿ ಹಳೇ ನಾಯಕರಿಗೂ ಗೌರವ ಕೊಡದಿದ್ದರಿಂದ ಅವರೆಲ್ಲರೂ ಈಗ ದೂರು ಸರಿದಿದ್ದಾರೆ. ಈ ಮಧ್ಯೆ ಕೆಲಸಕ್ಕೆ ಬಾರದ ಬೇಲ್ದಾರ ಸಿದ್ಧ ಮತ್ತು ಕಾಟನ್, ಮಟನ್, ರೇಷನ್‌ನಂತಹ ಬಕೀಟು ಹಿಡಿಯುವ ಮುಖೇಡಿಗಳನ್ನು "ಇತ್ತಿತ್ತ ಬರ್ರೀ" ಅಂತ ಕರೆದುಕೊಂಡು ಅವರನ್ನು ತಮ್ಮ ಹೆಗಲ ಮೇಲೆ ಹತ್ತಿಸಿಕೊಂಡಿದ್ದಾನೆ. ತನ್ನ ಅನುದಾನದ ಕಾಮಗಾರಿಗಳನ್ನೆಲ್ಲ ಅನಧಿಕೃತವಾಗಿ ಇವರಿಗೇ ಕೊಟ್ಟು ಲೂಟಿಗೆ ದಾರಿ ಮಾಡಿದ್ದಾನೆ. ಹೀಗಾಗಿ ನಿನ್ನೆ ಮೊನ್ನೆ ಕೋಳಿ ಪುಕ್ಕ ಸುಲಿಯುತ್ತಿದ್ದವರೆಲ್ಲ ಇಂದು ಯಾರಾದರೂ ಶಾಸಕನ ವಿರುದ್ಧ ಬರೆದರೆ ಸಾವಿರಾರು ರೂಪಾಯಿ ಖರ್ಚು ಮಾಡಿ ಪತ್ರಕರ್ತರನ್ನೇ ಬಡಿಸುವ ಮಟ್ಟಕ್ಕೆ ಬಂದಿದ್ದಾರೆ. 'ಹೀಗಾದ್ರೆ ಮುಂದೆ ನೀವು ಗೆಲ್ಲೋದು ಹ್ಯಾಗ್ರಿ?' ಅಂತ ಶಾಸಕರನ್ನು ಕೇಳಿದರೆ "ಸಿಂಪಲ್ಲಾಗಿ ಮೂರು ಕೋಟಿ ಚೆಲ್ತೀನಿ-ಬಡಿಗೆ ಹಾಕಿ ಗೆಲ್ತೀನಿ" ಅಂತಾನೆ. ಏನಾದರೂ ಮಾಡಿಕೊಳ್ಳಲಿ ಎಂದು ಸುಮ್ಮನಾಗುವಷ್ಟರಲ್ಲಿ "ಆ ದಿವಟರ್‌ನಾ ಹೊರಗ ಬರಲ್ಲ... ಕರಿಯಣ್ಣ ಮಹಾಸುಳ್ಳ... ರುದ್ರಮುನಿ ಗಾಳಿ ಎತ್ಲಾಗೋ ಏನೋ... ರಾಂಪುರಗೆ ಹೇಗೆ ಇಂಜಕ್ಷನ್ ಕೊಡೊದು ನನಗೆ ಗೊತ್ತು..." ಅಂತ ಪಕ್ಷದ ಸೀನಿಯರ್‌ಗಳನ್ನೇ ಬಹಿರಂಗವಾಗಿ ಅಪಹಾಸ್ಯ ಮಾಡುತ್ತಾನೆ. "ನಾಳೆ ಈತ ಸೋನಿಯಾ ಗಾಂಧಿನ್ನ ಬಿಡ್ತಾನಂತ ಏನು ಗ್ಯಾರಂಟಿ" ಅಂತ ಕಾರ್ಯಕರ್ತರು ದಿಗಿಲಾಗಿದ್ದಾರೆ.

ಕೊಪ್ಪಳ

ನಮ್ಮೂ ಶನಿವಾರವೇ!


ಯಾಕೋ ಶನಿವಾರಕ್ಕೂ, ಕೊಪ್ಪಳ ಕಾಂಗ್ರೆಸ್ಸಿಗೂ ಎಳ್ಳುಕಾಳಿನಷ್ಟು ಆಗಿ ಬರ್ತಿಲ್ಲ. ಎರಡು ತಿಂಗಳ ಹಿಂದೆ ಧರಂ ಸಿಂಗ್ ಸ್ವಾಗತಿಸುವಾಗ ನಡೆದ ಗಲಾಟೆ ಮತ್ತು ಅಂದೇ ನಾರಿಮಣಿಗಳು ಜಗಳವಾಡಿದ್ದು ಕೂಡ ಶನಿವಾರವೇ ಆಗಿತ್ತು. ಮೊನ್ನೆ ಜನವರಿ 20ರಂದು ಚಪ್ಪಲಿ ತೋರಿಸಿ ಒದರಾಡಿ, ಬಡಿದಾಡಿ, ಬೀದಿಯಲ್ಲಿ ಎಳೆದಾಡಿದ್ದೂ ಕೂಡ ಶನಿವಾರವೇ.

ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಕುರಿತು ಕೊಪ್ಪಳ ನಗರದ ವೀಕ್ಷಕ ಎಂಎಲ್‌ಸಿ ಮಲ್ಲಿನಾಥ ಪಾಟೀಲರನ್ನು ಕರೆಸಿ ನಗರ ಘಟಕದ ಸಭೆಯನ್ನು ಅಧ್ಯಕ್ಷ ಮರ್ದಾನ್‌ಸಾಬ ಅಡ್ಡೆವಾಲೆ ಪ್ರಮೋದ ಮಂದಿರದಲ್ಲಿ ಏರ್ಪಡಿಸಿದ್ದರು. ಆದರೆ ಆ ಸಭೆಗೆ ಮಾಜಿ ಎಂಎಲ್‌ಸಿ ಕರಿಯಣ್ಣ, ಕೆಪಿಸಿಸಿ ಸದಸ್ಯ ಆಸೀಫ್ ಅಲಿ, ಡಾ. ರಾಂಪುರ್ ಇನ್ನಿತರರು ತಡವಾಗಿ ಬಂದಾಗಲೇ ಏನೋ ಕಾದಿದೆ ಎಂಬ ಸೂಚನೆ ಸಿಕ್ಕಿತ್ತು. ಸಭೆಯಲ್ಲಿ ಮಾತನಾಡಿದ ದಲಿತ ವಿರೂಪಾಕ್ಷಪ್ಪ ಕಟ್ಟಿಮನಿ, ಹಿಂದುಳಿದ ವರ್ಗದ ಬಾಳಪ್ಪ ಬಾರಕೇರ, ಅಲ್ಪಸಂಖ್ಯಾತರ ಜಾಕೀರ್‌ಕಿಲ್ಲೆದಾರರವರ ಮಾತುಗಳಲ್ಲಿ ಶಾಸಕ ಹಿಟ್ನಾಳ್ ಪಕ್ಷದ ನಿಷ್ಠರನ್ನು ಕಡೆಗಣಿಸುತ್ತಿರುವುದು, ಅದರಿಂದ ತಮ್ಮಂತಹ ಹಿರಿಯ ಕಾರ್ಯಕರ್ತರಿಗೆ ಆಗುತ್ತಿರುವ ಅವಮಾನ, ಶಾಸಕನ ನಿರ್ಲಕ್ಷ್ಯ ಇತ್ಯಾದಿಗಳ ಬಗ್ಗೆ ಮಾತನಾಡಿದರು.

ಇದಾದ ನಂತರ ಕೆಪಿಸಿಸಿ ಸದಸ್ಯ ಆಸೀಫ್ ಅಲಿ ವಕೀಲರು ನಗರಸಭೆ ಚುನಾವಣೆಯಲ್ಲಿ ಗೆಲ್ಲಲ್ಲು ಎಲ್ಲರೂ ಒಗ್ಗಟಾಗಿ ದುಡಿಯುವ ಬಗ್ಗೆ ಮಾತನಾಡಿ ಕುಳಿತುಕೊಂಡರು. ಆಗ ಎದ್ದು ನಿಂತ ಭಾಗ್ಯನಗರ ಗ್ರಾ.ಪಂ. ಅಧ್ಯಕ್ಷ ಕೃಷ್ಣ ಇಟ್ಟಂಗಿ "ಅದು ಅವರಿಗೂ ಅನ್ವಯಿಸುತ್ತೆ ಅಂತ ಹೇಳಿ" ಎಂದು ಬಿಟ್ಟ.

ನಿನ್ಯಾಕೆ ಬಂದ ಇಲ್ಲಿ?

ಕೃಷ್ಣ ಇಟ್ಟಂಗಿಯ ಹೇಳಿಕೆಗೆ ಕೆರಳಿ ಎದ್ದು ನಿಂತ ಹಿರಿಯ ಕಾರ್ಯಕರ್ತ ಮಾಜಿದ್‌ಖಾನ್ "ಇದು ನಗರ ಘಟಕದ ಸಭೆ, ನೀನು ರೂರಲ್‌ನವನು. ಇಲ್ಲಿಗ್ಯಾಕೆ ಬಂದೆ?" ಎಂದು ಪ್ರಶ್ನಿಸಿದಾಗ ಸಭೆಯಲ್ಲಿದ್ದ ಬಹುತೇಕರು "ಹೌದೌದು". ಆದರೆ ಮುಂದುವರಿದ ಜಗಳ ಯಾವ ಮಟ್ಟಕ್ಕೆ ಹೋಯಿತೆಂದರೆ "ಅಮ್ಮನ್, ಅಕ್ಕನ್" ತರಹದ ಪದಪುಂಜಗಳು ಬಳಕೆಯಾಗಿ, ಸ್ಟೇಜ್ ಮೇಲಿದ್ದ ಲೀಡರ್‌ಗಳೆಲ್ಲಾ ಓಡಿ ಬಂದು ಇಬ್ಬರನ್ನೂ ಸಮಾಧಾನಿಸಬೇಕಾಯಿತು.


ಮರ್ದಾನ್‌ಸಾಬ ಅಡ್ಡೆವಾಲೆ

ಇಷ್ಟಾದರೂ ಸಿಟ್ಟು ಇಳಿಯದ ಕೃಷ್ಣ ಇಟ್ಟಂಗಿ ಎಡವಟ್ಟೊಂದನ್ನು ಮಾಡಿದ. ಸಭೆಯಲ್ಲಿ ಕುಳಿತೇ ತನ್ನ ಮೊಬೈಲ್‌ನಿಂದ ಫೋನ್ ಮಾಡಿ ತನ್ನ ಕೆಲವು ಬೆಂಬಲಿಗರನ್ನು ಕರೆಸಿಕೊಂಡ. ಆನಂತರ ಎದ್ದು ನಿಂತ ಇಟ್ಟಂಗಿ ತುಂಬಿದ ಸಭೆಯಲ್ಲಿ ಮಾಜಿದ್ ಖಾನ್‌ಗೆ ಚಪ್ಪಲಿ ತೋರಿಸಿ "ಬಾರಲೇ... ನಿನ್ನ ನೋಡ್ಕೊಂಡೆ ಬಿಡ್ತೀನಿ" ಎಂದ. ಆಗ ಇಡೀ ಪ್ರಮೋದ ಮಂದಿರವೇ ಮಿನಿ ರಣರಂಗವಾಯಿತು. ಕಾರ್ಯಕರ್ತರಲ್ಲಿ ಎರಡು ಗುಂಪುಗಳಾಗಿ ಕೆಲವರು ಶಾಸಕನ ಪರವಾಗಿದ್ದರೆ, ಇನ್ನೂ ಕೆಲವರು ಅಸೀಫ್ ಅಲಿ ಪರ ನಿಂತ ಜಗಳವಾಡಿದರು. ಅವರ ಬಡಿದಾಟ, ಚೀರಾಟದ ಮಧ್ಯೆ ಏನಾಗುತ್ತಿದೆ ಎಂಬುದೇ ಯಾರಿಗೂ ಅರ್ಥವಾಗುವಂತಿರಲಿಲ್ಲ. ಹೊರಬಂದರೆ ಅಲ್ಲೂ ಮಾರಾಮರಿ ನಡೆಯುತ್ತಿತ್ತು. ಸ್ವತಹ ಶಾಸಕನೇ ತನ್ನ ಬೆಂಬಲಿಗ ಕೃಷ್ಣ ಇಟ್ಟಂಗಿಯನ್ನು ಸ್ಕಾರ್ಪಿಯೋದಲ್ಲಿ ತುಂಬುವಾಗ ಕೃಷ್ಣ ಆಡಿದ ಮಾತು ಅಲ್ಲಿದ್ದವರ ಪಿತ್ತವನ್ನೇ ಕೆರಳಿಸಿತು. ಅಲ್ಲಿಂದ ಐಬಿಗೆ ಬರುವ ದಾರಿಯಲ್ಲಿ ಸಣ್ಣದೊಂದು ಮಾರಾಮರಿ ಕೂಡ ನಡೆಯಿತು. ಐಬಿಯೊಳಗೆ ಎಲ್ಲ ನಾಯಕರು ತಲೆ ಮೇಲೆ ಕೈ ಹೊತ್ತು ಕುಳಿತರೆ, ಹೊರಗೆ ಪರಿಸ್ಥಿತಿ ಗರಂ ಆಗಿ "ಇನ್ಮುಂದೆ ಮುಸ್ಲಿಂರು ಕಾಂಗ್ರೆಸ್‌ಗೆ ಬಹಿಷ್ಕಾರ ಹಾಕುತ್ತೇವೆ" ಎಂಬಲ್ಲಿಯವರೆಗೂ ಹೋಯಿತು. ಆತಂಕಕಾರಿಯ ವಿಷಯ ಯಾವುದೆಂದರೆ ಮುಕ್ಕಾಲು ಗಂಟೆಯ ಈ ಮಾರಾಮಾರಿ ದಲಿತ (ಕೃಷ್ಣ) ಮತ್ತು ಮುಸ್ಲಿಂ (ಅಸೀಫ್ ಅಲಿ) ಜಗಳವಾಗಿ ಬಣ್ಣ ಪಡೆದುಕೊಂಡಿದ್ದು.


ಜಗಳ ಬಿಡಿಸುವ ನಾಟಕದಲ್ಲಿ ಶಾಸಕ ಮತ್ತು ಮಗ ರಾಘು

ಒಡೆದ ಮನಸ್ಸುಗಳು

ನಾಲ್ಕು ವರ್ಷದ ಹಿಂದೆ ಅಂಬೇಡ್ಕರ್ ... ಪ್ರಕರಣದಿಂದ ದಲಿತ ಮತ್ತು ಮುಸ್ಲಿಂರ ... ಜಗಳವಾಗಿದ್ದರಿಂದ ಎರಡೂ ... ದಾಯದ ಮನಸ್ಸುಗಳು ... ಹೋಗಿವೆ. ಈಗ ಎರಡೂ ಸಮು... ಗಳು ಆ ಗಾಯವನ್ನು ಮರೆ... ತ್ತಿರುವ ಸಂದರ್ಭದಲ್ಲಿ ಇಂಥ ... ಘಟನೆ ನಡೆದಿದೆ. ಮೊನ್ನಿನ ... ನಡೆದ ಈ ಘಟನೆ ಊರಿನ ... ಬೇರೆಯೇ ಬಣ್ಣ ಪಡೆದುಕೊಳ್ಳ... ದನ್ನು ಅರಿತು ಹರ್ಷ ಹೋ... ವೀಕ್ಷಕ ಮಲ್ಲಿನಾಥ ಪಾಟೀಲ... ಅಧ್ಯಕ್ಷೆ ಲಲಿತಾರಾಣಿ, ಕರಿಯಣ್ಣ... ಯವರ ಮುಂದೆ ಮಾತುಕತೆಗಳು ನಡೆದ... ಹಿಟ್ನಾಳನೇ ಎಲ್ಲಿಂದಲೋ ಕೃಷ್ಣ ಇಟ್ಟಂ... ಕರೆತಂದು ಮಾಜಿದ್‌ಗೂ-ಕೃಷ್ಣನಿಗೂ ರಾಜಿ ಮ... ಆನಂತರವೇ ಕೊಪ್ಪಳ ನಿರಾಳವಾದದ್ದು.

[illegible]

ಮೊನ್ನೆಯ ಘಟನೆಯೊಂದೇ ಅಲ್ಲ, ಉಪನ್ಯಾ... ಪೈಗಂಬರ್‌ರ ಬಗ್ಗೆ ಆಕ್ಷೇಪಾರ್ಹ ಮಾತು... ಎನ್ನಲಾದ ಪ್ರಕರಣದಲ್ಲಿ ಶಾಸಕ... ವ್ಯತಿರಿಕ್ತವಾಗಿ ನಡೆದುಕೊಂಡಿದ್ದು... ಪಂಚಾಯತ್ ಚುನಾವಣೆಯಲ್ಲಿ... ರಿಗೆ ಟಿಕೆಟ್ ನಿರಾಕರಿಸಿದ್ದು, ... ಶಾಲೆಗೆ ಇದ್ದ ಜಾಗವನ್ನು ಡಿಗ್ರಿ ... ಕೊಟ್ಟದ್ದು.... ಇವೆಲ್ಲವೂ ... ಮುಸ್ಲಿಂಮರಲ್ಲಿ ತಾನು ಕಾಂಗ್ರೆಸ್... ದಿಂದ ಅನ್ಯಾಯಕ್ಕೆ ಒಳಗಾಗ... ಎಂಬ ಆಕ್ರೋಶ ತೆಲೆ ಎತ್ತಿದ...

ಇದನ್ನು ವೀಕ್ಷಕ ಮ... ಪಾಟೀಲ್, ಡಿಸಿಸಿ ಅಧ್ಯಕ್ಷೆ ಲ... ಅರಿಯಬೇಕು. ಮೇಲಾಗಿ ಈ ... ವನ್ನು ಹೊಗಲಾಡಿಸಲು ನಗರ ಕಾಂಗ್ರೆಸ್... ಹಿರಿಯ ಮರ್ದಾನ್ ಸಾಬ ಅಡ್ಡೆವಾಲೆ ಪ್ರಯತ್ನ... ಇದರೊಂದಿಗೆ ಉಳಿದ ವಿವಿಧ ಜಾತಿಯ ನ... ಗಳನ್ನು ಜೊತೆಮಾಡಿಕೊಂಡು ಕಾಂಗ್ರೆಸ್ ... ಚುನಾವಣೆಗಳನ್ನು ಎದುರಿಸಿದರೆ, ಆ ಪಕ್ಷ ... ಯನ್ನು ಪ್ರವೇಶಿಸುತ್ತದೆ. ಇಲ್ಲದೇ ಹೋದರೆ ... ನಲ್ಲಿ ಬೀಳುತ್ತದೆ. ಇದು ಖಚಿತ.

ಸದ್ಯಕ್ಕಂತೂ ಕೊಪ್ಪಳದಲ್ಲಿ ಕಾಂಗ್ರೆಸ್‌ಗೆ ... ಹೆಮ್ಮಾರಿಯಾಗಿದೆ.

-ವರ...

ಮಲೆನಾಡ ಮಿಂಚುಗಳು

ನೆರೆಯ ದಕ್ಷಿಣ ಕನ್ನಡದಂತೆ ಮಲೆನಾಡನ್ನು ಕೂಡ ಕೇಸರಿಮಯಗೊಳಿಸಿ ಪರಸ್ಪರ ದ್ವೇಷ, ಅಸೂಯೆ, ಗಲಭೆ ಹುಟ್ಟುಹಾಕುವ ಸಂಘ ಪರಿವಾರದ ಕೆಲಸ ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ನಡೆಯುತ್ತಿದೆ. ಈ ಬಾರಿ ಸಂಘ ಪರಿವಾರದಿಂದ ಹಿಂದೂತ್ವದ ಅಮಲು ತುಂಬಿಸಿಕೊಂಡ ಜಿತೇಶನೆಂಬ ಅಮಾಯಕ ಮುಸ್ಲಿಮರ ಮನೆಯೆದುರಿನ ಲೈಟು ಕಂಬಕ್ಕೆ ಭಾಗವಾಧ್ವಜ ಕಟ್ಟಲು ಹೋಗಿ ರಾಮನ ಪಾದ ಸೇರಿದ್ದಾನೆ. ತನ್ನ ಮನುಷ್ಯ ವಿರೋಧಿ ಸಿದ್ಧಾಂತದ ಪ್ರಬಲ ವಿರೋಧಿಗಳಾದ ರಾಷ್ಟ್ರಕವಿ ಕುವೆಂಪು ಹಾಗು ಶಿವರಾಮ ಕಾರಂತರ ಭಾವಚಿತ್ರಗಳನ್ನೂ ಬಳಸಿಕೊಳ್ಳುವ ನೀಚತನಕ್ಕೂ ಸಂಘ ಪರಿವಾರ ಕೈ ಹಾಕಿದೆ. ಸಂಘ ಪರಿವಾರಕ್ಕೋ ಇಂತಹ ಧೈರ್ಯ ಬರಲು ಪ್ರಗತಿಪರರ ಸಂಘಟಿತ ಪ್ರತಿರೋಧವಿರದಿರುವುದೇ ಕಾರಣವಾಗಿದೆ. ಆದರೂ ಅಲ್ಲಲ್ಲಿ ಕೆಲವು ಮಿಂಚುಗಳು ಮಲೆನಾಡಿನ ಭವಿಷ್ಯದ ಬಗ್ಗೆ ಆಶಾವಾದ ಮೂಡಿಸಿವೆ.


ಶ್ರೀನಿವಾಸ್

[illegible]

ಮಲೆನಾಡಿನ ಬಹುಪಾಲು ಪತ್ರಿಕೆಗಳು ಕೋಮುವಾದದ ವಿರುದ್ಧವಿರುವುದು ಮಹತ್ವದ ಸಂಗತಿ. ಈಗ ನಡೆಯುತ್ತಿರುವ ವಿರಾಟ್ ಹಿಂದೂ ಸಮಾವೇಶದ ವಿರುದ್ಧ ತೀರ್ಥಹಳ್ಳಿ ಮತ್ತು ಸಾಗರದ ಪತ್ರಿಕೆಗಳೆಲ್ಲ ಹೆಚ್ಚುಕಡಿಮೆ ಸಮರವನ್ನೇ ಸಾರಿವೆ. ತೀರ್ಥಹಳ್ಳಿಯ ವಿರಾಟ್ ಹಿಂದೂ ಸಮಾವೇಶ ಪೇಲವವಾಗುವುದಕ್ಕೆ ಇಲ್ಲಿನ 'ನಿಮ್ಮ ಅಂತರಂಗ', 'ಲಕ್ಷ್ಮೀಶ ಪತ್ರಿಕೆ', 'ಬೃಹಸ್ಪತಿ ವಾಣಿ', 'ಜ್ವಲಂತ', 'ವಿಧಾತ' ಮುಂತಾದ ಪತ್ರಿಕೆಗಳ ಪಾತ್ರ ಮಹತ್ವದ್ದಿದೆ.

ಕೋಮುವಾದದ ವಿರುದ್ಧ ಆರಂಭದಿಂದಲೂ ದಿಟ್ಟವಾಗಿ ಬರೆಯುತ್ತ ಬಂದ ಸಾಗರದ 'ಮಣ್ಣಿನ ವಾಸನೆ' ವಾರ ಪತ್ರಿಕೆ 'ವಿರಾಟ್ ಹಿಂದೂ ಸಮಾವೇಷ'ವನ್ನು ಕಟುವಾಗಿ ಟೀಕಿಸಿದೆ. ರಾಮಚಂದ್ರಾಪುರ ಮಠ ಆಯೋಜಿಸಿದ್ದ ಶ್ರೀ ರಾಮಾಯಣ ಮಹಾಪತ್ರ ಎಂಬ ನಾಟಕದ ವಿರುದ್ಧ ಸಾಗರದಲ್ಲಿ ಸಂಘ ಪರಿವಾರ ಕೋಮುಗಲಭೆ ಸೃಷ್ಟಿಸಿದಾಗ ಮತ್ತು ಯಾವುದೇ ಪಕ್ಷದ ಶಾಸಕ ಅಧಿಕಾರದಲ್ಲಿದ್ದಾಗಲೂ ಅವರ ಭ್ರಷ್ಟಾಚಾರ, ದೌರ್ಜನ್ಯದ ವಿರುದ್ಧ 'ಮಣ್ಣಿನ ವಾಸನೆ' ನಿಷ್ಠುರ ದನಿ ಎತ್ತುತ್ತಾ ಬಂದಿದೆ. ಇದೀಗ ತನ್ನ ಸಾರ್ಥಕ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ 'ಮಣ್ಣಿನ ವಾಸನೆ'ಗೆ ಅದರ ಸಂಪಾದಕ ಅ.ನಾ. ಶ್ರೀನಿವಾಸರಿಗೆ ಕೋಮುವಾದದ ವಿರುದ್ಧವಿರುವ ಎಲ್ಲರೂ ಶುಭಾಷಯ ಕೋರಲೇಬೇಕು. (ಅವರ ಮೊಬೈಲ್ ಸಂಖ್ಯೆ: 9448218805).

ಬಂಟರ ಸಂಘದ ಬಂಡಾಯ

ನಾಡಿನಲ್ಲಿ ವೈಚಾರಿಕ ಜಾಗೃತಿ ಮೂಡಿಸಿದ ರಾಷ್ಟ್ರಕವಿ ಕುವೆಂಪುರವರ ಹೆಸರನ್ನು ತನ್ನ ಸ್ವಾರ್ಥಕ್ಕಾಗಿ ಮಾತ್ರ ಬಳಸಿಕೊಳ್ಳುವ ಮಲೆನಾಡಿನ ಒಕ್ಕಲಿಗರ ಸಂಘಗಳು, ಕುವೆಂಪುರವರ ವೈಚಾರಿಕ ಪ್ರಜ್ಞೆಯನ್ನು ಕೂದಲೆಳೆಯಷ್ಟೂ ಅಳವಡಿಸಿಕೊಂಡಿಲ್ಲ, ಆದ ಕಾರಣವೇ ಒಕ್ಕಲಿಗರ ಸಂಘ ಸಂಘಪರಿವಾರಕ್ಕೆ ತನ್ನನ್ನು ಮಾರಿಕೊಂಡಿದೆ. ಸಂಘ ಪರಿವಾರ ಎಷ್ಟೇ ಗೋಗರೆದರೂ ಬಂಟರ ಸಂಘ ವಿರಾಟ್ ಹಿಂದೂ ಸಮಾವೇಶಕ್ಕೆ ತನ್ನ ಬೆಂಬಲ ಸೂಚಿಸದೆ ಬಂಡಾಯ ವ್ಯಕ್ತಪಡಿಸಿತು. ವಡ್ಡರ್ಸೆ ರಘುರಾಮ ಶೆಟ್ಟರ ಗರಡಿಯಲ್ಲಿ ಬೆಳೆದ ಪತ್ರಕರ್ತ ಡಿ.ಕೆ. ರಮೇಶ ಶೆಟ್ಟಿ ತೀರ್ಥ ಹಳ್ಳಿ ಬಂಟರ ಸಂಘದ ಕಾರ್ಯದರ್ಶಿ ಯಾಗಿದ್ದು ಮತ್ತು ಸಂಘದ ಸಹಸದಸ್ಯರಿಗೆ ವಿರಾಟ್ ಹಿಂದೂ ಸಮಾವೇಶದ ಗುಪ್ತ ಅಜೆಂಡಾಗಳನ್ನು ಮನವರಿಕೆ ಮಾಡಿಕೊಟ್ಟದ್ದು ಬಂಟರ ಸಂಘ ಇಂತಹ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲು ಕಾರಣವಾಗಿತ್ತು.


ಸತೀಶ್ ಕುಮಾರ್

[illegible]

ತೀರ್ಥಹಳ್ಳಿಯಲ್ಲಿ ನಡೆದ ವಿರಾಟ್ ... ಸಮಾಜೋತ್ಸವದ ವಿರುದ್ಧ ಪ್ರತಿಭಟನೆಯನ... ಕೊಂಡಿದ್ದು ಯುವ ವಕೀಲ ಆಡಿನಸರ ಸತೀಶ್... ನೇತೃತ್ವದ ಜನಜಾಗೃತಿ ವೇದಿಕೆ. ಇವ... ರಿಪ್ಪನ್‌ಪೇಟೆಯ ಹೋರಾಟಗಾರ ಟಿ.ಆರ್. ಕೃಷ್ಣ... ಮಾತಾಡೋಣ ವೇದಿಕೆಯ ರಾಂಚಂದ್ರ ಕೊಪ್ಪದ... ಮೋಹನ್, ವಕೀಲ ಶರತ್, ಸುಬೋಧ್, ದಲಿತ... ಸಮಿತಿಯ ನಾರಾಯಣ್ ಮುಂತಾದವರಿದ್ದ...


ಸಾಗರದ ಪತ್ರಕರ್ತ ಎಚ್.ಟಿ. ರಾಘವೇ... ತಂಡದವರು ಕೋಮುವಾದದ ವಿರುದ್ಧ ... ಸಂಘಟಿಸಿದಂತೆ ತೀರ್ಥಹಳ್ಳಿಯಲ್ಲಿ ಸತೀಶ್... ಭರವಸೆ ಮೂಡಿಸುತ್ತಿದ್ದಾರೆ. ಸಾರಾಯಿಯ... ಮಹಿಳೆಯರನ್ನು ಸಂಘಟಿಸಿರುವ ಸತೀಶ್, ... ಲಾಟರಿಯನ್ನು ಹೋರಾಟಗಳ ಮೂಲಕವೇ ... ವಲ್ಲಿ ಯಶಸ್ಸು ಕಂಡಿದ್ದಾರೆ.

ವೈಯಕ್ತಿಕ ಪ್ರಚಾರದಿಂದ ದೂರವಿದ್ದು ... ಪಕ್ಷಗಳಿಗೆ ಶರಣಾಗದೆ, ಜನಜಾಗೃತಿ ವ... ಜನರಲ್ಲಿ ವೈಚಾರಿಕ ಅರಿವು ಮೂಡಿಸುವ... ಮುಂದುವರೆದರೆ ಮಲೆನಾಡಿನಲ್ಲಿ ಕೇಸರಿ... ಪ್ರಕೃತಿ ಸಹಜ ಹಸಿರು ಉಳಿದೀತು.

-ಸರ್ಜಾಶಂಕರ್ ಹರ...

ಹಾಳಾದ ಗುಲ್ಬರ್ಗಾ ಹರಾಜಾಗಿದೆ!

...ರವನ್ನು ಜಪಿಸು ...ರ್ಬರ್ಗ ಎನ್ನುತ್ತೀರೋ. ...ನಾಪೂರ ಉಸ್ತುವಾರಿ ...ದ ಶರಣಬಸಪ್ಪನ ...ತ್ವದ ನಿವರ್ತನ ...ತ್ತೀರೋ. ಸೋಂಬೇರಿ ...ಸಕ ಚಂದಶೇಖರ ...ಲರ ಕಾರ್ಯವೈಖರಿ ...ದು ಬಿಂಬಿಸುತ್ತೀರೋ. ...ವಾ ಮಹಾನಗರ ...ಕೆಯಲ್ಲಿ ವಕ್ಕರಿಸಿರುವ ...ದಾಹಿ ಆಯುಕ್ತ ...ಎಸ್.ಪಿ. ಮುಧೋಳ್ ...ಳಕ ಎಂದು ...ಯುತ್ತಿರೋ ...ನು ಹೆಸರಿಟ್ಟು ಕರೆಯುತ್ತೀರೋ, ಆದರೆ ...ಹಾನಗರಿಯ ಆಯಕಟ್ಟಿನಲ್ಲಿ ಕುಂತಿರುವ ಮಹಾ ಹೆಗ್ಗಣಗಳು ಒಂದೇ ಸಮನೆ ...ದುಂಡಾಗತೊಡಗಿದ್ದರೆ, ಎಳ್ಳಷ್ಟೂ ...ವೃದ್ಧಿ ಕಾಮಗಾರಿ ಕಾಣದ ಇಡೀ ...ರ್ಬರ್ಗಾ ಜಿಲ್ಲೆ ಎಕ್ಕುಟ್ಟಿ ಹೋಗುತ್ತಿದೆ.


ದರ್ಶನಾಪೂರ್


ಫೋರ್ಜರಿ ಸೈನು ಮಾಡಿ ಅಭಿವೃದ್ಧಿ ಕಾಮಗಾರಿ ಪಟ್ಟಿ ತಯಾರಿಸಿ ಲಕ್ಷಾಂತರ ಹಣ ಕೊಳ್ಳೆ ಹೊಡೆಯಲಾಗಿದೆ. ಇಂತಹ ಮಹಾಭಕ್ಷ ಯಜ್ಞಕ್ಕೆ ಇಂಜಿನಿಯರ್ ಮಾಜೀದ್ ಮತ್ತು ಪೀಕಲಾಡಿ ಕಂಟ್ರಾಕ್ಟರುಗಳ ದಂಡೇ ನೀಲಿ ನಕ್ಷೆ ತಯಾರಿಸಿ ರಭಸದಲ್ಲಿ ಮಾಡಿರುವ ಲೂಟಿಗೆ ಪಾಲಿಕೆಯ ಹಳೆಯ ನೂರಾರು ಫೈಲುಗಳು ಸಾಕ್ಷಿ ನುಡಿಯುತ್ತವೆ.

ಇಂಥ ಭ್ರಷ್ಟ ಆಯುಕ್ತ ತಿಪ್ಪೇಶನ ಮೇಲೆ ಸಾರ್ವಜನಿಕರ ದೂರುಗಳ ಮಹಾಪೂರ ಹರಿದಾಗ ಆತನಿಗಾದ ಶಿಕ್ಷೆ ವರ್ಗಾವಣೆ ಅಷ್ಟೇ!

... ಕೋಟಿ ರೂ. ಗುಳುಂ

ಕೇವಲ 9 ತಿಂಗಳಲ್ಲಿ ನಗರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹೆಸರಲ್ಲಿ ಬೋಗಸ್ ಬಿಲ್ ಸೃಷ್ಟಿಸಿ ಬರೋಬ್ಬರಿ 14 ಕೋಟಿ ರೂಪಾಯಿ ಗುಳುಂ ಮಾಡಲಾಗಿದೆ.

ಮುಖ್ಯಮಂತ್ರಿಗಳ ಪ್ಯಾಕೇಜ್ ಹೆಸರಲ್ಲಿ 6.50 ಕೋಟಿ ರೂಪಾಯಿ, ರಾಜ್ಯ ಹಣಕಾಸು ಆಯೋಗದಡಿ 5.25 ಕೋಟಿ ರೂಪಾಯಿ, ಪ್ರವಾಹ ಪೀಡಿತ ಪ್ರದೇಶಗಳ ಪರಿಹಾರ ಕಾಮಗಾರಿ ಹೆಸರಲ್ಲಿ 3.95 ಕೋಟಿ ರೂಪಾಯಿಗಳನ್ನು..... ಹೀಗೆ ನಿರ್ದಿಷ್ಟವಾಗಿ ಮಾಡಲಾದ ಕಾಮಗಾರಿ ಹೆಸರು, ಸ್ಥಳ, ಯಾವುದನ್ನೂ ತಿಳಿಸದೇ 14 ಕೋಟಿ ರೂಪಾಯಿ ತಿಂದು ತೇಗಿದ್ದಾರೆ.


ಶಾಸಕ ರೇವೂರ್

...ಗದ ... ಬಿಡು... ...ಲಾಗಿದೆ!

ನಗರದ 12 ಕಡೆ (ವೃತ್ತ)ಗಳಲ್ಲಿ ಹೈಮಾಸ್ಟ್ ದೀಪ ಅಳವಡಿಸಲು 64 ಲಕ್ಷ ರೂ.ಗೆ ಟೆಂಡರ್ ಕರೆದು 34 ಲಕ್ಷ ರೂ. ಪಾವತಿಸಿದ್ದಾರೆ. ಇದುವರೆಗೂ ಸಿಟಿಬಸ್ ನಿಲ್ದಾಣದಲ್ಲಿ ಗಣರಾಜ್ಯೋತ್ಸವದಂದು ಒಂದು ಹೈಮಾಸ್ಟ್ ದೀಪಕ್ಕೆ ಚಾಲನೆ ನೀಡಲಾಗಿದೆ ಎಂಬ ಅಂತೆ-ಕಂತೆ ಸುದ್ದಿ ಬಿಟ್ಟರೆ ಮಿಕ್ಕ 11 ರ ಸದ್ದಡಗಿದೆ!

ಪಾಲಿಕೆಯ ದಾಖಲೆ ಇಣುಕಿದರೆ, ನಗರದ ಬಸ್ ನಿಲ್ದಾಣದಿಂದ ವಲ್ಲಭಾಯಿ ಪಟೇಲ್ ಚೌಕ್‌ವರೆಗೆ 'ಫುಟ್‌ಪಾತ್' ನಿರ್ಮಾಣ ಆಗಿದೆ ಎಂಬುದಾಗಿ ದಾಖಲಿಸಲಾಗಿದೆ. ಆದರೆ ಫುಟ್‌ಪಾತ್ ನಿರ್ಮಾಣದ ಕಾಮಗಾರಿ ಆರಂಭವೇ ಗೊಂಡಿಲ್ಲ. ಬಹುಶಃ ಆಗದು ಎಂಬ ನಿರ್ಧಾರಕ್ಕೆ ಈಗಾಗಲೇ ಪಾಲಿಕೆಯ ಸುಮಾರು 6 ಲಕ್ಷ ನಿವಾಸಿಗಳು ಬಂದಾಗಿದೆ.



...ಇದಕ್ಕೆ ಸಾಕ್ಷಿ ಎಂಬಂತೆ ಇಲ್ಲಿನ ಮಹಾ...ರ ಪಾಲಿಕೆಯಲ್ಲಿ ಅನಾಮತ್ತಾಗಿ 14 ...ಟಿ ಮೌಲ್ಯದ ಭಾನಗಡಿ ನಡೆದಿದ್ದರೆ, ...ನ್ನು ಮರೆಮಾಚಲು ಸಚಿವರು-ಶಾಸಕರು ...ಲ್ಲದ ಪ್ರಯತ್ನ ಪಟ್ಟು 14 ಕೋಟಿ ...ಗಳ ಗೋಲ್‌ಮಾಲ್ ರೂವಾರಿ ಪಾಲಿಕೆ ...ಯುಕ್ತ ತಿಪ್ಪೇಶನನ್ನು ವರ್ಗಾವಣೆ ಮಾಡಿಸಿ...ದ್ದಾರೆ.

...ನಿರಂತರವಾಗಿ ಪಾಲಿಕೆ ಕಚೇರಿಗೆ ವಂಚ...ತ್ತಿದ್ದರೂ ಜಿಲ್ಲಾಧಿಕಾರಿ, ಆಯುಕ್ತರು, ಜೂನಿಯರ್ ...ಜಿನಿಯರ್‌ಗಳು ಹೀಗೆ ಎಲ್ಲಾ ಉನ್ನತ ಅಧಿಕಾರಿ...ಗೂ ಸಾಕ್ಷಾತ್ ಗುಲ್ಬರ್ಗಾ ಶಾಸಕ ರೇವೂರ್ ಮತ್ತು ...ರ್ಶನಾಪುರ ಕೃಪಾಕಟಾಕ್ಷ ಶತಃಸಿದ್ಧವಾದ್ದರಿಂದ ಪಾಲಿಕೆ ...ತ್ರವಲ್ಲ ಜಿಲ್ಲೆಯ ಎಲ್ಲಾ ಇಲಾಖೆಯ ಹಗರಣಗಳು ...ಬೆಗೆ ಮುಂಚೆಯೇ ಕಮರಿಹೋಗುತ್ತಿವೆ; ದುರ್ಬೀನು ...ಹುಡುಕಿದರೂ ಸಾಕ್ಷಿಗಳಿರುವುದಿಲ್ಲ.


...ಪಾಲಿಕೆಯ ಅವ್ಯವಹಾರಗಳಿಗೆ ದಶಕಗಳ ಇತಿಹಾಸ... ವಿವಿಧ ಕಾಮಗಾರಿ ಹೆಸರಲ್ಲಿ ಕಳಪೆ ಸಂಸ್ಥೆಗಳಿಂದ ...ಸ್ಟು ಹಣ ನೀಡಿ ಸಾಮಗ್ರಿ ಖರೀದಿಸುವ ಜೊತೆಗೆ ...ದ ರಸ್ತೆ ಚರಂಡಿ ಇತರೆ ಮೂಲಭೂತ ಸೌಕರ್ಯಗಳ ...ಮಗಾರಿಗಳಲ್ಲೂ ಪಾಲಿಕೆಯ ಅಧಿಕಾರಿ ಮತ್ತು ...ಜಿನಿಯರ್‌ಗಳು ಹಿರಿದು ತಿನ್ನುವ ಶೇ. 30 ...ಷನ್‌ನಿಂದಾಗಿ ಇಡೀ ಪಾಲಿಕೆ ಗಬ್ಬೆದ್ದು ...ತಿದೆ.

...ಮೊದಲೇ ಆರಕ್ಕೆ ಹತ್ತದ, ಮೂರಕ್ಕೆ ಇಳಿಯದ ...ಯಲ್ಲಿದ್ದ ಪಾಲಿಕೆಗೆ ಅದ್ಯಾವಾಗ ತಿಪ್ಪೇಶ ಎಂಬ ...ಯುಕ್ತ ವಕ್ಕರಿಸಿದನೋ, ನಕಲಿ ಬಿಲ್ಲುಗಳೆದ್ದವು.

ಹೋದೆಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷಲಿ ಎಂಬಂತೆ ಇಂತಹ ಸಂದರ್ಭದಲ್ಲಿ ಪಾಲಿಕೆಗೆ ಆಯುಕ್ತನಾಗಿ ಸಚಿವರ ಗ್ರೀನ್‌ಸಿಗ್ನಲ್ ಪಡೆದು ಬಂದವನೇ ಎಸ್.ಪಿ. ಮುಧೋಳ್. ಈತ ಎಂತಹ ದರ್ಬಾರಿನ, ಧಿಮಾಕಿನ ಮನುಷ್ಯನೆಂದರೆ, ಅಧಿಕಾರ ವಹಿಸಿಕೊಂಡ ದಿನವೇ ವಿಜಯೋತ್ಸವವನ್ನು ಸಚಿವರ ಮನೆ ಮುಂದೆ ಪಟಾಕಿ ಸಿಡಿಸಿ ಆಚರಿಸಿದ್ದ ಮತ್ತು ಪಾಲಿಕೆಗೆ ಪ್ಯಾಚ್ ವರ್ಕ್ ಮಾಡುವ ಆರಂಭಶೂರತ್ವ ಮೆರೆದು ಬಿಟ್ಟಿದ್ದ.

ಮುಧೋಳ ಬಂದವನೇ ಜಿಲ್ಲಾಧಿಕಾರಿ ಪಂಕಜ್ ಕುಮಾರ್ ಪಾಂಡೆ ಗಂಟಸ್ಯ ಗಳಿಸಿಕೊಂಡ. ಜಿಡ್ಡುಗಟ್ಟಿದ ಪಾಲಿಕೆ ಪ್ಯಾಚ್‌ವರ್ಕ್ ಹೆಸರಲ್ಲಿ ಸಿಬ್ಬಂದಿಗಳ ಕುರ್ಚಿ ಬದಲಾವಣೆ ಮಾಡಿದ. ಈ ಪರಿವರ್ತನೆ ಹೆಸರಲ್ಲಿ ಲೆಕ್ಕ ಇಡದಷ್ಟು ಕೊಳ್ಳೆ ಹೊಡೆದ. ಇದಕ್ಕೆ ತಾಜಾ ಉದಾಹರಣೆಯಾಗಿ ಪಾಲಿಕೆಯ 9 ತಿಂಗಳಲ್ಲಿ 14 ಕೋಟಿ ರೂ. ಖರ್ಚು ತೋರಿಸಿದ. ಇದಕ್ಕೆ ಪಂಕಜ್ ಕುಮಾರ್ ಪಾಂಡೆ ಸ್ನೇಹದ ಲೇಪದ ಸಹಿ ಜಡಿದೇ ಬಿಟ್ಟರು.


ಮುಧೋಳ್


ಪಂಕಜ್ ಕುಮಾರ್ ಪಾಂಡೆ

ಆಯುಕ್ತ ಮುಧೋಳ ಕೈಚಳಕದಲ್ಲಿ ಪಾಲಿಕೆ ಎಷ್ಟು ಅಭಿವೃದ್ಧಿ ಹೊಂದಿದೆ ಎಂದರೆ ರಾಜ್ಯ ಹಣಕಾಸು ಆಯೋಗ ಪಾಲಿಕೆಗೆ 5.25 ಕೋಟಿ ರೂ. ಹಣ

'ಫುಟ್‌ಪಾತ್' ಹಗರಣದ ಸಂಬಂಧ ದಾಖಲೆ ಸಮೇತ ಜಿಲ್ಲಾ ಜೆಡಿಯು ಕಾರ್ಯಾಧ್ಯಕ್ಷ ರಾಜು ಕುಳಗೇರಿ ನ್ಯಾಯಾಲಯದಲ್ಲಿ ದಾವೆ ಹೂಡಿ ಹೋರಾಡಲು ಅಣಿಯಾಗಿದ್ದಾರೆ.

ಹೀಗೆ ಜಿಲ್ಲೆಯಲ್ಲಿ ಹಗಲು ದರೋಡೆಗಳು ಕಣ್ಣಿಗೆ ರಾಚುತ್ತಿದ್ದರು ಯಾವೊಬ್ಬ ಜನಪ್ರತಿನಿಧಿಯೂ, ಅಧಿಕಾರಿಯೂ, ತಲೆ ಕೆಡಿಸಿಕೊಳ್ಳುತ್ತಿಲ್ಲ. ಒಟ್ಟು ಗುಲ್ಬರ್ಗಾ ಅವ್ಯವಸ್ಥೆಯ ಆಗರವಾಗಿದೆ.

ಹೇಳೂರು ಗತಿಯಿಲ್ಲ ಕೇಳೋರು ಗತಿಯಿಲ್ಲ ಎಂಬ ಸ್ಥಿತಿಯಲ್ಲಿರುವ ಗುಲ್ಬರ್ಗಾ ಜಿಲ್ಲೆಯನ್ನು ಸದ್ಯದಲ್ಲೇ ಹರಾಜು ಮಾಡಲಾಗುತ್ತದೆ ಎಂಬ ಗುಸು-ಗುಸು ಇದೆ. ●

ಹಿಂದೂ ಸಮಾಜೋತ್ಸವಕ್ಕೆ ಸರ್ಕಾರಿ ಯಂತ್ರ!

...ಹಿಂದೆ ಈದ್ಗಾ ಮೈದಾನ ವಿವಾದ ...ಯೇ ಅಸ್ತ್ರ ಮಾಡಿಕೊಂಡು ಚಿಡ್ಡಿಪಡೆಯನ್ನು ...ಸಂಖ್ಯಾತರ ವಿರುದ್ಧ ಎತ್ತಿಕಟ್ಟಿ, ಅಮಾ...ಕರ ಬಲಿ ತೆಗೆದುಕೊಂಡು ಅಧಿಕಾರದ ...ರ್ಗ ಏರಿ ರುಚಿ ಕಂಡಿದ್ದವರು, ...ನ್ನೊಮ್ಮೆ ಜನವರಿ 27 ರಂದು ಹುಬ್ಬಳ್ಳಿಯಲ್ಲಿ ವಿರಾಟ್ ಹಿಂದೂ ...ಮಾಜೋತ್ಸವದ ಹೆಸರಲ್ಲಿ ಅಂತಹುದೇ ಪ್ರಯೋಗ ನಡೆಸಿದ್ದು ಇಲ್ಲಿ ...ಶೇಷವಾಗಿ ಸರ್ಕಾರಿ ಯಂತ್ರ ಬಳಸಿ ...ಸಿದ್ದು ತೀವ್ರ ವಿವಾದಕ್ಕೆ ಎಡೆ ಮಾಡಿದೆ.

...ಸಮಾವೇಶಕ್ಕೆ ಎಂತಹ ಅಡ್ಡಿ-ಆತಂಕ ...ದರೂ ಕಣ್ಮುಚ್ಚಿ ಬಿಡುವುದರೊಳಗೆ ...ಸುವ ಸ್ವಾಮಿನಿಷ್ಠೆ ಪ್ರದರ್ಶಿಸಿದ್ದ ...ಲೀಸ್ ಕಮಿಷನರ್ ಕಮ್ ಬಿಜೆಪಿ ...ಸದುಮನಿ ಹಿಂದೆಂದೂ ಯಾವ ...ಯರ ಮೆರವಣಿಗೆಯೂ ನಡೆಯದ, ...ಅಧಿಕಾರಿಯು ಪರ್ಮಿಷನ್ ನೀಡದ ...ಪ್ರದೇಶ ದಾಜಿಬಾನ್ ಪೇಟೆಯಲ್ಲಿ ...ರವಣಿಗೆಗೆ ಅವಕಾಶ ನೀಡಿ ಹೊಸ ...ಸ ಬರೆದದ್ದಾಗಿದೆ.



...ಅಷ್ಟೇ ಆದರೆ ಕಡಿಮೆ ಎಂದು ಭಾವಿಸಿ ನಡುಮನಿ ಮೆರವಣಿಗೆಗೆ ... ನೀಡಿ. ಅನುಮತಿ ನೀಡಿದ್ದನ್ನು ವಿರೋಧಿಸಿದ ದಾದಫೀರ್ ... ಹಾಗೂ ಸೌಹಾರ್ದ ಗೆಳೆಯರು ಮತ್ತು ಮೂರೂರು ಮಠದ ... ಬಸವರಾಜ ದೇವರನ್ನು ಬಂಧಿಸಲು ಶತಪ್ರಯತ್ನ ನಡೆಸುತ್ತಿದ್ದಾರೆ.

...ವಿರಾಟ್ ಹಿಂದೂ ಸಮಾಜೋತ್ಸವವನ್ನು ಅದ್ದೂರಿಯಾಗಿ ... ಜೊತೆ ಜೊತ್ತು ವಿಆರ್‌ಎಲ್ ಮಾಲೀಕ ವಿಜಯ್ ... ಅತ್ತಿಕಳ್ಳಿ ರಮೇಶ್ ಭಾಷಣ ... ... ಈದ್ಗಾ ವಿವಾದದಂತೆ

ಹಿಂದೂ ಸಮಾಜೋತ್ಸವವನ್ನು ರಾಜಕೀಯಕರಣಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವ ಜಗದೀಶ್ ಶೆಟ್ಟರ್, ಮಾಜಿ ಶಾಸಕ ಅಶೋಕ್ ಕಾಟವೆ, ಸಂಸದ ಪ್ರಹ್ಲಾದ ಜೋಷಿ ಶ್ರಮಿಸಿದ್ದರು.

ಅಂಜುಮನ್ ರಾಜಕೀಯದಲ್ಲಿ ಮುಳುಗಿರುವ ಮಾಜಿ ಸಚಿವರುಗಳಾದ ಎಂ.ಎಂ. ಹಿಂಡಸಗೇರಿ, ಜಬ್ಬಾರ್‌ಖಾನ್ ಹೊನ್ನಳ್ಳಿ ಅಲ್ಪಸಂಖ್ಯಾತರ ಹಿತಕ್ಕೆ ವಿರಾಟ್ ಹಿಂದೂ ಸಮಾಜೋತ್ಸವದಿಂದ ಧಕ್ಕೆಯಾದರೆ ತಮಗೇನು ಎಂಬಂತೆ ಸುಮ್ಮನಾದರು.

ಇದೆಲ್ಲದಕ್ಕೆ ನೀರೆರೆಯುವಂತೆ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳೇ ಚೆಡ್ಡಿ ತೊಟ್ಟು ಹಗಲುರಾತ್ರಿ ಪಾದಯಾತ್ರೆ ನಡೆಸಿದ್ದರು.

ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ದಲಿತರೇ ಹೆಚ್ಚಾಗಿ ಮುಂದಾಳತ್ವ ವಹಿಸಿ ವಿಜೃಂಭಿಸಿ ಆಚರಿಸುವ ಮೊಹರಂ ಹಬ್ಬವನ್ನು ಕೆಡಿಸಬೇಕೆಂದೇ ಚಡ್ಡಿಗಳು ಮೊಹರಂ ಹಬ್ಬದ ಸಮೀಪದ ದಿನವನ್ನು ಸಮಾವೇಶಕ್ಕೆ ನಿಗದಿ ಪಡಿಸಿಕೊಂಡರು. ಸಮಾವೇಶದ ಪ್ರತಿ ಆಗು-ಹೋಗುಗಳನ್ನು ಸೌಹಾರ್ದ ಗೆಳೆಯರು ಸೂಕ್ಷ್ಮವಾಗಿ ಗಮನಿಸುತ್ತ, ಸಂಬಂಧಪಟ್ಟವರ ಗಮನಕ್ಕೆ ತಂದು ವಿರೋಧಿಸುತ್ತಿದ್ದರೂ, ಅದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೇ ಸರ್ಕಾರಿ ಯಂತ್ರವನ್ನು ಮನಸೋ ಇಚ್ಛೆ ಬಳಸಿ ಕೆಲವು ಇಲಾಖೆಗಳಿಂದ ಸಮಾವೇಶಕ್ಕೆ ಹಣ ವಸೂಲಾತಿ ನಡೆಸಿ. ಹೊಸ ವಿವಾದ ಹುಟ್ಟುಹಾಕಲು ಚಡ್ಡಿಗಳು ಭಾರೀ ಹವಣಿಸಿದ ಪ್ರಸಂಗಗಳು ಅನೇಕ ನಡೆದವು.

ಪ್ರಚಾರಕ್ಕಾಗಿ ಪುಕ್ಕಟೆ ಬಂದ ಭಗವಾಧ್ವಜಗಳನ್ನೇ ಮನೆ-ಮನೆಗೆ ತೆರಳಿ, ಕುಂಕುಮ ಇಟ್ಟು, ಬಾಗಿಲಿಗೆ ಪರಿವಾರದ ಸ್ಟಿಕರ್ ಅಂಟಿಸಿ, 12 ರೂಪಾಯಿ ವಸೂಲಿ ಮಾಡಿ ಮನೆಗೊಂದು ಭಗವಾಧ್ವಜ ನೆಟ್ಟು ಭಗವಾಧ್ವಜವನ್ನೂ ಮಾರಿದ್ದಾರೆ ಚಡ್ಡಿಗಳು.

ಸಂಘ ಪರಿವಾರದ ಕಟ್ಟಾಳು ಗೋಲ್ವಾಲ್ಕರ್ ಜನ್ಮ ಶತಮಾನೋತ್ಸವ ಹೆಸರಿನ ವಿರಾಟ್ ಹಿಂದೂ ಸಮಾಜೋತ್ಸವದಲ್ಲಿ ಅಂಬೇಡ್ಕರ್, ಬುದ್ಧ ಬಸವ, ಕನಕರ ಭಾವಚಿತ್ರ ಬಳಸದಂತೆ ಪ್ರತಿಭಟಿಸಿದ ಪರಿಣಾಮ ಭಾವಚಿತ್ರಗಳು ಬಳಕೆಯಾಗದಿದ್ದದ್ದು ಮತ್ತು ಹುಬ್ಬಳ್ಳಿ ಸಮಾಜೋತ್ಸವದಲ್ಲಿ ಯಾವೊಬ್ಬ ದಲಿತ ಸಂಘಟನೆಯ ಮುಖಂಡರು ಮತ್ತು ಕಾಂಗ್ರೆಸ್ ನಾಯಕರು ಪಾಲ್ಗೊಳ್ಳದೇ ಇದ್ದದ್ದು ಸೌಹಾರ್ದ ಗೆಳೆಯರಿಗೆ ಸಮಾಧಾನ ತಂದಿದೆ.

ಜ. 27 ರ ಸಂಜೆ 4 ಗಂಟೆ ಸುಮಾರಿಗೆ ಇಲ್ಲಿನ ಸಬರ್ ಬನ್ ... ಪೊಲೀಸ್ ಠಾಣೆಯಲ್ಲಿ 'ಮೊಹರಂ ಶಾಂತಿ ಸಭೆ' ಕರೆದು ಜಿಲ್ಲಾ ಉಸ್ತುವಾರಿ ಸಚಿವ ಜಗದೀಶ್ ಶೆಟ್ಟರ್ ಅಧ್ಯಕ್ಷತೆ ವಹಿಸಿ, ಸಮಾಜೋತ್ಸವಕ್ಕೆ ವಿರೋಧಿಸುವವರಿಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆಂದು ... ಹೊರಡಿಸಿ, ಸರ್ಕಾರಿ ಯಂತ್ರ ...

ಜಗದೀಶ್ ಶೆಟ್ಟರ್, ... ಮೊಹರಂ ಶಾಂತಿ ಸಭೆ ಬಳಕೆ ಮಾಡಿಕೊಂಡು, ಚಡ್ಡಿಗಳ ವಿರೋಧಿಗಳನ್ನು ... ಹುಬ್ಬಳ್ಳಿಯಲ್ಲಿ ... ಶಾಂತಿ ಸಭೆಯನ್ನು ... ●

ವೈದಿಕರ ರಕ್ಷಣೆಗೆ ನಿಂತ ಕ್ರೂರಿ ರಾಮ



ಬಿಂಬು ನಿರ್ದಯತೆ, ನಿಷ್ಠುರುಗೆ ಮಾತವೇ ಅಲ್ಲ, ಮನಸ್ಸಿನಲ್ಲಿ ಕ್ರೂರತೆ ಅವನಲ್ಲಿನ ಪ್ರಖರವಾಗಿರುವ ಗುಣವಿಶೇಷ. ಇದನ್ನ 'ನಿಷ್ಠುರತೆ', 'ಕಠೋರಯತೆ'.... ಎಂಬ ಪದಗಳಲ್ಲಿ ವಿಮರ್ಶಕರು ಕರೆದಿದ್ದಾರೆ. ರಾಮನ ಶೌರ್ಯ ಯಾವ ಮಟ್ಟದ್ದೆಂದರೆ ಕಾಮಿಸಿ ಬಂದ ಶೂರ್ಪನುಖಿಯನ್ನು ರಾಮನು 'ಈ ಕುರೂಪಿಯನ್ನು ಲಕ್ಷ್ಮಣ, ಮತ್ತಷ್ಟು ವಿರೂಪಗೊಳಿಸಿಬಿಡು' (ಅರಣ್ಯ 18, 20) ಎಂದು ಹೇಳಿದೊಡನೆ ಶ್ರೀರಾಮನು ನೋಡುತ್ತಿರು (ಅದೇ 21) ವಂತೆಯೇ ಲಕ್ಷ್ಮಣನು 'ಆ ರಾಕ್ಷಸಿಯ ಕಿವಿಯನ್ನೂ ಮೂಗನ್ನೂ ಕತ್ತರಿಸಿ' ಬಿಡುತ್ತಾನೆ. ಆಮೇಲೆ ಮತ್ತೊಮ್ಮೆ ಲಕ್ಷ್ಮಣನು, ತನ್ನನ್ನು ಅಪ್ಪಿಕೊಂಡು, ಪ್ರೇಮಿಸಲು ಆಗ್ರಹಿಸಿದ, ಅಯೋ ಮುಖಿಯ 'ಕಿವಿ, ಮೂಗು, ಮೊಲೆ'ಗಳನ್ನು ರಾಮನ ಸಮಕ್ಷಮದಲ್ಲೇ 'ಕೊಯ್ದು ಹಾಕುತ್ತಾನೆ'; 'ಅನಂತರ ಶತ್ರು ಸ್ವಿಹಾರಕರಾದ ರಾಮ ಲಕ್ಷ್ಮಣರು ತಮ್ಮ ತೇಜೋಬಲದಿಂದ ಯಾವುದನ್ನೂ ಲೆಕ್ಕಿಸದೆ ಆ ವನದಲ್ಲಿ ಮುಂದೆ ಹೋಗು(ಅರಣ್ಯ 69, 19)ತ್ತಾರೆ. ಹೀಗೆ ಕಾಮಾರ್ಥಿಯಾಗಿ ಬಂದ ಹೆಣ್ಣನ್ನು ವಿಕೃತಿಗೊಳಿಸುವ ಚಿತ್ರಹಿಂಸೆ ರಾಮನಿಗೆ ಪ್ರಿಯವಾಗುತ್ತದೆ.

ಹೆಂಗುಸರ, ಸತ್ತ ಗಂಡಂದಿರ ಹೆಣದ ಮೇಲೆ ಬಿದ್ದು 'ಕುರರ ಪಕ್ಷಿ'ಯಂತೆ ಆಕ್ರಂದಿಸುವ ವಿಧವೆಯರ ಗೋಳಿಗೆ ಅಚಲಿತನಾದ ರಾಮ, ತನ್ನ ವೈಯಕ್ತಿಕ ದುಃಖ ಸನ್ನಿವೇಶಗಳಲ್ಲಾದರೋ ನೆಲದ ಮೇಲೆ ಬಿದ್ದು, ಅವನ ತಮ್ಮಂದಿರಿಗೇ ಮುಜುಗರವಾಗುವಂತೆ, ಗೋಳಾಡುತ್ತಾನೆ. ದಶರಥನು ಸತ್ತನೆಂಬುದನ್ನು ಭರತನಿಂದ ಕೇಳಿದೊಡನೆಯೇ ರಾಮನು 'ಕೊಡಲಿಯಿಂದ ಕಡಿದಾಗ ಕಾಡಿನಲ್ಲಿರುವ ಆರಳಿ ಮರವು ಹೇಗೆ ಬೀಳುವುದೋ ಹಾಗೆ ಶ್ರೀರಾಮನು ಕೈಗಳನ್ನು ಚಾಚಿ ನೆಲದ ಮೇಲೆ ಒರಗಿ' (ಅ.ಉ. 103, 3) ಮೂರ್ಛೆ ಹೋಗುತ್ತಾನೆ. ಅವನನ್ನು ತಣ್ಣೀರಿನಿಂದ ತಟ್ಟಿ ಎಬ್ಬಿಸಿ, ಸೋದರರೆಲ್ಲರೂ 'ಬಹುಪರಿಯಲ್ಲಿ ಸಂತೈಸು' (ಅದೇ 16)ತ್ತಾರೆ. ಹಾಗೆಯೇ ಸೀತಾಪಹರಣವಾದ ಮೇಲೆ ಅವನ ಗೋಳಾಟ ಲಕ್ಷ್ಮಣನಿಗೇ ಸಾಕಾಗಿ, ಲಕ್ಷ್ಮಣ ಸುಗ್ರೀವರಿಬ್ಬರಿಂದ ಸಂತಾಪ ಶೈತೋಪಚಾರಗಳು ನಡೆಯುತ್ತವೆ. ಲಕ್ಷ್ಮಣನು ಮೂರ್ಛೆ ಹೋದ ಮೇಲೆಯೂ ರಾಮನ ವಿಲಾಪ ಯಥಾವತ್ತಾಗಿ ಕೋಡಿ ಹರಿಯುತ್ತದೆ. ಹೀಗೆ ರಾಮನಿಗೆ ತನ್ನ ದುಃಖಕ್ಕಾಗಿ ಕಣ್ಣೀರಿನ ಸಮುದ್ರವೇ ಇದೆ; ಇತರರ ದುಃಖಕ್ಕೆ ಮಾತ್ರ ಅವನು ಜಿತೇಂದ್ರಿಯತೆಯ ಹೆಬ್ಬಂಡೆಯಾಗಿರುತ್ತಾನೆ.

ಸಹಾನುಭೂತಿಯ ಪ್ರಸಂಗಗಳಲ್ಲಿ ರಾಮನಲ್ಲಿ ಎದ್ದು ಕಾಣುವ 'ಕಪಟ' ಅಥವಾ 'ನಟನೆ' -ಸೀತೆ ರಾಮನಿಗೆ 'ಶೈಲೂಷ, ನರ್ತಕ'ನೆಂದು ಮೂದಲಿಸು ವುದನ್ನು ನೆನೆಯಬೇಕು-ಯ ಕೆಲವು ಪ್ರಸಂಗಗಳನ್ನು ನೆನೆಯ ಬೇಕು. ಕೈಕೇಯಿಯ ದಿಶೆಯಿಂದ ರಾಮನಿಗೆ ವನವಾಸದ ಸಂಕಷ್ಟ ಗಳೆಲ್ಲವೂ ಬಂದೊದಗುತ್ತವೆ ಯಷ್ಟೇ. ರಾಮನಾದರೋ ಬಾರಿ ಬಾರಿಗೆ ತನ್ನ ದುರವಸ್ಥೆಗಳಲ್ಲಿ 'ಕೈಕೇಯಿಯಿಂದ ಹೀಗಾಯಿತಲ್ಲಾ ಅವಳ ಇಷ್ಟ ನೆರವೇರಿತಲ್ಲಾ' ಎನ್ನುತ್ತಾನೆ. ವಿರಾಧನು ಸೀತೆಯನ್ನು ಸೊಂಟಕ್ಕೆ ಕೈಹಾಕಿ ತೊಡೆಮೇಲೆ ಕೂರಿಸಿಕೊಂಡಾಗಲೂ, ಆಮೇಲೆ ಸೀತೆ ರಾವಣನಿಂದ ಅಪಹೃತಳಾ ದಾಗಲೂ, ರಾಮ ಕೈಕೇಯಿಯನ್ನು ದೂರುತ್ತಾನೆ. ಆದರೆ ಅವಳ ಮಗನಾದ ಭರತನಿಗೇ ತಾಯಿಯ ಬಗೆಗಿನ ನಿಷ್ಠೆಯನ್ನು ಬೋಧಿಸು ತ್ತಾನೆ- 'ಅವಳನ್ನು ಗೌರವಿಸು' (ಅ.ಪೂ. 113, 19) ಎನ್ನುತ್ತಾನೆ: ಕೈಕೇಯಿಯು ಮಾಡಿದ ಕಾರ್ಯ ಯುಕ್ತವಾದದ್ದು ಎನ್ನುತ್ತಾನೆ: 'ಆಕೆಯು ಕೇಳಿದ್ದು, ಈತನು (ದಶರಥನು) ಮಾಡಿದ್ದು ಯುಕ್ತವೇ' (ಅದೇ 111, 29). ಅನಂತರ ವಿಭೀಷಣನು ರಾವಣನಿಗೆ ಶವಸಂಸ್ಕಾರ ಸಲ್ಲದು, ಅವನು 'ಪರಸ್ತ್ರೀಯರನ್ನು ಬಲತ್ಕಾರಿಸಿದ ಪಾಪಿ' ಎಂದಾಗ ರಾಮನು 'ಬಹಳ ಸಂತೋಷ' (ಯು.ಉ. 114, 97) ಪಡುತ್ತಾನೆ. ಆಮೇಲೆ ಅವನಿಗೆ ಹಿತವನ್ನು ನುಡಿದು, ಶವಸಂಸ್ಕಾರ ಮಾಡಿಸುತ್ತಾನೆ. ಆ ಸಂದರ್ಭದ 'ಪರಮಪ್ರೀತೋ' ಎನ್ನುವ ಶಬ್ದಕ್ಕೆ ಹೇಗೆ ಎರಡು ರೀತಿಯ ಪದ ವಿಭಾಗ ಮಾಡುತ್ತಾರೆಂಬುದನ್ನು ರಂಗನಾಥ ಶರ್ಮರವರು ಅಡಿಟಿಪ್ಪಣಿಯಲ್ಲಿ ಕಾಣಿಸಿದ್ದಾರೆ: 'ಪರಮಪ್ರೀತಃ' ಎಂದು ಮೂಲ. 'ಪರಂ ಅಪ್ರೀತಃ' ಎಂದು ಪದ ವಿಭಾಗ ಮಾಡಿ, 'ಬಹಳ ಅಸಮಾಧಾನ ವಾಯಿತು' ಎಂದು ಕೆಲವರು ಅರ್ಥ ಮಾಡುತ್ತಾರೆ' (ಅದೇ)

ಈ ಪ್ರಸಂಗಗಳು ಹೊರಗೆಡಹುವ ಒಂದು ಸತ್ಯವೆಂದರೆ ರಾಮನು 'ಒಳ್ಳೆಯವನು' ಅನ್ನುವುದಕ್ಕಿಂತ 'ಒಳ್ಳೆಯ ವನೆನಿಸಿಕೊಳ್ಳಬೇಕು' ಎನ್ನುವಂತಹ ಬಾಲಿಶ ಪ್ರವೃತ್ತಿಯವನು. ಈ ದಿಶೆಯಲ್ಲೇ ಅವನ ಎಲ್ಲಾ ಕಾರ್ಯಗಳನ್ನೂ, ಮುಖ್ಯವಾಗಿ ಸೀತೆಯನ್ನು ಅಗ್ನಿಪ[...] ಗಿಸುವುದು, ಮತ್ತೆ ಅವಳನ್ನು ಕಾಡಿಗ[...] ನೋಡುವುದು ಹೆಚ್ಚು ಸೂಕ್ತವೆಂದು [...] ಒಂದು ವಿಶೇಷ ರೀತಿಯಲ್ಲಿ [...] ರಾಮಾಯಣದಲ್ಲಿ 'ಸಕಲಗುಣ ಸಂ[...] ಅನ್ನಿಸಿಕೊಳ್ಳಲು ಹೊರಟ ಮ[...] ಹುಡುಗ ಎಂದರೆ ತಪ್ಪಾಗಲಾರದು.

ಇನ್ನು, ರಾಮನಲ್ಲಿ ಮೂಲ[...] ಅವನ ವ್ಯಕ್ತಿತ್ವದಲ್ಲೇ ಅಡಗಿರುವ [...] ಬಗ್ಗೆ ರಾಮಾಯಣದಲ್ಲಿ ಒಂದು [...] ಸರ್ಗವೇ ಅದಕ್ಕೆ ಅಂಕಿತವಾಗಿದೆ. [...] ಕಾಡಿಗೆ ಹೋಗುತ್ತಿದ್ದಂತೆಯೇ ಅರಣ್ಯ[...] ಒಂಭತ್ತನೆಯ ಸರ್ಗದಲ್ಲಿ ಸೀತೆ [...] ಅಹಿಂಸೆಯನ್ನು ಭೋಧಿಸುತ್ತಾಳೆ: '[...] ಸೀತಾಧರ್ಮ ವೇದಸಮ್ ಎಂದಿ[...]

ಈ ಸರ್ಗದಲ್ಲಿ ರಾಮಾಯಣದ[...] ಗಹನವಾದ, ಸರ್ವಕಾಲದಲ್ಲೂ [...] ವಾದ, ಜೀವ ಧರ್ಮವನ್ನು ಕುರಿತ, [...] ನಮ್ಮ ಸಮಕಾಲೀನ ಸಂದರ್ಭದಲ್ಲಿ[...] ಗಮನವನ್ನು ತುರ್ತಾಗಿ ಸೆಳೆಯ[...] ಸರ್ವಜೀವ ಅದರಲ್ಲೂ ವನ್ಯಜೀವ [...] ಬಗೆಗಿನ ವಿಚಾರಧಾರೆ ಇದೆ. ರಾಮನ[...] ಸೀತೆ ಹೇಳುತ್ತಾಳೆ:

ನಿಷ್ಕಾರಣವಾಗಿ ಪರಹಿಂಸೆ ಮಾ[...] ಇನ್ನೊಂದು ವ್ಯಸನ ಉಂಟಷ್ಟೆ? ಅದು[...] ವಾದದ್ದು, ಅದು ಅವಿಚಾರದಿಂದ ಸಂ[...] ಈ ಮೂರನೆಯ ವ್ಯಸನ ನಿನಗೆ ಒದ[...] ನನಗನ್ನಿಸುತ್ತದೆ. ವೀರಾಗ್ರಣಿ, ದಂಡ[...] ವಾಸಿಸುವ ಋಷಿಗಳನ್ನು ರಕ್ಷಿಸು[...] ರಾಕ್ಷಸರನ್ನು ಸಂಹರಿಸುತ್ತೇನೆಂದ[...] ಮಾಡಿದ್ದೀಯೆ (9-10), ಅದಕ್ಕೆ[...] ಧನುರ್ಬಾಣಗಳನ್ನು ಧರಿಸಿ ತಮ್ಮನೊಡನೆ ಈ [...] ವನ್ನು ಪ್ರವೇಶಿಸಿದ್ದೀಯೆ. ಹೀಗೆ ನೀನು [...] ಕಂಡು ನನ್ನ ಮನಸ್ಸಿನಲ್ಲಿ ಚಿಂತೆಯು ಆವರಿಸಿ[...] 12). ಶ್ರೀರಾಮ, ನೀನು ಈ ದಂಡಕಾರಣ್ಯ[...] ಮುಂದಕ್ಕೆ ಹೋಗುವುದು ನನಗೆ ಇಷ್ಟವಿ[...] ಕಾರಣವನ್ನು ಹೇಳುತ್ತೇನೆ ಕೇಳು: ನೀ[...]

ಒಂದು ಪತ್ರ

ಎಲ್ಲ ಧರ್ಮಗಳ ಪುರೋಹಿತರು ಭಸ್ಮಾಸುರರು

ಡಿಯರ್ ಗೌರಕ್ಕ,

ಜನವರಿ 10 ರಂದು ಹೊರಬಂದ ಪತ್ರಿಕೆಯ ಸಂಪಾದಕೀಯ "ಯಾರಿವನು ಗೋಲ್ವಾಲ್ಕರ್" ಹಾಗೂ ಡಾ. ಕೆ. ಮರುಳಸಿದ್ದಪ್ಪನವರ "ಗೋಲ್ವಾಲ್ಕರ್‌ಗೆ ಬಲಿಯಾಗುತ್ತಿರುವ ಶರಣ ಸಂಸ್ಕೃತಿ". ಇವೆರಡೂ ಮಾರ್ಮಿಕವಾದ ಪ್ರೌಢ ಲೇಖನಗಳು. ಈ ಎರಡೂ ಲೇಖನಗಳು, ಹಾದಿ ತಪ್ಪುತ್ತಿರುವ ಹಿಂದೂ-ಸಂಸ್ಕೃತಿಯತ್ತ ವೈಚಾರಿಕ ನೆಲೆಗಟ್ಟಿನಲ್ಲಿ ಎಚ್ಚರ ನೀಡುವ ಕೈಗನ್ನಡಿ.

ಧರ್ಮದ ಹೆಸರಿನಲ್ಲಿ ಮುಗ್ಧ ಜನರನ್ನು ಹಾದಿ ತಪ್ಪಿಸುವ ಈ ಪ್ರಕ್ರಿಯೆ, ಪೀಡೆ ಇಂದು ನಿನ್ನೆಯದಲ್ಲ, ಅಥವಾ ಅದು ಬರೀ 'ಹಿಂದೂ ಧರ್ಮಕ್ಕೆ' ಸೀಮಿತವಲ್ಲ. ಇಸ್ಲಾಂ, ಕ್ರೈಸ್ತ ಹಾಗೂ ಇನ್ನೂ ಹಲವಾರು ಧರ್ಮಗಳಲ್ಲೂ ಇದೆ. ಪ್ರತಿ ಧರ್ಮದಲ್ಲೂ ಪುರೋಹಿತಶಾಹಿಯ ಮೇಲುಗೈಯಿಂದ ಧರ್ಮ ಕಂಗೆಟ್ಟಿದೆ. ಅಧೋಗತಿಯತ್ತ ಸಾಗಿದೆ.

ಉಪಾಸನೆಗೆ, ಏಕದೇವ ವಿಶ್ವಾಸವೆಂಬ ಪರಮ ಪವಿತ್ರ ಭವ್ಯ ಬುನಾದಿಯಲ್ಲಿ ನೆಲೆನಿಂತ ಇಸ್ಲಾಂ ಧರ್ಮಕ್ಕೂ ಇದು ಅನ್ವಯಿಸುತ್ತದೆ. ಪ್ರವಾದಿ ಮುಹಮ್ಮದರ ನಿಧನಾ ನಂತರ, ಪಂಗಡಗಳ ಮಧ್ಯೆ, ನಾಯಕತ್ವಕ್ಕಾಗಿ ತಲೆದೋರಿದ ಸುನ್ನಿ, ಶಿಯಾ ತಲೆನೋವು ಧರ್ಮವನ್ನು ಎರಡು ಗುಂಪುಗಳನ್ನಾಗಿ ಮಾಡಿತು. ಅದರ ಬೆನ್ನಲ್ಲೇ ಶಾಫಿ, ಹನಫಿ, ಹಂಬಲಿ, ಮಾಲಿಕಿ ಎಂಬ ವಿವಿಧ ದಾರ್ಶನಿಕ ಚಿಂತನೆಯ ಲಘು ಪ್ರಹಾರ ಬೇರೆ. ಅದರ ನಂತರ ಒಬ್ಬೊಬ್ಬರಾದಿಯಾಗಿ ಒಂದೊಂದು ಪಂಥ. ವಹಾಬಿ, ಮೌದೂದಿ, ಮುಜಾಹಿದ್, ಖಾದಿಯಾನಿ, ಚೇಗನ್ನೂರ್, ಈಕೆ, ಏಪಿ ಎಂದು ಬೇಕಾದ ಹಾಗೇ ಒಳಗುಂಪು, ಪ್ರತಿಗುಂಪು ಮಾಡಿ ಹಾಯಾಗಿ ಮೇಯಲು ಕುಳಿತರು.

ಖುರಾನಿನ 'ಹಯ್ಯು ಅನ್ನಾಸ್'-ಹೇ ಮನುಕುಲವೇ ಎಂಬ ದೇವವಾಣಿಯ ಆಳ ತಿಳಿಯದಾದರು. ಪುಟಗೋಸಿ ಮುಲ್ಲಾ ಮೌಲ್ವಿಗಳು, ದಿನಬೆಳಗಾ ದರೆ ದೈನೇಸಿ ಫತ್ವಾ, ಫರ್ಮಾನುಗಳನ್ನು ಹೊರಡಿಸ ತೊಡಗಿದರು. ದಾಡಿ ಬೆಳಸಿ ಟೋಪಿ ಹಾಕಿದ ವರೆಲ್ಲಾ ಇಮಾಂಗಳಾದರು.

ಯಾವುದೇ ಧರ್ಮಕ್ಕೂ ಧರ್ಮದ ಒಳಗಿನಿಂದಲೇ ಕುತ್ತು, ಅಪಾಯ ಬಂದೆರಗುತ್ತದೆ. ಅದರಲ್ಲೂ ಧರ್ಮವನ್ನು ಒಂದು ಗತಿ ಕಾಣಿಸುವುದೇ ಪುರೋಹಿತ ವರ್ಗ. ಇಂಥವರ ಕೋಮುವಾದ ಧರ್ಮವನ್ನೇ ಇಕ್ಕಟ್ಟಿಗೆ ಸಿಲುಕಿಸಿ ಸಮಾಜವನ್ನು (social structure) ಚೆಲ್ಲಾಪಿಲ್ಲಿ ಮಾಡಿ ಹಾಕುತ್ತದೆ ಧರ್ಮ ಭಸ್ಮಾಸುರ ಅವಾಂತರ ಪಡೆಯುತ್ತದೆ.

ಹಿಂದೂ ಧರ್ಮಕ್ಕೆ ಯಾರಿಂದ ಬೆದರಿಕೆ? ನಿಜವಾಗಿ ಹಿಂದೂ ಧರ್ಮಕ್ಕೆ ಧಕ್ಕೆ ಹಿಂದೂಗಳಿಂದಲೇ ಅಲ್ಲವೇ?

ಓರ್ವ 'ಕೆಳ' ಜಾತಿಯ ಹಿಂದೂಸ್ತ್ರೀ ಶಾಲೆಯಲ್ಲಿ ಆಹಾರ ತಯಾರಿಸಿದ್ದನ್ನು ಮೇಲ್ಜಾತಿ ಹಿಂದೂಗಳು ತಿನ್ನಲಿಲ್ಲ, ಇತರ ಧರ್ಮದವರು ತಿಂದರು. ಓರ್ವ 'ಕೆಳ' ಜಾತಿಯ ಹಿಂದೂ ತಯಾರಿಸಿದ ಆಹಾರ ಸೇವಿಸಿದ್ದರೆ ಏನಾಗುತ್ತದೆ? ಇದು ಇತ್ತೀಚೆಗೆ ನಡೆದ ವಿಚಿತ್ರ ಆದರೂ ಸತ್ಯ ಘಟನೆ.

ಇಂತಹ ವಿಕೃತವಾದ, ಅನವಶ್ಯಕವಾದ ಮನೋಭಾವದಿಂದ ತಾನೇ ಶತಮಾನಗಳಿಂದ ಹಿಂದೂ ಧರ್ಮ ಶಿಥಿಲವಾಗುತ್ತಲೇ ಇರುವುದು. ವೈದಿಕ ಧರ್ಮ ಹುಟ್ಟು ಹಾಕಿದ ವರ್ಣಾಶ್ರಮ ಪದ್ಧತಿಯಿಂದ ಉಸಿರುಗಟ್ಟಿದ ಬಸವಣ್ಣನವರು ಹೊಸ ಪಂಥವನ್ನೇ ಹುಟ್ಟು ಹಾಕಬೇಕಾಯಿತು.

ಮಹಾರಾಷ್ಟ್ರದ 'ಕೀಳು' ಜನಾಂಗ(?) ಮಹರ್ ಜಾತಿಗೆ ಸೇರಿದ ಅಂಬೇಡ್ಕರ್ ಕೂಡ ಜಾತಿ ತಾರತಮ್ಯದಿಂದ ರೋಸಿ ಲಕ್ಷಾಂತರ ಮಂದಿ ಅನುಯಾಯಿಗಳೊಂದಿಗೆ ಬೌದ್ಧಮತಕ್ಕೆ ಮತಾಂತರಗೊಂಡರು.

1932 ರಲ್ಲಿ ಕೇರಳದ ಧಾರ್ಮಿಕ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದ 'ಶ್ರೀನಾರಾಯಣಗುರು ಪಂಥ' ಒಂದು ಹೊಸ ಆಂದೋಲನವನ್ನೇ ಹುಟ್ಟುಹಾಕಿತು. ಅದುವರೆಗೂ ದೇವಸ್ಥಾನ ಪ್ರವೇಶ ಕೇವಲ ನಾಯರ್, ನಂಬೂದಿರಿ ಮುಂತಾದ ಮೇಲ್ಜಾತಿಯವರ ಪಾಲಾಗಿತ್ತು. ಇದರ ವಿರುದ್ಧ ಸಿಡಿದೆದ್ದ ಶ್ರೀನಾರಾಯಣ ಗುರುಗಳು 1932ರ ಸುಪ್ರಸಿದ್ಧ 'ಕ್ಷೇತ್ರ ಪ್ರವೇಶನ ವಿಳಂಬರಂ'- ಕ್ಷೇತ್ರ ಪ್ರವೇಶ ಘೋಷಣೆಯಿಂದ ಪುರೋಹಿತಶಾಹಿಯ ವಿರುದ್ಧ ತಿರುಗಿಬಿದ್ದರು. ಅದುವರೆಗೂ ಮೇಲ್ಜಾತಿಯವರ ಮುಂದೆ ಬರುವಾಗ 'ಕೀಳು'ಜಾತಿ ಹೆಂಗುಸರು (ಯಾವುದೇ ವಯಸ್ಸಿರಲಿ) ಕುಪ್ಪಸ (blouse) ಧರಿಸಬಾರದೆಂಬ ವಿಚಿತ್ರ ಕಾನೂನನ್ನು ತೊಡೆದು ಹಾಕಿ, ಅರೆಬೆತ್ತಲೆಯ ದುರವಸ್ಥೆಯಿಂದ ಕಾಪಾಡಿ ಹೆಣ್ಣಿಗೆ ಸ್ಥಾನಮಾನ ದೊರಕಿಸಿ ಕೊಟ್ಟರು.



ಬ್ರಾಹ್ಮಣಿಕೆಯ mono poly ಮನೋಭಾವದಿಂದಲೇ 12 ನೇ ಶತಮಾನದಲ್ಲಿ, ಹೊಸಧರ್ಮ ಶಾಖೆಯಲ್ಲಿ ತೊಡಗಲು ಬಸವಣ್ಣನವರನ್ನು ಪ್ರೇರೇಪಿಸಿತು. ಜಟಿಲವಾದ ಸಾಂಪ್ರದಾಯಿಕತೆಯಿಂದ, ವರ್ಣಾಶ್ರಮ ಪದ್ಧತಿಯಿಂದ ಧರ್ಮವನ್ನು simplify ಮಾಡಿ ಜನಸಾಮಾನ್ಯರಿಗೂ ತಿಳಿಯಪಡಿಸಿದ ಮಹಾನ್ ಅನುಭಾವಿ. ಧರ್ಮ ಇರುವುದು ಎಲ್ಲರಿಗಾಗಿ ಎಂಬ ಮಹಾನ್ ಆಶಯ ವಿದ್ದರಿಂದಲೇ ವೀರಶೈವ ಧರ್ಮ ಒಂದು ಮಹಾ ಆಂದೋಲನವಾಗಿ ಇದುವರೆಗೂ survive ಆದದ್ದು. ಈ ಚಳವಳಿಯಲ್ಲಿ ಸ್ವಧರ್ಮದಿಂದಲೇ ಕಡೆಗಣಿಸಲ್ಪಟ್ಟ ಶೂದ್ರರು, ಪಂಚಮರು, ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡರು.

ಬ್ರಹ್ಮನ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಮತ್ತು ಪಾದಗಳಿಂದ ಶೂದ್ರರು ಜನಿಸಿದರೆಂದು ಋಗ್ವೇದ (ಮಂಡ[...] 10) ಹೇಳುತ್ತದೆ.

ಮನುಸ್ಮೃತಿ, ಇನ್ನೂ ಒಂದು ಹೆಜ್ಜೆ [...] ಹೋಗಿ ಶೂದ್ರರಿಗೆ ಸಾಮಾಜಿಕ, ಧಾರ್ಮಿಕ, [...] ಸವಲತ್ತುಗಳೇ ನೀಡಬಾರದೆಂದು ಹೇಳುತ್ತದ[...]

ಇಷ್ಟೇ ಅಲ್ಲದೆ, "ವೇದೋಭ್ಯಾಸೋ ಬ್ರಾ[...] ಎಂದು ಹೇಳಿ ಉನ್ನತರಿಗೆ [...] entry ಕೊಟ್ಟು, ಸಾವ[...] ಶಿಕ್ಷಣದ ಅವಕಾಶವನ್ನೂ ನೀ[...] ಮನು ಶೂದ್ರನು ಕೊಳ್ಳಲ್ಪಟ್ಟ[...] ಅಥವಾ ಇಲ್ಲದಿರಲಿ ಬ[...] ಸೇವಾಗಾಗಿಯೇ ಬ್ರಹ್ಮ ಶ[...] ಸೃಷ್ಟಿ ಮಾಡಿರುತ್ತಾನೆ" [...] ಹೇಳುತ್ತಾನೆ. ಇದೂ ಸಾಲ[...] "ಶೂದ್ರನಾದವನು ತನ್ನ ಒಡ[...] ವಿಮೋಚನೆ ಹೊಂದಿದ[...] ದಾಸ್ಯದಿಂದ ಬಿಡುಗಡೆ [...] ವುದಿಲ್ಲ, ಏಕೆಂದರೆ ದಾಸ್ಯ[...] ನಿಂದಲೇ ಅವನಿಗೆ [...] ಸ್ವಭಾವಗುಣ. ಅದನ[...] ಲಾರದು ಎಂದೆನ್ನುತ[...] ಇದಕೆಲ್ಲಾ ಒಂದು '[...] touch' ಕೊಡುತ[...]

"ಹಿಂಸೆಯಿಂದ [...] ದೂರವಿರುವುದು, [...] ಬೇರೆಯವರ ಸಂಪತ್ತಿನ [...] ವಿಚಾರದಲ್ಲಿ ಸಂಯಮದಿಂದ ಇರು[...] ಸತ್ಯವಾದಿಯಾಗಿ ಬದುಕುವುದು, ದಾನ-ಧರ್ಮಗಳಲ್ಲಿ ಆಸಕ್ತಿ ಹೊಂದಿರುವು[...] ಆಸೆಗೆ ಕಡಿವಾಣ ಹಾಕಿಕೊಳ್ಳುವುದು, ಹಿರಿ[...] ವಿಧೇಯವಾಗಿರುವುದು, ಎಲ್ಲರಲ್ಲೂ ದಯೆ[...] ಹೊಂದಿರುವುದು." ಇವುಗಳನ್ನು ಎಲ್ಲಾ ಧರ್ಮಗಳು ಒಪ್ಪಿಕೊಳ್ಳುತ್ತವೆ. ಯಶಸ್ಸಿನ [...] ಮಾರ್ಗವೂ ಇದೇ. ಈ ಸರಳ ಸೂತ್ರವನ[...] ಅರಿತುಕೊಳ್ಳುತ್ತಿಲ್ಲ ಯಾಕೆ?

-ರಹಮತ್ ಅ[...]

ವನ ಧನುರ್ಬಾಣಗಳನ್ನು ಹಿಡಿದು ಕಾಡಿಗೆ ಯ. ಇಲ್ಲಿ ಸಂಚರಿಸುವ ರಾಕ್ಷಸರನ್ನು ಕಂಡಾಗ ನಾವನ್ನು ಪ್ರಯೋಗಿಸುವ ಸಂದರ್ಭ ಬರಬಹುದು.) ಕ್ಷತ್ರಿಯನ ಬಳಿ ಧನುಸ್ಸಿರುವುದು, ಬೆಂಕಿಯ ಜೊತೆ ಇರುವುದು-ಎರಡು ಒಂದೇ. ಅವು ವಲ್ಲಿರುವ ಕ್ಷತ್ರಿಯ ಮತ್ತು ಬೆಂಕಿಗಳ ಬಲಗಳನ್ನು ಹುರಿದುಂಬಿಸುತ್ತವೆ.

ಮ ಧನುಸ್ಸನ್ನು ಹಿಡಿದು ದಂಡಕಾರಣ್ಯದಲ್ಲಿ ಇರುವ ನ್ನು ನಿಷ್ಕಾರಣವಾಗಿ ಸಂಹರಿಸುವುದು ಸರ್ವಥಾ ಲ್ಲ. ವೀರಾಗ್ರಣಿ ನಮಗೆ ತಪ್ಪು ಮಾಡದವ ರನ್ನು ಕೊಲ್ಲುವುದು ನನಗೆ ಇಷ್ಟವಿಲ್ಲ (3- ವಾಸಿಗಳಾದ ಋಷಿಗಳು ಕಷ್ಟದಲ್ಲಿದ್ದರೆ, ಅವರನ್ನು ದು ಕ್ಷಾತ್ರಧರ್ಮವನ್ನವಲಂಬಿಸಿದ ವೀರರ ಕರ್ತವ್ಯ. ವರ ಧನಸ್ಸು ಮಾಡಬೇಕಾದ ಕಾರ್ಯ. (ಈಗ ರಿಸ್ಥಿತಿಯಾದರೋ ಹಾಗಿಲ್ಲ) ಶಸ್ತ್ರವೆಲ್ಲಿ! ಅರಣ್ಯವೆಲ್ಲಿ! ಧರ್ಮವೆಲ್ಲಿ! ತಪಸ್ಸೆಲ್ಲಿ! ಇವು ಪರಸ್ಪರ ದುವು. ನಾವಿರುವುದು ಅರಣ್ಯದಲ್ಲಿ. ಈಗ ಧರ್ಮವಾದ ತಪಸ್ಸಿಗೆ ನಾವು ಮಾನ್ಯತೆಯನ್ನು ಕು (27). ಆದ್ದರಿಂದ ಆರ್ಯಪುತ್ರ, ಈಗ ಹಿಡಿದರೆ ಬುದ್ಧಿ ಕೆಡುವುದು. ಮುಂದೆ ಧ್ಯೆಗೆ ಹೋದಮೇಲೆ ನೀನು ಕ್ಷತ್ರಿಯ ಧರ್ಮವನ್ನು ಹುದು. ಆರ್ಯಪುತ್ರ, ಯಾವುದಾದರೊಂದು ನದಲ್ಲಿ ಸೌಮ್ಯಬುದ್ಧಿಯಿಂದ ನೆಲಸು (32) (ಒತ್ತು

ಕ್ಕೆ ಮುಂದಿನ ರಕ್ಷೋವಧ ಸಮರ್ಥನಮ್ ಎನ್ನುವ ರಾಮನ ಉತ್ತರ ಹೀಗಿದೆ:

ಹಿಂಸೆಗೆ ಗುರಿಯಾದ ಮುನಿಗಳು ನನ್ನ ಬಳಿಗೆ ರಕ್ಷಣೆಯನ್ನು ಬೇಡಿದ್ದಾರೆ. ಅವರ ಬಾಯಿಂದ ಕರಾಗಿದ್ದೇವೆ' ಎಂಬ ಮಾತು ಹೊರಟಿತು. ಅಂಥ ನಾನು ಕೇಳಿದೆ! ನಾನು ಅವರ ಪಾದಗಳಿಗೆ 'ಮಹರ್ಷಿಗಳೆ. ಪ್ರಸನ್ನರಾಗಿರಿ. ನಿಮ್ಮ ಮಾತನ್ನು ಗೆ ಬಹಳ ನಾಚಿಕೆಯಾಗುತ್ತಿದೆ. ಪೂಜಾರ್ಹರಾದ ಬ್ರಾಹ್ಮಣೋತ್ತಮರು ಬಂದು ನನ್ನಲ್ಲಿ ಯಾಚಿಸ ತೆ? ನಾನು ಮಾಡಬೇಕಾದ್ದನ್ನು ಆಜ್ಞಾಪಿಸಬೇಕು' ವೇದಿಸಿಕೊಂಡೆನು. ಆಗ ಅವರೆಲ್ಲರೂ ಒಟ್ಟಾಗಿ ಈ ದಂಡಕಾರಣ್ಯದಲ್ಲಿ ಕಾಮರೂಪಿಗಳಾದ ಂದಿ ರಾಕ್ಷಸರಿದ್ದಾರೆ. ನಾವು ಕಷ್ಟಕ್ಕೆ ಸಿಕ್ಕಿ ಹಿಂಸೆಪಡುತ್ತಿದ್ದೇವೆ. ನೀನೇ ನಮ್ಮನ್ನು ಉಳಿಸಬೇಕು (10-11). ತಮ್ಮ ಪ್ರಭಾವದಿಂದ ಆ ನಿಶಾಚರನ್ನು ನಾಶ ಮಾಡುವ ಸಾಮರ್ಥ್ಯವೇನೋ ನಮಗಿದೆ. ಆದರೆ ಬಹುಕಾಲದಿಂದ ಕಷ್ಟಪಟ್ಟು ಸಂಪಾದಿಸಿದ ತಪೋ ಮಹಿಮೆಯನ್ನು ಹಾಳು ಮಾಡಿಕೊಳ್ಳಲು ನಮಗೆ ಇಚ್ಛೆ ಇಲ್ಲ' (14-15). ನಾನು ಅವರ ಮಾತನ್ನಾಗಲಿ, ಜಾನಕಿ, ಈ ಅರಣ್ಯದಲ್ಲಿರುವ ಋಷಿಗಳನ್ನು ಸರ್ವ ವಿಧದಲ್ಲಿಯೂ ರಕ್ಷಿಸುವುದಾಗಿ ಮಾತು ಕೊಟ್ಟಿದ್ದೇನೆ. ಹೀಗೆ ಋಷಿಗಳಿಗೆ ಮಾತು ಕೊಟ್ಟು ಅದನ್ನು ಎಂದಿಗೂ ಮುರಿಯಲಾರೆ. ಸೀತೆ, ಸಮಯ ಬಂದರೆ ನನ್ನ ಪ್ರಾಣವನ್ನಾದರೂ ತೊರೆದೇನು, ನಿನ್ನನ್ನಾದರೂ ಲಕ್ಷ್ಮಣನನ್ನಾದರೂ ಬಿಟ್ಟೇನು. ಆದರೆ ಮಾತು ಕೊಟ್ಟ ಮೇಲೆ ನನ್ನ ಪ್ರತಿಜ್ಞೆಯನ್ನು ಮಾತ್ರ ಎಂದಿಗೂ ತ್ಯಜಿಸಲಾರೆ, ಅದರಲ್ಲಿಯೂ ಬ್ರಹ್ಮಜ್ಞಾನಿಗಳಿಗೆ ಮಾತು ಕೊಟ್ಟು ತಪ್ಪುವೇನೆ? (ಅರಣ್ಯ 10, 18-19, ಒತ್ತು ನನ್ನದು).

ಸೀತೆಯ ಮೂಲಭೂತವಾದ ಪ್ರಶ್ನೆ ವನ್ಯಪ್ರದೇಶವನ್ನು ಅತಿಕ್ರಮಿಸಿದ ವನ್ಯಜೀವಿಗಳ, ರಾಕ್ಷಸರ ಜೀವನ ಕ್ಷೇತ್ರವನ್ನು ಉಲ್ಲಂಘಿಸುವುದು. 'ದಂಡಕಾರಣ್ಯದಲ್ಲಿ ಇನ್ನೂ ಮುಂದಕ್ಕೆ ಹೋಗುವುದು; 'ಅತಿಕ್ರಮಣವನ್ನು ಆಕ್ರಮಣವನ್ನು ಮುಂದುವರೆಸುವುದು ಜೀವ ಹಿಂಸೆ ಎನ್ನುತ್ತಾಳೆ ಸೀತೆ. ಅವಳು ಒಬ್ಬ ಋಷಿಯ ದೃಷ್ಟಾಂತವನ್ನು ಕೊಟ್ಟು ಹೇಗೆ ಅವನು, ಭಟನ ವೇಷದಲ್ಲಿ ಬಂದ ಇಂದ್ರನು ತನ್ನಲ್ಲಿ ಹರಿತವಾದ ಖಡ್ಗವನ್ನು ಇಟ್ಟುಕೊಂಡಿರುವಂತೆ ಇರಿಸಿ ಹೋದಾಗ, ಆ ಖಡ್ಗದ ಪ್ರಚೋದನೆಯಿಂದ 'ಮೃಗಪಕ್ಷಿಗಳು ವಿಹರಿಸುತ್ತಿದ್ದ ವನದಲ್ಲಿ ಹಿಂಸೆಗೈಯುತ್ತಾ ನರಕಕ್ಕೆ ಹೋದ' (ಅದೇ 16)ನೆಂಬುದನ್ನು ರಾಮನಿಗೆ ಮನದಟ್ಟು ಮಾಡಿಸುತ್ತಾ ರಾಮನು ಅಂತಹ ಮೃಗಪಕ್ಷಿಗಳ ವನ್ಯಜೀವಿಗಳ ಕ್ಷೇತ್ರದಲ್ಲಿ ಧನುರ್ಧಾರಿಯಾಗಿರುವುದು ಸಲ್ಲ, ಹಿಂಸೆ, ಎಂಬುದನ್ನು ತಿಳಿ ಹೇಳುತ್ತಾಳೆ. ರಾಮಾನಾದರೋ ಕೈಕೇಯಿಯ ಇಚ್ಛೆಯಂತೆ ತಂದೆಯ ಆಜ್ಞೆಯಂತೆ ವನವಾಸಕ್ಕೆಂತಲೇ ಬಂದವನಲ್ಲದೆ, ವನದ ಬೇಟೆಗೆ, ಹಿಂಸೆಗೆ ಬಂದವನಲ್ಲ. ಸೀತೆಯು ರಾಮನಿಗೆ ಅಹಿಂಸೆಯನ್ನು ಬೋಧಿಸುವುದಕ್ಕೆ ಮುಂಚೆ ಸೀತೆಯನ್ನು ಅಪಹರಿಸಿದ ವಿರಾಧನೇ ಈ ಪ್ರಶ್ನೆಯನ್ನು ರಾಮ ಲಕ್ಷ್ಮಣರಿಗೆ ಕೇಳುತ್ತಾನೆ: 'ಎಲೈ ಯಾರು ನೀವು? ಜಟೆಯನ್ನು ಕಟ್ಟಿ ನಾರು ಮಡಿಯನ್ನುಟ್ಟದ್ದೀರಿ... ಧನುರ್ಬಾಣಗಳನ್ನೂ ಖಡ್ಗವನ್ನೂ ಧರಿಸಿ ದಂಡಕಾರಣ್ಯಕ್ಕೆ ಬಂದಿದ್ದೀರಲ್ಲ....? ನೀವು ಅಧರ್ಮನಿರತರಾದ ಪಾಪಿಗಳು ನೀವಿಬ್ಬರೂ ಮುನಿಧರ್ಮಕ್ಕೆ ವಿರುದ್ಧವಾಗಿ ನಡೆಯುವ ದುಷ್ಟರು? (ಅದೇ 36-12). ರಾಮ ಲಕ್ಷ್ಮಣರು ವನವಾಸದ ಸೌಮ್ಯ ಜೀವನಕ್ಕಾಗಿಯೇ 'ಗುದ್ದಲಿ', 'ಪುಟ್ಟಿ'ಗಳನ್ನು ಕೃಷಿಗೆ, ಅಥವಾ ವನದಲ್ಲಿ ದಾರಿ ಮಾಡಿಕೊಳ್ಳುವುದಕ್ಕೆ ತಂದವರಲ್ಲವೇ? ಆದರೆ ರಾಮನಿಗೆ ಈ 'ಜಟೆ, ನಾರುಮಡಿ'ಯ ಜೊತೆಗೆ ಬಿಲ್ಲು ಬಾಣಗಳ ಶಸ್ತ್ರಗಳನ್ನು ಕೊಟ್ಟವರಾರು? ರಾಮನ ಈ ಶಸ್ತ್ರಧಾರಣೆ ವೈದಿಕ ಪ್ರೇರಣೆಯಿಂದ ಅವನ ಬೆನ್ನಿಗೆ ಬಿದ್ದದ್ದು. ಸೀತೆಯ ಪ್ರಶ್ನೆಗೆ ರಾಮನ ಉತ್ತರ ತುಂಬಾ ವಿಚಿತ್ರವಾದದ್ದು. ಅವನು ಋಷಿಗಳು 'ಶರಣಾಗತರಾಗಿ'ದ್ದಕ್ಕೇ ಪುಳಕಿತನಾಗಿ ಅವರ ರಕ್ಷಣೆಯಲ್ಲಿ ಎಷ್ಟು ಆಸ್ಥೆ ವಹಿಸುತ್ತಾನೆಂದರೆ ಆ ಕಾರ್ಯ ಅವನಿಗೆ ಸೀತೆಗಿಂತಲೂ ಹೆಚ್ಚು, ಅದಕ್ಕೆ ಅವನು ಸೀತೆಯನ್ನಾದರೂ ಬಿಡಬಲ್ಲ.

ಡಾ. ಪ್ರೋ. ಲಂಕಿ ರಾಮಮೂರ್ತಿಯವರ

7 ಸೀತಾಯಣ



ಈ ಕಾವ್ಯಭಾಗವನ್ನು ಓದುವಾಗ ನಮಗೆ ಎರಡು ವಿಷಯಗಳು ಮಂದಟ್ಟಾಗುತ್ತವೆ-ವೈದಿಕರು ರಾಮನನ್ನು ವೈದಿಕತೆಯ ಸಂರಕ್ಷಣೆಗೆ ಉಪಯೋಗಿಸಿಕೊಳ್ಳುವುದು; ಅವರು ತಮ್ಮ ರಕ್ಷಣೆಯನ್ನು ತಮ್ಮ ತಪೋಬಲದಿಂದ ಮಾಡಿಕೊಳ್ಳಬಹುದು. ಆದರೆ ಅವರಿಗೆ ಅದನ್ನು ಖರ್ಚು ಮಾಡಲು ಇಷ್ಟವಿಲ್ಲ; ಅವರಿಗೆ ಸುಲಭವಾಗಿ ಕ್ಷತ್ರಿಯನೊಬ್ಬನು ದೊರಕಿದ್ದಾನೆ. ಆ ಕ್ಷತ್ರಿಯನಾದರೂ ಆ ವೈದಿಕರ ಬೇಡಿಕೆಗೆ ಅವರಷ್ಟೇ ಉತ್ಸಾಹದಿಂದ ರಕ್ಷಣೆ ಕೊಡಲು ಮುಂದೆ ಬರುತ್ತಾನೆ. ರಾಮನು ಈ ಮುಂಚೆ ವಿಶ್ವಾಮಿತ್ರನೊಡನೆ ಈ ವೈದಿಕ ರಕ್ಷಣೆ ಸಾಕಷ್ಟು ಮಾಡಿದ್ದಾನೆ.

ಆದರೆ ಈಗ, ಪಿತೃವಾಕ್ಯ ಪರಿಪಾಲನೆಯ ಸಮಯದಲ್ಲಿ ವನವಾಸಿಯಾಗಿ ಸೌಮ್ಯ ಜೀವನವನ್ನು ಕಳೆಯಬೇಕಾಗಿ ದ್ದವನು-ಸೀತೆ ವನವಾಸವೆಂದರೆ ಈ ಸೌಮ್ಯ ಜೀವನದ ಶಾಂತತೆ, ಸಾಂತ್ವನವೆಂದೇ ಜೊತೆಗೆ ಬರಲು ಹಾತೊರೆಯುತ್ತಾಳಲ್ಲವೇ?-ರಕ್ಷಣೆ ಕೋರಿದ ವೈದಿಕ ತನ್ನ ಈಗಿನ ವಾನಪ್ರಸ್ಥಾಶ್ರಮದ ನಿಯಮ, ವನವಾಸದ ಸಂಯಮದ ಬಗ್ಗೆ ತಿಳಿಸಿ, ಆ ಸೌಮ್ಯಾವಸ್ಥೆಯಲ್ಲಿರಬಹುದಾಗಿತ್ತು, ಆದರೆ ರಾಮ ತಾನೆ ತನ್ನಲ್ಲಡಗಿರುವ ಹಿಂಸಾಪ್ರವೃತ್ತಿಯಿಂದಲೋ ಅಥವಾ ವೈದಿಕ ಪ್ರಚೋದನೆಯಿಂದಲೋ ತನ್ನ ಮೇಲೆ ಶಸ್ತ್ರಧಾರಣೆಯ ಹೊರೆಯನ್ನು ಹೇರಿಕೊಂಡು ಇಡೀ ರಾಮಯಣದ ಹಿಂಸಾಗಾಥಕ್ಕೆ ಕಾರಣನಾಗುತ್ತಾನೆ. ವಿರಾಧನ ಪ್ರಶ್ನೆ ಎಷ್ಟು ಮುಖ್ಯವಾದದ್ದು! ಸೀತೆಯ ಪ್ರಶ್ನೆ ಎಷ್ಟು ಮೂಲಭೂತವಾದ ಜೀವಜೀವಿಗಳ ಜೀವನದ ಔದಾರ್ಯದ, ಜೀವಿಸುವ ಹಕ್ಕಿನ, ಅವುಗಳ ಪರಸ್ಪರ ಕ್ಷೇತ್ರಧರ್ಮದ, ಸಹಬಾಳ್ವೆಯ ಮಹಾ ಪ್ರಶ್ನೆ! ರಾಮನು ತನ್ನನ್ನು ತಾನು ವೈದಿಕ ಧರ್ಮ ಸಂರಕ್ಷಣೆಗೆ ಬಲಿಪಶುವನ್ನಾಗಿ ಕೊಟ್ಟುಕೊಂಡು, ಅವನನ್ನವಲಂಬಿಸಿದ ಮುಗ್ಧೆಯಾದ ಸೀತೆಯನ್ನೂ ಬಲಿಕೊಡುತ್ತಾನೆ. ರಾಮನ ವೈದಿಕ ಧರ್ಮದಲ್ಲಿನ ನಿಷ್ಠೆ, ಶ್ರದ್ಧೆ ಅದರ ಬಗೆಗಿನ ಅವನ ಕಳಕಳಿ ರಾಮನಿಗೆ ಸೀತೆಯಲ್ಲಿನ ಅನುರಕ್ತತೆಯನ್ನು ಗೌಣಗೊಳಿಸುವಷ್ಟರದ್ದು. ಆ ಭಕ್ತಿ ಶ್ರದ್ಧೆ ಅವನನ್ನು ಅಸಂಖ್ಯಾತ ರಾಕ್ಷಸರ ಕೊಲೆ, ಶೂದ್ರ ತಪಸ್ವಿಯ ವಧೆ, ಕೊನೆಗೆ ರಾವಣ ಸಂಹಾರ-ಇವುಗಳಿಗೆಲ್ಲಾ ನಾಂದಿಯಾಗುತ್ತದೆ. ಈ ಸನಾತನ ಧರ್ಮದ ರಕ್ಷಣೆ, ಅವರ ಮೌಲ್ಯಗಳ ವಿಜೃಂಭಣೆ ರಾಮನನ್ನು ಸೀತೆಯ ಅಗ್ನಿಪ್ರವೇಶಕ್ಕೆ, ಅನಂತರ ಅವಳ ಪರಿತ್ಯಾಗಕ್ಕೆ ಕಾರಣವಾಗುತ್ತದಲ್ಲದೆ, ಅಂತ್ಯದಲ್ಲಿ, ಅವನಿಗೆ ಅತ್ಯಂತ ಪ್ರೀತಿಪಾತ್ರನಾಗಿ ಜೀವನದುದ್ದಕ್ಕೂ ಅವನ ಒಡನಾಡಿಯಾಗಿದ್ದ ಲಕ್ಷ್ಮಣನ ಪರಿತ್ಯಾಗಕ್ಕೂ ಅವನನ್ನು ಸೆಳೆದೊಯ್ಯುತ್ತದೆ: 'ಸೌಮಿತ್ರಿ, ಧರ್ಮಗ್ಲಾನಿಯಾಗಬಾರದೆಂದು ನಿನ್ನನ್ನು ಪರಿತ್ಯಜಿಸಿದ್ದೇನೆ' (ಉ.106, 13) ಎನ್ನುತ್ತಾನೆ ರಾಮ; ಕೊನೆಗೆ 'ಮಹಾಪ್ರಸ್ಥಾನ'ದಲ್ಲಿ ತನ್ನನ್ನು ತಾನೇ ಕೊಟ್ಟುಕೊಂಡು, ಕೈಯಲ್ಲಿ 'ದರ್ಭೆಗಳನ್ನು ಹಿಡಿದು, ಕೇವಲ ಓಂಕಾರವನ್ನು ಜಪಿಸುತ್ತ, ಅರಮನೆಯಿಂದ ನಿರ್ಗಮಿಸು' (ಉ. 109, 3-)ವಲ್ಲಿ ಸನಾತನ ಮೌಲ್ಯಗಳಿಗಾಗಿ, ವೈದಿಕ ಧರ್ಮ ಸಂರಕ್ಷಣೆಗಾಗಿ ಕೊನೆಗೆ ತಾನೇ 'ದರ್ಭೆ ಹಿಡಿದು' ವೈದಿಕನಾಗುವುದಕ್ಕಾಗಿ, ರಾಮನ ಬಲಿದಾನಗಳ ಬೃಹತ್ಕೃತಿಯಾದ ರಾಮಾಯಣ ಸಮಾಪ್ತವಾಗುತ್ತದೆ.

(ಮುಂದುವರೆಯುತ್ತದೆ)

ಪೊಲೀಸರಿಗೆ ಕೊಲ್ಲುವ ಹಕ್ಕು ಕೊಟ್ಟವರ್‍ಯಾರು?

ಕಳೆದ ಕೆಲವು ತಿಂಗಳುಗಳಿಂದ ದಕ್ಷಿಣ ಕನ್ನಡ ಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿದಾಗ ಹಕ್ಕುಗಳ ಕುರಿತು ಚಿಂತಿಸುವ ಯಾರಿಗೇ ಮನ ಕಲಕದಿರಲಾರದು. ಧರ್ಮದ ಲ್ಲಿ ಅಮಾಯಕ ನಾಗರಿಕರನ್ನು ಬಂಧಿಸಿ ವುದು, ಕೊಲೆ ಮಾಡುವುದು; ಬಹುಸಂಖ್ಯಾತ ಂಡವರು ಅಲ್ಪಸಂಖ್ಯಾತರ ಮೇಲೆ ನಡೆಸು ದಬ್ಬಾಳಿಕೆಯನ್ನು ಪೊಲೀಸರು ಕೈಕಟ್ಟಿಕೊಂಡು ತ್ತಾ ನಿಲ್ಲುವುದು ಇವೆಲ್ಲವೂ ಯಾವುದರ ಸೂಚನೆ? ಇಲ್ಲಿ ಸರ್ಕಾರ ಮತ್ತು ನ್ಯಾಯಾಲಯ ದು ಇದೆಯೇ?


ಬುದ್ಧಿಜೀವಿಗಳೆಂದು ಹೆಸರು ಪಡೆದ ವಿದ್ಯಾವಂತರ ಕನ್ನಡ ಜಿಲ್ಲೆಯಲ್ಲಿ ಇಡೀ ಕರ್ನಾಟಕದ ಬೇರೆ ಭಾಗದಲ್ಲಿಯೂ ಕಾಣದಂತಹ ಹಿಂಸೆ, ಗೂಂಡಾ ಕಾಣಿಸಿಕೊಳ್ಳುತ್ತಿದೆಯೇಕೆ? ಮನುಷ್ಯರೇ ರ ಮೇಲೆ ಇಂತಹ ದೌರ್ಜನ್ಯವೆಸಗುವು ಶಾಲೆ, ಕಾಲೇಜುಗಳಲ್ಲಿ ಇವರು ಕಲಿತದ್ದೇನು? ಮತ್ತು ಗಾಂಧೀಜಿಯ ಯಾವ ಬೋಧನೆ ಇವರ ಅಳಕ್ಕಿಳಿಯಲೇ ಇಲ್ಲವೇ? ಅಥವಾ ಜಿ ಎಂದರೆ ಯಾರು ಎಂದು ಕೇಳುವ ದಿನವೂ ರಲಾರದೇನೊ. ಗಾಂಧೀಜಿಯವರನ್ನು ಕೊಂದ ಯಾರು ಎಂದು ಹಳ್ಳಿಯವರೊಡನೆ ಕೇಳಿದರೆ, ಜಿಯನ್ನು ಕೊಂದಿದ್ದಾರೆಯೇ? ಯಾರು ನ್ನು?" ಎಂದು ನಮ್ಮೊಡನೆಯೇ ಕೇಳುತ್ತಾರೆ! ನನ್ನ ಅನುಭವ. ಬೆಂಗಳೂರಿನಲ್ಲಿ ಕುಳಿತು ಂದು ಹೇಳಿಕೆ ನೀಡುತ್ತಾ ನಿದ್ರಾವಸ್ಥೆಯಲ್ಲಿರುವ ಗಳೇ, ಇಂತಹ ಪ್ರಶ್ನೆಗಳ ಗಂಭೀರತೆ ನಿಮ್ಮನ್ನು ದಿದೆಯೇ?

ಲ್ಲ ಇರಲಿ. ನಾನೀಗ ಹೇಳ ಹೊರಟಿರುವುದು ಹಕ್ಕುಗಳ ಕುರಿತು.

ಲ್ಲಿ ರಫೀಕ್ 'ಪೊಲೀಸ್ ಎನ್‌ಕೌಂಟರ್'ನಲ್ಲಿ ಂತಹ ಪರಿಹಾರಕ್ಕಂತೂ ಇದು ಬಹಳ ವಿಷಯ ಸುದ್ದಿಯಾಗಿರಬಹುದು. ಆದರೆ ಮೂಲ್ಕಿ ಈ ರೀತಿ ಪೊಲೀಸರ ಗುಂಡಿಗೆ ಬಲಿಯಾ ಬಹುದೇ? ಈ ಕುರಿತು ಈ ದೇಶದ ರೆಲ್ಲರೂ ಆಳವಾಗಿ ಚಿಂತಿಸಬೇಕು.

ಲ್ಲಿ, ರಫೀಕ್‌ನ ಮರಣದಿಂದ ಯಾರೂ ದುಃಖಿಸುವುದಿಲ್ಲ. ಆತ ಸಾಯಬೇಕಾದವನೇ. ಆದರೆ ಆ ಸಾವು ಹೇಗೆ ಬರಬೇಕು? ಆತನ ಅಪರಾಧ ನ್ಯಾಯಾಲಯದಲ್ಲಿ ಸಾಬೀತಾಗಬೇಕು ಮತ್ತು ನ್ಯಾಯಾಲಯ ಆತನಿಗೆ ಶಿಕ್ಷೆ ವಿಧಿಸಬೇಕು. ಒಂದು ಪ್ರಜಾಸತ್ತೆಯಲ್ಲಿ ಕಾನೂನುಬಾಹಿರವಾಗಿ ಯಾರಿಗೂ ಯಾರನ್ನು ಕೊಲೆ ಮಾಡಲು ಅಧಿಕಾರವಿಲ್ಲ. ಈ ದೇಶದ ಸಂವಿಧಾನದಂತೆ ನ್ಯಾಯಾಧೀಶರಿಗೆ ಮಾತ್ರ ಅಪರಾಧಿಗೆ ಶಿಕ್ಷೆ ನೀಡುವ ಹಕ್ಕಿದೆ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ರಾಷ್ಟ್ರಾಧ್ಯಕ್ಷರಿಗೆ ಮಾತ್ರ ಈ ಶಿಕ್ಷೆಯನ್ನು ಕಮ್ಮಿ ಮಾಡುವ ಅಥವಾ ಕ್ಷಮಾದಾನ ನೀಡುವ ಅಧಿಕಾರವಿದೆ. ಆದರೆ ಕೊಲ್ಲುವ ಅಥವಾ ಕೊಲೆಗೆ ಆಜ್ಞೆ ನೀಡುವ ಹಕ್ಕು ಯಾರಿಗೂ ಇಲ್ಲ.

ಆದರೆ ಇಂದು ನ್ಯಾಯಾಲಯ ಮತ್ತು ಅಪರಾಧಿಗೆ ಶಿಕ್ಷೆ ನೀಡುವ ಹಕ್ಕನ್ನು ಪೊಲೀಸ್ ವ್ಯವಸ್ಥೆ ತಾನೇ ಕೈಗೆತ್ತಿಕೊಂಡಿದೆಯೇ? ಮೂಲ್ಕಿ ರಫೀಕ್‌ನ ಬಂಧನವಾದ ದಿನವೇ ಇಲ್ಲಿನ ಜನರು, "ಇನ್ನು ಒಂದೆರಡು ದಿನಗಳಲ್ಲಿ ಎನ್‌ಕೌಂಟರಿನಲ್ಲಿ ರಫೀಕನ ಹತ್ಯೆಯಾಗಲಿದೆ" ಎನ್ನತೊಡಗಿದ್ದರು. ಅಂತೆಯೇ ರಫೀಕನನ್ನು ಪೊಲೀಸರು ಗುಂಡಿಟ್ಟು ಕೊಂದರು. ಈ ಕೊಲೆ ನ್ಯಾಯಯುತವಾದುದೇ? ಅಲ್ಲವೇ ಎಂಬ ಚರ್ಚೆ ಕೂಡಾ ನಡೆಯುತ್ತಿಲ್ಲ.



ಇಂದು ಪೊಲೀಸರು ರೌಡಿಯೊಬ್ಬನನ್ನು ಕೊಂದರು. ಈಗ ನಾವು ಇದನ್ನು ಪ್ರಶ್ನಿಸದಿದ್ದರೆ ನಾಳೆ ನಿರಪರಾಧಿಯೊಬ್ಬನೂ ಇಂತಹ ಶಿಕ್ಷೆಗೆ ಗುರಿಯಾಗಬೇಕಾದೀತೆಂಬುದನ್ನು ನಾವು ಮರೆಯಬಾರದು. ನಿರಪರಾಧಿಯೊಬ್ಬನನ್ನು ಸಂದೇಹದಿಂದ ಪೊಲೀಸರು ಬಂಧಿಸಿದರೆಂದಿಟ್ಟುಕೊಳ್ಳೋಣ. ಭಯಭೀತನಾದ ಆತನು ಪೊಲೀಸರ ಹಿಂಸೆಯನ್ನು ತಡೆಯಲಾರದೆ, ತಪ್ಪಿಸಿಕೊಳ್ಳಲು ಅನುವು ದೊರಕರೆ ತಪ್ಪಿಸಿಕೊಂಡು ಓಡಿದಾಗ ಪೊಲೀಸರು ಗುಂಡು ಹೊಡೆದು 'ಎನ್‌ಕೌಂಟರ್' ಹೆಸರಿನಲ್ಲಿ ಸಾಯಿಸಬಹುದಲ್ಲವಾ?

ಕೊಲೆಗಾರರನ್ನು ಅಥವಾ ಅಪರಾಧಿಗಳನ್ನು ಬಂಧಿಸಿ. ಎಫ್‌ಐಆರ್ ದಾಖಲಿಸಿ ಮೊಕದ್ದಮೆ ಹೂಡುವುದು, ಬೇಕಾದ ಸಾಕ್ಷಿಗಳನ್ನು ಸಿದ್ಧಗೊಳಿಸುವುದು ಪೊಲೀಸರ ಕೆಲಸ. ಅದು ಬಿಟ್ಟು ರಾತ್ರಿಯಲ್ಲಿ, ದುರ್ಬಲನಾದ, ನಿರಾಯುಧನಾದ ಆತನನ್ನು ಜೀಪಿನಲ್ಲಿ ಕೊಂಡೊಯ್ದು "ಆತನು ತಪ್ಪಿಸಿಕೊಂಡು ಓಡತೊಡಗಿದನು. ಆತನ ಕೈಯಲ್ಲಿ ಪಿಸ್ತೂಲು ಇತ್ತು. ನಾವು ಆತ್ಮರಕ್ಷಣೆಗಾಗಿ ಗುಂಡಿಟ್ಟು ಕೊಂದೆವು" ಎನ್ನುವುದು ಯಾವ ನ್ಯಾಯ? ಇದನ್ನು ಈಗ ನಾವು ಪ್ರಶ್ನಿಸದಿದ್ದರೆ ಇದು ಮಾಮೂಲು ಆಗಿಬಿಡುವ ಅಪಾಯವಿದೆ. ಅದರ ಮುನ್ಸೂಚನೆ ಈಗಲೇ ಕಾಣಿಸುತ್ತಿದೆ.

ಪೊಲೀಸರ ಈ ಕುಕೃತ್ಯವನ್ನು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿ ಪ್ರಶ್ನಿಸಲು ಸಾಧ್ಯವೇ ಎಂದು ನಾಗರಿಕರು ಚಿಂತಿಸಬೇಕು. ಅಪರಾಧಿಯಾಗಲಿ, ನಿರಪರಾಧಿಯಾಗಲಿ ಯಾರನ್ನೂ ಕೊಲ್ಲುವ ಅಧಿಕಾರ ಪೊಲೀಸರಿಗೆ ಇಲ್ಲ, ಪೊಲೀಸರ ಬಂಧನದಿಂದ ತಪ್ಪಿಸಿಕೊಂಡನೆಂದರೆ ಅದಕ್ಕೆ ಪೊಲೀಸರೇ ಜವಾಬ್ದಾರರಾಗಬೇಕು. ಪೊಲೀಸರಿಗೇ ಶಿಕ್ಷೆ ನೀಡಬೇಕಲ್ಲದೆ ತಪ್ಪಿಸಿಕೊಂಡಾತನನ್ನು, ಪೊಲೀಸರು ಕೊಲ್ಲುವುದನ್ನು ಒಪ್ಪಿಕೊಳ್ಳಲು ಖಂಡಿತಾ ಸಾಧ್ಯವಿಲ್ಲ. ಪ್ರಜ್ಞಾವಂತ ನಾಗರಿಕರು ಈ ಕುರಿತು ಚಿಂತಿಸಬೇಕು. ನಾವು ಈಗಲೇ ಇದನ್ನು ತಡೆಯದಿದ್ದರ ನಮ್ಮ ಮುಂದಿನ ಪೀಳಿಗೆ ಬಹಳ ದೊಡ್ಡ ಬೆಲೆ ತೆರಬೇಕಾಗಬಹುದು ಎಂಬುದನ್ನು ನಾವು ಮರೆಯದಿರೋಣ.

ಇಂತಹ ಒಂದು ಹೋರಾಟವನ್ನು ಮಾಡಿದವರು ಕೇರಳದ ಪ್ರೊ. ಈಚರ ವಾರಿಯರ್ ಎಂಬುವರು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ತಮ್ಮ ಮಗ, ಇಂಜಿನಿಯರಿಂಗ್ ಕೊನೆಯ ವರ್ಷದ ವಿದ್ಯಾರ್ಥಿ ರಾಜನ್ ಎಂಬುವನನ್ನು ಪೊಲೀಸರು ಬಂಧಿಸಿ ಕೊಂಡೊಯ್ದರು. ಆ ಬಳಿಕ ಆತನನ್ನು ಯಾರೂ ನೋಡಲಿಲ್ಲ, ಈ ಕುರಿತು ಈಚರ ವಾರಿಯರ್ ನ್ಯಾಯಾಲಯದಲ್ಲಿ ನಡೆಸಿದ ಹೋರಾಟವನ್ನು ಆತ್ಮಕಥನದಂತೆ ಬರೆದಿದ್ದಾರೆ. ಅವರು ಒಂದೆಡೆಯಲ್ಲಿ, "ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟವನ್ನು ಪುನರುಜ್ಜೀವನಗೊಳಿಸಬೇಕು. ನಮ್ಮ ಮುಂದಿನ ಪೀಳಿಗೆಯ ಮಕ್ಕಳನ್ನು ಪೊಲೀಸರ ಮರ್ದನಕ್ಕೆ ಬಿಟ್ಟುಕೊಡಬಾರದು" ಎನ್ನುತ್ತಾರೆ.

ಇಂತಹ ದೌರ್ಜನ್ಯಗಳ ವಿರುದ್ಧ ಹೋರಾಡುವ ಮನೋಭಾವ ನಮ್ಮದಾಗಬೇಕು. ಸಂವಿಧಾನ ನಮಗೆ ನೀಡಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಕನ್ನಡಿಗರೆಲ್ಲರೂ ಹೋರಾಡಬೇಕು.

ಐನ್‌ಸ್ಟೀನ್ ಎಂಬ ವಿಜ್ಞಾನಿ ಹೇಳಿದ ಒಂದು ಮಾತನ್ನು ನಾನು ಮತ್ತೊಮ್ಮೆ ಜ್ಞಾಪಿಸುತ್ತೇನೆ. "ಈ ಜಗತ್ತು ಬದುಕಲು ಯೋಗ್ಯ ಸ್ಥಳವಾಗಿ ಉಳಿದಿಲ್ಲ. ದುಷ್ಟರು ಅಧಿಕಾರವಾಗಿರುವುದರಿಂದಲ್ಲ. ಆ ದುಷ್ಟತನವನ್ನು ಪ್ರಶ್ನಿಸುವವರು ಕಮ್ಮಿಯಾಗಿರುವುದರಿಂದ" ಎಂಬುದು ಆ ಮಾತು.

-ಸಾರಾ ಅಬೂಬಕ್ಕರ್

ಕೇಕ್ ಸ್ವಾಮಿಗಳೂ ಹಾಗೂ ನಾಯಿದಯಾ ಸಂಘವ

ಭೇ ಸುಮ್ಮನೆ ಹೇಳಬಾರದು. ಯಾವ ಗಳಿಗೆಯು ಲ್ಲಾದರೂ ಟಿವಿ ಗಮನಿಸಿ. ಕೇಸರಿ ವಸ್ತ್ರಧಾರಿಗಳು ತಮ್ಮ ಘನವಾದ ಆಶೀರ್ವಾದವನ್ನೋ, ಪ್ರವಚನವನ್ನೋ ನೀಡುತ್ತಿರುತ್ತಾರೆ. ಅದನ್ನ ಕೇಳೋಕೆ ಎರಡು ಕಿವಿ ಸಾಲದು; ನೋಡೋಕೆ ಎರಡು ಕಣ್ಣು ಸಾಲದು. ಇವನ್ನು ಬೇಕಾದರೆ ಸಮೂಹಸನ್ನಿ ಎನ್ನಿ. ಇದನ್ನು ಕಂಡೋ, ಕೇಳಿಯೋ ಜನರಲ್ಲಿ ಆಸ್ತಿಕ ಭಾವನೆ ದಿನೇದಿನೇ ಮುಗಿಲು ಮುಟ್ಟುವಂತಿದೆ. ಪ್ರತಿದಿನ ಒಂದಲ್ಲ ಒಂದು ಕಡೆ ದೇವತಾಕಾರ್ಯಗಳು ವಿಜೃಂಭಿಸುತ್ತಿವೆ. ಲೋಕ ಕಲ್ಯಾಣಕ್ಕಾಗಿ ಸಹಸ್ರ ಕುಂಕುಮಾರ್ಚನೆಗಳು ಅವಿರತವಾಗಿ ನಡೆಯುತ್ತಿದ್ದು, ಸಾವಿರಾರು ಸ್ತ್ರೀಯರು ಅದರಲ್ಲಿ ಪಾಲ್ಗೊಂಡು ಜನಸಾಮಾನ್ಯರ ಉತ್ತಮ ಬದುಕಿಗಾಗಿ ಪ್ರಾರ್ಥಿಸುತ್ತಿದ್ದಾರೆ. ಇದೇ ಉದ್ದೇಶದಿಂದ ಹೋಮ ಹವನಗಳು ಸತತವಾಗಿ ನಡೆಯುತ್ತಿವೆ.

ಒಂದು ಅಂದಾಜಿನ ಪ್ರಕಾರ ದೇವಸ್ಥಾನಗಳ ಸಂಖ್ಯೆ ಶಾಲೆಗಳ ಸಂಖ್ಯೆಯ ನಾಲ್ಕರಷ್ಟು ಇದ್ದರು ಜನರಿಗೆ ಇನ್ನೂ ಧಾರ್ಮಿಕ ಹಸಿವು ಹಿಂಗದೆ ಖಾಲಿ ನಿವೇಶನಗಳು (ಖಾಸಗಿ ಯಾ ಸರ್ಕಾರದ್ದಾಗಲಿ) ಕಣ್ಣಿಗೆ ಬಿದ್ದರೆ ಸಾಕು ದೇವಾಲಯಗಳು ಮೇಲೇಳುತ್ತಿವೆ. ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ನೀಡದಿದ್ದರೂ ದೇವತಾ ಕಾರ್ಯಗಳಿಗೆ ಉದಾರವಾಗಿ ದಾನ ಮಾಡುವ ಧರ್ಮಾತ್ಮರು ದಿನೇದಿನೇ ಹೆಚ್ಚುತ್ತಿದ್ದಾರೆ. ಭಗವಂತನ ಪಾದಾರವಿಂದಗಳ ಬಳಿಗೆ ನೇರವಾಗಿ ತಲುಪಿಸಲು ಮಠಾಧಿಪತಿಗಳ ಮಾರ್ಗದರ್ಶನ ಅಗತ್ಯ ಎಂಬುದನ್ನು ಅರಿತ ಭಕ್ತಾಧಿಗಳು ತಮ್ಮತಮ್ಮ ಮಠದ ಗುರುಗಳ ಹುಟ್ಟುಹಬ್ಬವನ್ನು ತನು ಮನ ಧನಗಳನ್ನು ಅರ್ಪಿಸುವುದರ ಮುಖಾಂತರ ವೈಭವೋಪೇತವಾಗಿ ಆಚರಿಸುತ್ತಿರುವುದು ಪ್ರಶಂಸನಾರ್ಹ. ಇಂತಹ ಸಮಾರಂಭಗಳಿಗೆ ರಾಜಕೀಯ ನಾಯಕರು ಭಾಗವಹಿಸುತ್ತಿದ್ದು ದೇಶ ಧಾರ್ಮಿಕವಾಗಿ ಮುಂದುವರಿಯುತ್ತಿದೆ ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ.


ಆಧುನಿಕತೆ-ಸಾಂಪ್ರದಾಯಕತೆಗಳ ಸಂಯುಕ್ತ ಮಿಶ್ರಣದಂತಿರುವವರಿಗಾಗಿ (ಸ್ವದೇಶಿ ಮಂತ್ರ ಜಪಿಸುವ, ನಮ್ಮ ಅಪೂರ್ವ ಪರಂಪರೆಯನ್ನು ಕಾಪಾಡಬೇಕು ಎಂಬ ಮನಸ್ಸುಳ್ಳ ಸ್ವಾಮಿಗಳೂ) ತಮ್ಮ ಹುಟ್ಟುಹಬ್ಬವನ್ನು ಮೋಂಬತ್ತಿ ಬೆಳಗಿಸಿ, ಕೇಕ್ ಕಟ್ ಮಾಡುವುದರ ಮೂಲಕ ನೆರವೇರಿಸಿಕೊಂಡು 'ಕೇಕ್ ಸ್ವಾಮಿ'ಗಳಾಗುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ಮುಂಬರುವ ವರ್ಷಗಳಲ್ಲಿ, ಇತ್ತೀಚಿನ ನವಯುವಕ ಯುವತಿಯರು ಜನ್ಮದಿನವನ್ನು ಆಚರಿಸುವ ರೀತಿಯಲ್ಲಿ 'ವೈನ್ ಅಂಡ್ ಡೈನ್' ಪಾರ್ಟಿಗಳನ್ನು ಮಠಗಳಲ್ಲಿ ಕಾಣಬಹುದಾಗಿದೆ.

ಹೀಗೆ ಲೌಕಿಕ ಹಾಗೂ ಪಾರಮಾರ್ಥಿಕ ಸಂಬಂಧಗಳನ್ನು ಉಳಿಸಿಕೊಂಡಿರುವ ಮಠಾಧೀಶರು ಈ ಭೂಮಿಯ ಮೇಲಿನ, ಭೂಮಿಯ ಆಚೆಗಿನ ಸಕಲ ಸಮಸ್ಯೆಗಳಿಗೂ ಪರಿಹಾರ ಸೂಚಿಸುತ್ತಿದ್ದಾರೆ. ಅಮೂರ್ತ ಚಿಂತನೆಗಳಿಗಿಂತಲೂ ಮೂರ್ತ ಚಿಂತನೆಗಳು ಅವರನ್ನು ಇತ್ತೀಚೆಗೆ ಹೆಚ್ಚು ಕಾಡಿಸುವಂತಿದೆ. ಯಾವುದೇ ಸಮಸ್ಯೆ ಬಂದರೂ ಇವರು ಪರಿಹಾರ ನೀಡುತ್ತಾರೆ. ಶಾಲಾ ಮಕ್ಕಳಿಗೆ ಕೋಳಿ ಮೊಟ್ಟೆ ನೀಡುವ ವಿಷಯ ಆಗಲಿ, ಕನ್ನಡ ಮಾಧ್ಯಮದ ವಿಷಯ ಆಗಲಿ, ಭಾಷಾ ವಿವಾದ ಆಗಲಿ, ಚುನಾವಣಾ ಅಭ್ಯರ್ಥಿ ಸಂಗತಿ ಆಗಲಿ, ಇಂತಹ ಯಾವುದೇ ವಿಷಯ ಆಗಲಿ 'ಆಡುಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಇವರು ಅಧಿಕೃತವಾಗಿ ಮಾತನಾಡದ ವಿಷಯವೇ ಈ ಪ್ರಪಂಚದ ಮೇಲಿಲ್ಲ.

ಕೆಲವೊಮ್ಮೆ 'ಮಾಂಸಾಹಾರಿಗಳು ಕಸಾಯಿಖಾನೆ ಸಂಸ್ಕೃತಿಯವರು' ಎಂದೋ 'ಯಾವತ್ತೂ ಈ ದೇಶ ಶಾಖಾಹಾರಿ ದೇಶ ಆಗಿತ್ತು' ಎಂದೋ ಹೇಳಿಕೆ ನೀಡಿ ತಮ್ಮ ಹೀನಸಂಸ್ಕೃತಿಯನ್ನು, ಇತಿಹಾಸದ ಅಜ್ಞಾನವನ್ನು ತೋರಿಸುತ್ತಿದ್ದಾರೆ ಎಂದು ಕೆಲವರಿಗೆ ಅನ್ನಿಸಬಹುದಾದರೂ ಸ್ವಾಮಿಗಳ ಮಾತುಗಳನ್ನು ಹೀಗೆ ಅರ್ಥೈಸಬೇಕಾದುದಿಲ್ಲ ಎಂಬುದು ನಮ್ಮ ನಂಬಿಕೆ. ಆಧ್ಯಾತ್ಮಿಕತೆಯನ್ನು ಮರೆತು ಮಠಾಧೀಶರು ಯಾಕೆ ಹೀಗೆ ಇತರೆ ವಿಷಯಗಳಲ್ಲಿ ತಲೆ ತೂರಿಸುತ್ತಿದ್ದಾರೆ ಎಂದರೆ ಪುರಾಣ ಪುಣ್ಯ ಕಥೆ ಹೇಳುತ್ತಾ ಕುಳಿತರೆ ಒಂದು ನೊಣವೂ ಹತ್ತಿರ ಸುಳಿಯುವುದಿಲ್ಲ ಎಂದು ಅರಿತು, ಈ ರೀತಿ ಮಾಡುತ್ತಿದ್ದಾರೆ ಎಂದು ಕೆಲವರು ಕುಹಕ ಆಡಬಹುದಾದರೂ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿಲ್ಲ! ಮಠಾಧೀಶರ ಅವಿರತ ಶ್ರಮದಿಂದಾಗಿ ಧಾರ್ಮಿಕ ಭಾವನೆ ಜನರಲ್ಲಿ ಹೆಚ್ಚುತ್ತಿದ್ದು ದಿಢೀರ್ ಉದ್ಭವಿಸುತ್ತಿರುವ ದೇವಸ್ಥಾನ ಗಳೇ ಇದಕ್ಕೆ ಉದಾಹರಣೆಯಾಗಿದೆ. ಇದೇ ಪ್ರಮಾಣದಲ್ಲಿ ಬಡವರ ಸಂಖ್ಯೆಯೂ ಏರುತ್ತಿರುವುದರಿಂದ ವೈಜ್ಞಾನಿಕ ಮಿದುಳಿಗೆ ಒಂದು ಅಚ್ಚರಿಯ ನಿಯಮ ಗೋಚರಿಸಬಹುದು. ಅದೆಂದರೆ 'ದೇವಸ್ಥಾನಗಳ ಸಂಖ್ಯೆ ಹೆಚ್ಚಿದ ಪ್ರಮಾಣದಲ್ಲೇ ಬಡಜನರ ಸಂಖ್ಯೆಯ ಪ್ರಮಾಣವೂ ಹೆಚ್ಚುತ್ತದೆ!'

ಧಾರ್ಮಿಕ ಭಾವನೆಗೂ ದಯೆಗೂ ಸಂಬಂಧ ಇದೆಯೆ? ದಯೆಯೇ ಧರ್ಮದ ಮೂಲವಯ್ಯ ಅಂದ ಬಸವಣ್ಣ 'ಸಕಲ ಜೀವಿಗಳಿಗೂ ಲೇಸನೇ ಬಯಸುವ' ಎಂದಿದ್ದಾರೆ. ಜೆ.ಎಚ್. ಪಟೇಲರಿಗೆ ಇದು ಅತಿಯಾಗಿ ಕಾಡುತ್ತಿತ್ತಂತೆ. ಅವರು ಮುಖ್ಯಮಂತ್ರಿ ಗದ್ದುಗೆಗೆ ಏರಿದಾಗ ಶುಭ ಕೋರಲು ಹಲವರು ಬಂದಿದ್ದರಂತೆ. ಅವರಲ್ಲಿ ಕೆಲವರು ಅವರ ಕಡು ವಿರೋಧಿಗಳಾಗಿದ್ದವರಂತೆ. ಆದರೂ 'ಸಕಲ ಜೀವಿಗಳಿಗೂ ಲೇಸನೇ ಬಯಸುವ' ಅವರು ತಮ್ಮ ಸಿಬ್ಬಂದಿಗೆ ಹೇಳಿ ಉಡುಗೊರೆಯನ್ನು ತರಿಸಿದರಂತೆ. ಪ್ರತಿಯೊಬ್ಬರಿಗೂ ಅದನ್ನು ನೀಡಿದರಂತೆ. ಎಂತಹ ಅಮೂಲ್ಯ ಉಡುಗೊರೆ ನೀಡಿರಬಹುದು ಮುಖ್ಯಮಂತ್ರಿಯವರು ಅಂತ ಕುತೂಹಲ ತುಂಬಿದ ಆಸೆ ಕಣ್ಗಳಿಂದ ಅದನ್ನು ಬಿಚ್ಚಿ ನೋಡಲಾಗಿ... ಅಲ್ಲಿದ್ದದ್ದು... ಷೂ ಲೇಸ್ ಅಂತೆ! ಅದನ್ನು ಕಂಡು ಶುಭ ಹಾರೈಸಲು ಬಂದವರು ಪೆಚ್ಚುಗಳಾಗಿ, ಪಟೇಲರು 'ಬಸವಣ್ಣ ಹೇಳಿದ್ದಂತೆ ಸಕಲ ಜೀವಿಗಳಿಗೂ ಲೇಸನೇ ಬಯಸಿ ನಿಮಗೆ lace ಅನ್ನೇ ನೀಡಿದ್ದೇನೆ' ಅಂದರಂತೆ!

ಜೆ.ಎಚ್. ಪಟೇಲರ ಲೇಸಲ್ಲ ನಾನು ಹೇಳುತ್ತಿರುವುದು. ಇದು ಕನ್ನಡದ 'ಲೇಸು', ಇಂಗ್ಲಿಷಿನ 'lace' ಅಲ್ಲ, ಪ್ರಾಣಿ ದಯಾಸಂಘ ಅಂತ ಇದೆ. ಇದಕ್ಕೆ ಕನ್ನಡದ ಲೇಸು ಇದೆಯಾ? ಇದು ಯಾಕೆ ಈಗ ಅಂದರೆ, ಬೆಂಗಳೂರಿನ ಚಂದ್ರಾಲೇಔಟ್‌ನಲ್ಲಿ ಕೊಬ್ಬಿದ ಬೀದಿ ನಾಯಿಗಳು ಗುಲ್ಬರ್ಗಾದ ಬಾಲಕಿಯನ್ನು ಹಾಡುಹಗಲೇ ಜೀವಂತವಾಗಿರುವಂತೆಯೇ ಕಚ್ಚಿ ರಕ್ತ ಹೀರಿದವಲ್ಲಾ, ಮಾಂಸ ತಿಂದು ತೇಗಿದವಲ್ಲ... ಆಗ



ಆ ಮಗು ಪಟ್ಟಿರುವ ಯಾತನೆ, ಅನುಭವಿಸಿರುವ ಭಯ ನೆನಪಿಸಿಕೊಂಡೇ ಭಯಾನಕ ಅನ್ನಿಸುತ್ತಲ್ಲಾ... ಪ್ರಾಣಿ ದಯಾ ಸಂಘ ಇದನ್ನು ಕೆಲವು ನಿಮಿಷ ಹಾಗೇ ಊಹಿಸಿಕೊಳ್ಳಲಿ. ಅವರಿಗೆ ಆಗ ಏನನ್ನಿಸುತ್ತೆ?

ಏನೂ ಅನ್ನಿಸುವುದಿಲ್ಲ!

ಯಾಕೆ ಏನೂ ಅನ್ನಿಸುವುದಿಲ್ಲ?

ಯಾಕೆಂದರೆ ಅದು ಮಗು, ಪ್ರಾಣಿ ಅಲ್ಲ! ಸಂಘ ಇರುವುದು ಪ್ರಾಣಿಗಳಿಗೆ ದಯೆ ತೋರಲು, ಮನುಷ್ಯರಿಗಲ್ಲ!

ಹಾಳಾಗಲಿ, ಕತ್ತೆ ಕುದುರೆ ಎಮ್ಮೆ ಇಂ… ಪ್ರಾಣಿಗಳೇ ಅಲ್ಲವೆ? ಇವುಗಳ ಬಗ್ಗೆಯೂ … ಇರಬೇಕಲ್ಲ?

ಹಾಗಲ್ಲ, ಅವರ ದಯೆ ಗೋವುಗಳಿಗೆ, ನಾ… ಮೀಸಲು!

ಯಾಕೆ ಹೀಗೆ?

ಗೋವು ಮೂವತ್ತು ಮೂರು ಕೋಟಿ ದೇ… ವಾಸ ಸ್ಥಾನ! ನಾಯಿಯೇ ನಾರಾಯಣ!

ಅಂದರೆ ಅದು ಪ್ರಾಣಿದಯಾ ಸಂಘ ಅಲ್ಲ… ದಯಾ ಸಂಘ' ಅಥವಾ 'ನಾಯಿ ದಯಾ … ಎಂದ ಹಾಗಾಯಿತು.

ಬೀದಿಯಲ್ಲಿ ತಿರುಗಾಡಲು ಜನರಿಗೆ ನಾ… ಕಾಟ-ಮಕ್ಕಳನ್ನು ಹೊರಗೆ ಬಿಡಲು ನಾಯಿ … ಏನು ಇದಕ್ಕೆ ಪರಿಹಾರ?

ಅಶಕ್ತ, ಅಂಗವಿಕಲ ಮಾನವನ ಮೇಲೆ… ನಡೆಸುವ ನಾಯಿಗಳನ್ನು ಕೊಲ್ಲಲು ಕಾನೂನಿನಲ್ಲಿ … ಇದೆ. ಹಾಗೆ ಮಾಡಬಹುದಾ?

ಕೂಡದು, ನಾಯಿ ಹತ್ಯೆ ಮಹಾ ಪಾಪ…

ಹಾಗಾದರೇನು ಮಾಡಬೇಕು?

ನಾಯಿಗಳಿಗೆ ಸಂತಾನ ನಿಯಂತ್ರಣ ಮಾ…

ಹಾಗೇ ಮಾಡೋಣಂತೆ. ಆದರೆ ಒಂದು … ನಿಯಂತ್ರಣಕ್ಕೊಳಗಾದ ನಾಯಿ ಕಚ್ಚುವುದಿಲ್ಲವ…

ಮನೆಯಿಂದ ಹೊರಗೆ ಹೋಗಬೇಡಿ!

ಅಂದರೆ ಮನುಷ್ಯನಿಗಿಂತ ನಾಯಿಗಳಿಗೆ ಬ… ಹಕ್ಕು ಹೆಚ್ಚಿದೆ. ಅವು ಮನುಷ್ಯರನ್ನು ಕಚ್ಚಬ… ದಾರಿಯಲ್ಲಿ ಅಡ್ಡಗಟ್ಟಿ ಬೆದರಿಸಬಹುದು.

ಇಂತಹ ನಾಯಿಗಳಿಗೇನು ಮಾಡಬೇಕು…

ಆಹಾರದ ಕೊರತೆಯಿಂದ ಅವು ಹೀಗೆ ಮಾ… ಆಹಾರ ಹಾಕಿ ನಾಯಿ ಕಡಿತದಿಂದ ಪಾ…

ಒಂದು ಆಲೋಚನೆ:

ಸರ್ಕಾರ 'ವಿಶೇಷ ಆರ್ಥಿಕ ವಲಯ'… ಹೆಸರಿನಲ್ಲಿ ಬಡರೈತರ ಉತ್ತಮ ಜಮೀನನ್ನು ವ… ಕೊಂಡು ಶ್ರೀಮಂತರಿಗೆ ನೀಡುತ್ತಿದೆ.

ಉಪಮುಖ್ಯಮಂತ್ರಿ ಯಡಿಯೂರಪ್ಪ ಗೋ… ಗಾಗಿ ಪ್ರತಿ ಜಿಲ್ಲೆಯಲ್ಲೂ ಇಪ್ಪತ್ತೈದು ಎಕರೆ ಭೂಮಿ… ಮುಫತ್ತಾಗಿ ನೀಡುತ್ತಾರಂತೆ. ಅಂದರೆ '… ಗೋವಲಯ' ಅಂದಹಾಗೆ ಆಯಿತು.

ಬದುಕುವ ಆಸೆ ಉಳ್ಳವರು 'ವಿಶೇಷ … ವಲಯ'ಕ್ಕೂ 'ವಿಶೇಷ ದೇವಸ್ಥಾನ ವಲಯಕ್ಕೂ… ಹಾಕಿ ಫಲವತ್ತಾದ ಭೂಮಿ ಕಬಳಿಸಬಹುದಾ…


-ಎಚ್.ಎಲ್. ಕೇಶವಮ…

ಸಮಾಜೋತ್ಸವ ಅಲ್ಲ, ವಿಪ್ಲವೋತ್ಸವ

ಸಂಯುಕ್ತ ಕರ್ನಾಟಕದ ಅವ್ಯವಸ್ಥೆ ಕುರಿತು ವಿವರವಾಗಿ ವರದಿ ಮಾಡಿ, ಸಮಸ್ತ ಕನ್ನಡಿಗರ ಗಮನಕ್ಕೆ ತರುವ ಜನಪರ ಕಾಳಜಿ ವಹಿಸಿದ್ದಕ್ಕೆ ಸಂ.ಕ.ದ ಸಮಸ್ತರ ನೌಕರರ ಅಭಿನಂದನೆಗಳು. ತಾವು ಎರಡು ಸಂಚಿಕೆಯಲ್ಲಿ ಲೋಕಶಿಕ್ಷಣ ಟ್ರಸ್ಟ್ ಬಗ್ಗೆ ಬರೆದ ವರದಿಗಳು ಸಂಪೂರ್ಣವಾಗಿ ಸತ್ಯವಾಗಿವೆ.

ಕಾರ್ಯದರ್ಶಿ ನಾರಾಯಣಮೂರ್ತಿ ಪತ್ರಿಕೆಯ ಜವಾಬ್ದಾರಿಯನ್ನು ಹೊರತುಪಡಿಸಿ, ಬೇರೆ ಎಲ್ಲಾ ಚಟುವಟಿಕೆಗಳಲ್ಲೇ ನಿರತರಾಗಿರುತ್ತಾರೆ. ವಾರ್ಷಿಕ ಸಂಬಳ, ಬೋನಸ್, ಬಡ್ತಿಗಳನ್ನು ಕೇಳಿದ ನೌಕರರಿಗೆ 'ಸಂಸ್ಥೆ ನಷ್ಟದಲ್ಲಿದೆ' ಎಂದು ಸಬೂಬು ಹೇಳುತ್ತಾರೆ. ಆದರೆ, ಅನವಶ್ಯಕ ಖರೀದಿ, ಬೇಕಾದವರಿಗಷ್ಟೇ ಸಂಬಳ ಹೆಚ್ಚಿಸುವುದು, ಅನವಶ್ಯಕ ಪೆಟ್ರೋಲ್ ಖರ್ಚು ಮಾಡುವುದರಲ್ಲೇ ಅವರು ಕಾಲಹರಣ ಮಾಡುತ್ತಾರೆ.

ತಮ್ಮ ಸಾರಥ್ಯದ 'ಲಂಕೇಶ್' ವಾರಪತ್ರಿಕೆ ವರದಿ ಮಾಡಿರುವಂತೆ ಸಂ.ಕ. ಕಛೇರಿ ಮುಂದಿನ ಸುಮಾರು 1 1/2 ಎಕರೆ ಲೋಕಶಿಕ್ಷಣ ಟ್ರಸ್ಟ್ ಒಡೆತನದ ಭೂಮಿ ಆಂಧ್ರದವರಿಗೆ 50 ವರ್ಷಕ್ಕೆ ಪರಭಾರೆ ಮಾಡಿರುವುದು ಸತ್ಯದ ಸಂಗತಿ. ಇದರಲ್ಲಿ ಕಾರ್ಯದರ್ಶಿ ನಾರಾಯಣ ಮೂರ್ತಿ ಕೋಟ್ಯಂತರ ರೂ. ಹಣ ಪಡೆದಿರಬಹುದು. ಏಕೆಂದರೆ ಸಂಸ್ಥೆಗೆ ಕೇವಲ ಕಟ್ಟಡ ಮತ್ತು 1.50 ಕೋಟಿ ಮಾತ್ರ ಬರುವಂತೆ ಮಾಡಿ, ಒಪ್ಪಂದ ಮಾಡಿ ಕೊಂಡಿದ್ದಾರೆ.



ಅಲ್ಲದೆ, ಟ್ರಸ್ಟ್ ಅಧ್ಯಕ್ಷರಾದ ಹಾರ್ನಳ್ಳಿ ರಾಮಸ್ವಾಮಿ ಸಂ.ಕ. ಕಚೇರಿಯನ್ನು ಕಾಂಗ್ರೆಸ್ ಪಕ್ಷದ ಕಚೇರಿಯನ್ನಾಗಿ ಪರಿವರ್ತಿಸಿದ್ದಾರೆ. ಕಚೇರಿಗೆ ಪ್ರತಿದಿನ ಕಾಂಗ್ರೆಸ್ ಪಕ್ಷದವರೇ ಬಂದು, ಅವರ ಪಕ್ಷದ ಸುದ್ದಿಗಳನ್ನೇ ಪ್ರಕಟಿಸಿಕೊಳ್ಳುತ್ತಿದ್ದಾರೆ. ಸಂ.ಕ. ನೌಕರರನ್ನು ಸಂಪೂರ್ಣ ಕಡೆಗಣಿಸಿ, ಪತ್ರಿಕೆ ನೆಲಕಚ್ಚಲು ಕಾರಣರಾಗಿದ್ದಾರೆ. ತಾವು ಇನ್ನೂ ಈ ಟ್ರಸ್ಟಿನ ಬಗ್ಗೆ ತನಿಖೆ ನಡೆಸಿದರೆ ಮತ್ತಷ್ಟು ಅವ್ಯವಹಾರದ ವಿಷಯಗಳು ಲಭ್ಯವಾಗುತ್ತವೆ. ದಯವಿಟ್ಟು ಇದರ ಬಗ್ಗೆ ಇನ್ನಷ್ಟು ತನಿಖಾ ವರದಿಗಳನ್ನು ಪ್ರಕಟಿಸಿ.

ಒಟ್ಟಾರೆ ಬೀದಿಗೆ ಬಿದ್ದ ಸಂ.ಕ. ಪತ್ರಿಕೆ ಮತ್ತು ನೌಕರರ ಬಗ್ಗೆ ಕಾಳಜಿ ವಹಿಸಿ, ನ್ಯಾಯ ದೊರಕಿಸಿಕೊಟ್ಟಿದ್ದಕ್ಕೆ ತಮಗೆ ಹಾಗೂ ವರದಿ ಮಾಡಿದ ರಾ. ಸೋಮನಾಥ್‌ರವರಿಗೆ ಮತ್ತೊಮ್ಮೆ ಅಭಿನಂದನೆಗಳು.

-ಸಂ.ಕ. ನೌಕರರು

ಜನವರಿ 17ರ ಸಂಚಿಕೆ ಓದಿದೆ. ಲಂಕೇಶರು ಭೌತಿಕವಾಗಿ ಇಂದು ನಮ್ಮೊಂದಿಗಿಲ್ಲದಿದ್ದರೂ ಅವರ ವೈಚಾರಿಕತೆ, ವ್ಯವಸ್ಥೆಯ ಬಗೆಗಿನ ಕಾಳಜಿ ಎಲ್ಲವೂ ಇಂದಿಗೂ ಪತ್ರಿಕೆಯಲ್ಲಿ ಅನುರಣಿಸುತ್ತಿರುವುದು ಖುಷಿ ಕೊಟ್ಟಿದೆ.

ಎಲ್ಲಾ ಬಿಟ್ಟು ಖಾದಿ ತೊಟ್ಟ ಸನ್ಯಾಸಿಗಳು ಎಂತೆಂಥ ಎಡವಟ್ಟುಗಳನ್ನು ಮಾಡಬಲ್ಲರು ಅನ್ನುವುದು ಪೇಜಾವರ ಪ್ರಕರಣದಿಂದ ಮತ್ತೆ ಸಾಬೀತಾಗಿದೆ.

ಪತ್ರಿಕಾರಂಗದ ಭೀಷ್ಮ ಲಂಕೇಶ್ ಅವರ ವಿಚಾರಧಾರೆಗಳ ಪ್ರಸ್ತುತತೆಗೆ ಹೆಚ್ಚಿನ ಆದ್ಯತೆ ಕೊಟ್ಟು, ವ್ಯವಸ್ಥೆಯನ್ನು ಸಮಾಜ ಮುಖಿಯಾಗಿ ಕರೆದೊಯ್ಯುವಲ್ಲಿ ಗೌರಕ್ಕ ಅತ್ಯಂತ ಸೂಕ್ಷ್ಮ ಪ್ರಜ್ಞೆಯನ್ನು ಕಾಯ್ದುಕೊಂಡಾರು ಎಂಬ ವಿಶ್ವಾಸ ಅಭಿಮಾನಿಗಳದು. ಈ ನಿಟ್ಟಿನಲ್ಲಿ ಯಶಸ್ಸು ಗೌರಕ್ಕ ಮತ್ತು ಬಳಗಕ್ಕಿರಲಿ ಎಂಬ ಹಾರೈಕೆ ನನ್ನದು.

-ಚನ್ನಬಸವ
ಪೂತ್ತೂರ್ಕರ.ಚಿತ್ರದುರ್ಗ


ನಮ್ಮ ಜಿಲ್ಲೆಯಲ್ಲಿ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿರುವ ಕೊರಗ ಜನಾಂಗದ ಇಳಿವಯಸ್ಸಿನ ಮಹಿಳೆಯೊಬ್ಬರು ತಮ್ಮ ಓರಗೆಯವರೊಂದಿಗೆ ಬಡತನದ ನೋವನ್ನು ಹಂಚಿಕೊಳ್ಳುತ್ತಾ "ಮನುಷ್ಯರು ಮನುಷ್ಯರನ್ನು ಕೊಂದು ತಿನ್ನುವ ಕಾಲವೊಂದು ಬರುತ್ತಿದೆಯಂತೆ" ಎಂದು ಹೇಳಿದ ಮಾತು ಇಂದು ನನ್ನ ಇಳಿವಯಸ್ಸಿನಲ್ಲಿ ಸತ್ಯವಾಗಿ ಕಾಣುತ್ತಲಿದೆ.

ಗ್ರಾಮದಲ್ಲಿ ರೈತಾಪಿ ವರ್ಗದ ದನ, ಕರು ಸತ್ತಾಗ ಅವುಗಳ ಮಾಂಸವನ್ನು ತಿಂದಿರುವ ಅನುಭವ ಆಕೆಯದು. ಆಗಲೂ ಮನುಷ್ಯರ ಜೀವಂತ ಕೊಲೆಯಾಗುತ್ತಿತ್ತು ಎಂಬುದು ಆಕೆಯ ಮುಗ್ಧ ಮನಸ್ಸಿಗೆ ಹೊಳೆ… 'ಗಾಂಧಿ ದೇವರ'ನ್ನು ನನಗೆ ಕಾಣಿಸಿದ್ದ ಆ… ಅಜ್ಜಿ- ಚರುಂಬಿ. ಕಣ್ಣಿಗೆ ಕಾಣದ ಗಾಳಿ, … ಬೆಂಕಿಗಳನ್ನು ದೇವರೆಂದು ನಂಬಿದ್ದ ಆಕೆಗೆ … ಕರ್ಮ, ಪಾಪ-ಪುಣ್ಯಗಳೆಂದರೆ ಭಯದಿಂದ … ಭಕ್ತಿಯಿತ್ತು. ಕುಟುಂಬದ ದುಡಿಮೆಯ ಅತ್ಯಲ್ಪ… ಯನ್ನು ಪರಿವಾರದೊಂದಿಗೆ ಹಂಚಿ ತಿನ್ನುವ… ಆಕೆಯಲ್ಲಿ ಧಾರಾಳವಾಗಿತ್ತು. ನಮ್ಮ ಸಮು… ದಲ್ಲಿ ಈಗಲೂ ಅಂತಹ ಮಂದಿ ಇದ್ದಾರೆ. … ಬೇಕಾಗಿರುವುದು ಶಾಂತಿ-ನೆಮ್ಮದಿಯ ಬದುಕು. … ಪರಸ್ಪರ ಸಹಕಾರ, ಸಮಾನ ಚಿಂತನೆ, ಒಟ್ಟಾಗಿ ಬ… ಆಧುನಿಕ ಸಾಮಾಜಿಕ ಬದುಕು ಪ್ರಕೃತಿಜನ್ಯವ…

ಅಧಿಕಾರ ಲಾಲಸೆಗಳಿಂದ… ಮತಗಳ ಆಧಾರದಲ್ಲಿ ಉದ… ವಾಗುವ ಸೈದ್ಧಾಂತಿಕ (?) ವಿ… ಅಮಾಯಕರನ್ನು ಅವರಿಗೆ … ದಂತೆ ಧರ್ಮ-ದೇವರ ಪ್ರಲ… ಯಿಂದ ಉದ್ರೇಕಿಸುತ್ತವೆ; ಅವರು… ದೀನತೆಗೊಳಗಾಗಿ ಬಲಿಯಾಗುತ್ತಾರೆ.

ಚರಿತ್ರೆಗಳಿಂದ, ವೇದ ಪುರಾಣಗಳಿಂದ ಪ… ಯುವುದರ ಬದಲು ಅವುಗಳ ಕಾಪಟ್ಯದ ಪಾ… ನಡೆದಿದೆಯೆಂದರೆ ಅದು ದೂಷಣೆಯೆನಿಸುತ್ತದ… ರುವ, ನಡೆಯುತ್ತಿರುವ, ನಡೆಯಬಹುದಾದ … ಕೋಲಾಹಲ; ಮಾರಣಹೋಮಗಳನ್ನು ಸ್ಥಾಪಿ… ಸಕ್ತಿಗಳು ತಮ್ಮ ಕುತರ್ಕ, ಕುತಂತ್ರ, ಕುಮಂತ್ರ… ಸಮರ್ಥಿಸಿಕೊಳ್ಳುತ್ತವೆ. ಪ್ರಸ್ತುತ ವಿರಾಟ … ಸಮಾಜೋತ್ಸವವು ವಿಪ್ಲವೋತ್ಸವವೆಂದು ಬಿಂ… ಪತ್ರಿಕೆಗೆ ಧನ್ಯವಾದಗಳು.

-ಪಿ. ಗೋಕುಲ್‌ದಾಸ್, ಮಂಗ…



ಅಪ್ಪಾಜಿ ಕಲಿಸಿದ ಜೀವನದ ಪಾಠಗಳು



...ಮೊಟ್ಟದ ಕಣ್ಣಪ್ಪ' ಚಿತ್ರ ...ಸುತ್ತಿರುವಾಗ ಇನ್ನೊಂದು ...ನಡೆಯಿತು. ಅಲ್ಲಿಯತನಕ ...ಮದುವೆಯಾಗಿದ್ದರೂ ...ಯವರ ಮನೆಯಲ್ಲೇ ...ದ್ದೆ. ಆಗ ಒಂದು ದಿನ ...ಕರೆದ ಅಪ್ಪಾಜಿ ಮತ್ತು "ಪಕ್ಕದ ರಸ್ತೆಯಲ್ಲಿರುವ ...ದು ಮನೆಯಲ್ಲಿ ನೀನು ...ಹೂಡು" ಎಂದರು. ...ಕೇಳಿ ನನಗೆ ಆಶ್ಚರ್ಯ ... ಆದರೆ ಅಪ್ಪ-ಅಮ್ಮ ಹೇಳಿದ್ದನ್ನು ಎಂದೂ ...ವನಲ್ಲ ನಾನು. ಅವರು ನನ್ನ ಒಳ್ಳೆಯದಕ್ಕೆ ...ರೆ ಎಂದು ನಂಬಿದ್ದವನು ನಾನು.

...-ಅಮ್ಮನ ಪ್ರೀತಿಯ ಆದೇಶದಂತೆ ನಾನು, ... ಗೀತಾ ಮತ್ತು ಮಗಳು ಅಪ್ಪಾಜಿಯವರ ... ಪಕ್ಕದ ರಸ್ತೆಯಲ್ಲಿರುವ ಹೊಸ ಮನೆಗೆ ...ದೆವು. ಆ ಮನೆಯನ್ನು ಅಮ್ಮ ನನ್ನ ... ಬರೆಸಿಕೊಟ್ಟರು. ಅಪ್ಪಾಜಿ ಮನೆಯಿಂದ ...ದು ಹೊಸ ಮನೆಯಲ್ಲಿ ಹೊಸ ...ನ್ನು ಕಟ್ಟಲಾರಂಭಿಸಿದೆವು. ನಾವು ...ಮನೆಯಲ್ಲಿದ್ದರೂ ಅಪ್ಪಾಜಿ ನಮ್ಮ ...ಲ್ಲ ಎಂಬ ಭಾವನೆ ನನ್ನನ್ನಾಗಲಿ, ಪತ್ನಿಯನ್ನಾಗಲಿ ಕಾಡಲೇ ಇಲ್ಲ. ನನ್ನ ಮನೆಯಿಂದ ಅಪ್ಪಾಜಿ ಮನೆಗೆ ಎರಡು ನಿಮಿಷಗಳ ಕಾಲ್ನಡಿಗೆ. ... ಹೋದರೆ ಒಂದೇ ಒಂದು ಪ್ರಯಾಣ!

...ಮನೆಯ ಒಂದು ಅದ್ಭುತ ಯಾವು ... ಅದರ ಮುಂದೆ ಗಣಪತಿಯ ...ವಿತ್ತು. ಅದರ ಹಿಂದಿನ ರಸ್ತೆಯಲ್ಲಿ ...ಯವರ ಮನೆ, ಹಾಗೆಯೇ ಪಕ್ಕದ ... ವರದಪ್ಪನವರ ಮನೆ ಇತ್ತು. ... ಮೂರು ದಿಕ್ಕಿನಿಂದಲೂ ಈ ... ನನ್ನ ರಕ್ಷಣೆಗೆ ಇದ್ದಂತಿದ್ದರು. ...ಮುನ್ನುಗ್ಗಲು ಇನ್ನೊಂದು ದಿಕ್ಕು ...ದೆನಿಸುತ್ತಿತ್ತು. ಇದರರ್ಥ ಇಷ್ಟೇ: ...ಮತ್ತು ವರದಪ್ಪನವರು ನನಗೆ ದೇವರ ...ಾಗಿದ್ದರು. ಅವರ ಆಶೀರ್ವಾದ ...ಮಾರ್ಗದರ್ಶನ ನನಗೆ ಇದ್ದುದರಿಂದ ...ಾವತ್ತೂ ತೊಂದರೆಯಾಗುವುದಿಲ್ಲ ...ಬಿಕೆ ನನಗಿತ್ತು.

...ರೊಂದಿಗೆ ದೈಹಿಕವಾಗಿಯೂ ... ನಮ್ಮ ಜೊತೆಯೇ ಇದ್ದರು. ...ಣೆಗೆ ಬೆಳಗ್ಗೆ ವಾಕಿಂಗ್ ಮುಗಿಸಿದ ...ಷ್ಟೋ ಬಾರಿ ಅಪ್ಪಾಜಿ ಬ್ರೇಕ್‌ಫಾಸ್ಟ್ ...ರವಾಗಿ ನಮ್ಮ ಮನೆಗೆ ಹೇಳದೇ ಕೇಳದೇ ...ಡುತ್ತಿದ್ದರು. ಅಂಥ ಸಂದರ್ಭಗಳಲ್ಲಿ ನನ್ನ ... ಬೆಳಗಿನ ನಿದ್ರೆಗಣ್ಣಿನಲ್ಲೇ ಆತುರಾತುರವಾಗಿ ...ಯಾರಿಸುತ್ತಿದ್ದಳು, ಮತ್ತು ಸ್ವಲ್ಪ ತಿಂಡಿಯನ್ನು ...ನಿಂದ ತರಿಸುತ್ತಿದ್ದಳು. ಯಾಕೆಂದರೆ ...ಗೆ ಇಡ್ಲಿ-ವಡೆ, ಉಪ್ಪಿಟ್ಟು, ಬ್ರೆಡ್ಡು ... ಸ್ವಲ್ಪ ಚಿತ್ರಾನ್ನ ಹೀಗೆ ಹಲವಾರು ಬಗೆಯ ... ಅಪ್ಪಾಜಿ ತಿನ್ನುತ್ತಿದ್ದರು. ಇವೆಲ್ಲವನ್ನು ...ಮೇಲೆ ಸಾಲುಸಾಲಾಗಿ ಜೋಡಿಸಿದನಂತರ, ...ಕ್ಕಂಬಕ್ಕಳ ಕಾಲು ಹಾಕಿ ಕೂತುಕೊಂಡು ... ಅವರು ಹೀಗೆ ತಿಂಡಿ ತಿನ್ನುವುದನ್ನು ನೋಡುವುದೇ ನಮಗೆ ಸಂತೋಷ ನೀಡುತ್ತಿತ್ತು.

ಇದಕ್ಕಿಂತ ಮುಖ್ಯವಾಗಿ ಅವರು ಮನೆಯ ಒಳಗಡೆ ಕಾಲಿಡುವಾಗ ಹೇಳುತ್ತಿದ್ದ ಡೈಲಾಗ್ ಇನ್ನೂ ನೆನಪಿದೆ. ಅವರು ತಲೆಗೆ ಮುಂಡಾಸ್ ಕಟ್ಟಿಕೊಂಡು ಮನೆಯೊಳಗಡೆ ಕಾಲಿಡುತ್ತಿದ್ದಂತೇ 'ಅವ್ವಾ.... ಏನವ್ವಾ.... ಏನ್ ತಿಂಡಿ ಮಾಡಿದ್ದೀಯಾ' ಎಂದು ಹೇಳುತ್ತಲೇ ಪ್ರವೇಶಿಸುತ್ತಿದ್ದರು. ಅವರು ನನ್ನ ಪತ್ನಿಯನ್ನು ಕೂಡಾ 'ಅವ್ವಾ' ಎಂದೇ ಕರೆಯುತ್ತಿದ್ದರು. ಅಂದರೆ ತಮ್ಮ ಹಳ್ಳಿಯ ಭಾಷೆಯ ಸೊಗಡನ್ನು ಅವರು ಬಿಟ್ಟಿರಲಿಲ್ಲ. ಅವರು ಆ ಭಾಷೆ ಮಾತನಾಡುತ್ತಿದ್ದದ್ದು ನಮಗೆಲ್ಲ ಇಷ್ಟವಾಗುತ್ತಿತ್ತು. ಅವರು ಹಾಗೆ ಮಾತನಾಡುತ್ತಿದ್ದುದರಿಂದಲೇ ನನಗೆ 'ಜೋಗಿ' ಸಿನಿಮಾದಲ್ಲಿ ಈ ಥರದ ಸಂಭಾಷಣೆಯನ್ನು ಹೇಳಲು ಒಂಚೂರೂ ಕಷ್ಟವಾಗಲಿಲ್ಲ. ನಾನು ಹಳ್ಳಿ ಭಾಷೆಯನ್ನು ಅಷ್ಟು ಲೀಲಾಜಾಲವಾಗಿ ಮಾತನಾಡುತ್ತಿದ್ದುದನ್ನು ನೋಡಿ ಮಂಡ್ಯಗಂಡು ಪ್ರೇಮ್‌ಗೆ ಆಶ್ಚರ್ಯವಾಗುತ್ತಿತ್ತು.

ತಿಂಡಿ ತಿನ್ನುವುದರಲ್ಲೂ ಒಂದು ಶಿಸ್ತನ್ನು ಅಪ್ಪಾಜಿ ಪಾಲಿಸುತ್ತಿದ್ದರು. ಅವರು ಗಡಿಬಿಡಿಯಾಗಿ ತಿಂಡಿ ತಿನ್ನುತ್ತಿರಲಿಲ್ಲ. ಪ್ರತಿ ತುತ್ತನ್ನೂ ಎಂಜಾಯ್ ಮಾಡುತ್ತಾ ಅದರ ರುಚಿಯನ್ನು ಅನುಭವಿಸುತ್ತಾ ತಿನ್ನುತ್ತಿದ್ದರು. 'ಇಷ್ಟು ಬಗೆಯ ಐಟಂಗಳನ್ನು ಯಾಕವ್ವಾ ಮಾಡಿದೆ..' ಎಂದು ಹೇಳುತ್ತಲೇ ಪ್ರತಿಯೊಂದು ತಿಂಡಿಯನ್ನು ಸ್ವಲ್ಪ ಸ್ವಲ್ಪ ತಿನ್ನುತ್ತಿದ್ದರು. "ಇಡ್ಲಿ ತಿಂದು ಉಪ್ಪಿಟ್ಟು ಬೇಡ ಅಂದರೆ ಉಪ್ಪಿಟ್ಟಿಗೆ ಬೇಸರ ಆಗುತ್ತೆ, ಉಪ್ಪಿಟ್ಟು ತಿಂದು ಆಮ್ಲೆಟ್ ಬಿಟ್ಟರೆ, ಆಮ್ಲೆಟ್‌ಗೆ ಬೇಸರವಾಗೋದಿಲ್ವೇ?" ಎನ್ನುತ್ತಾ ಒಂದು ಇಡ್ಲಿ, ಅರ್ಧ ವಡೆ, ಒಂದಿಷ್ಟು ಉಪ್ಪಿಟ್ಟು, ಒಂದೆರಡು ಬ್ರೆಡ್ ಟೋಸ್ಟು, ಸ್ವಲ್ಪ ಆಮ್ಲೆಟ್... ಹೀಗೆ ಎಲ್ಲದರ ರುಚಿಯನ್ನೂ ನೋಡುತ್ತಿದ್ದರು.

ಅವರು ಅರ್ಧ ವಡೆಯನ್ನು ಕೈಗೆತ್ತಿಕೊಂಡು ಎರಡು ಕೈಯಿಂದ ಅದನ್ನು ಅದುಮಿ ಅದರಿಂದ ಎಣ್ಣೆಯನ್ನು ಹೊರತೆಗೆಯುತ್ತಿದ್ದ ರೀತಿ ನನ್ನ ಕಣ್ಣೆದುರಿಗೆ ಈಗಲೂ ಇದೆ. ಎಷ್ಟೋ ಬಾರಿ ಈ ದೃಶ್ಯಗಳನ್ನೆಲ್ಲಾ ವಿಡಿಯೋದಲ್ಲಿ ಚಿತ್ರೀಕರಿಸಬೇಕು ಅಂದುಕೊಳ್ಳುತ್ತಿದ್ದೆ. ಆದರೆ ಅದನ್ನು ಹೀಗೆ ಸರೆಹಿಡಿಯದೆ ಇದ್ದುದರ ಬಗ್ಗೆ ನನಗೀಗ ಬೇಸರವಿದೆ. ಆ ದೃಶ್ಯಗಳನ್ನು ಕುಟುಂಬದವರಾಗಿ ನಾವು ನೋಡುವುದಕ್ಕಿಂತಲೂ ಜನರಿಗೆ ಅವುಗಳನ್ನು ತೋರಿಸಿದ್ದರೆ ಅವರು ಆನಂದಿಸುತ್ತಿದ್ದರು.

ಹೀಗೆ ಯಾವುದೇ ತಿಂಡಿಗೂ ಬೇಸರವಾಗದಂತೆ ಅಪ್ಪಾಜಿ ತಿನ್ನುತ್ತಿದ್ದುದ್ದನ್ನು ನೋಡಿದಾಗ "ಇವರು ಜೀವವಿಲ್ಲದ ವಸ್ತುಗಳನ್ನೂ ಎಷ್ಟೋಂದು ಪ್ರೀತಿಸುತ್ತಾರೆ" ಅನ್ನಿಸುತ್ತಿತ್ತು. ಆ ಥರದ ವಿಚಿತ್ರವಾದ ಮುಗ್ಧ ಮನಸ್ಸು ನನ್ನ ಅಪ್ಪಾಜಿಯದು. ಒಂದು ನಿರ್ಜೀವ ವಸ್ತುವಿನ ಜೊತೆ ಸಂಬಂಧವನ್ನೇ ಬೆಳೆಸುವ ಅವರ ಶೈಲಿ ನನ್ನನ್ನು ದಂಗಾಗಿಸುತ್ತಿತ್ತು. ನನ್ನ ಪ್ರಕಾರ ಇದೊಂದು ರೀತಿಯ ಡಿವೈನ್ ರಿಲೇಷನ್‌ಶಿಪ್. ಅಂತಹ ಸಂಬಂಧವನ್ನು ನಾನು ಕೂಡಾ ರೂಪಿಸಿಕೊಳ್ಳಬೇಕೆಂದು ಎಷ್ಟೋ ಬಾರಿ ಪ್ರಯತ್ನಿಸಿ ವಿಫಲನಾಗಿದ್ದೇನೆ. ನಾವು ಮಾಡಿದರೆ ಅದು ಕೃತಕವೆನ್ನಿಸುತ್ತದೆ.

"ನೀನ್ಯಾಕೋ ಏನೂ ತಿನ್ನೋದಿಲ್ಲ? ಬೆಳಗಿನ ಬ್ರೇಕ್‌ಫಾಸ್ಟ್ ಚೆನ್ನಾಗಿ ತಿನ್ನಬೇಕು. ನೀನು ಇಷ್ಟೆಲ್ಲಾ ದುಡಿಯುವುದು, ಸಂಪಾದಿಸುವುದು ತಿನ್ನೋಕೋಸ್ಕರ ತಾನೇ? ಯಾವುದೇ ಕಾರಣಕ್ಕೂ ಡಯಟಿಂಗ್ ಮಾಡಬೇಡ. ನನ್ನ ಥರ ಚೆನ್ನಾಗಿ ತಿನ್ನುವುದನ್ನು ಕಲಿತುಕೋ" ಎಂದು ಅಪ್ಪಾಜಿ ಅನೇಕ ಬಾರಿ ನನಗೆ ಹೇಳಿದ್ದುಂಟು. ಆದರೆ ನಾನು ಮೊದಲೇ ಹೇಳಿದಂತೆ ಈ ವಿಷಯದಲ್ಲಿ ನಾನು ಫೇಲ್. ಒಂದೆರಡು ನಿಮಿಷಗಳಲ್ಲೇ ನಾನು ಬ್ರೇಕ್‌ಫಾಸ್ಟ್ ಮುಗಿಸಿಬಿಡುತ್ತೇನೆ.


ನನ್ನ ಅಪ್ಪಾಜಿ ಎಷ್ಟು ಮುಗ್ಧ ಎನ್ನುವುದಕ್ಕೆ ತಿಂಡಿಗಳ ಜೊತೆಗಿನ ಅವರ ಸಂಬಂಧ ಮಾತ್ರ ಉದಾಹರಣೆಯಲ್ಲ. ಎಷ್ಟೋ ಬಾರಿ ಅವರು ಸ್ನಾನಕ್ಕೆಂದು ಹೊರಟುನಿಂತಾಗ ಹೇಳುತ್ತಿದ್ದ ಮಾತುಗಳು ನನಗಿನ್ನೂ ನೆನಪಿದೆ. ""ನಿತ್ಯವೂ ಸ್ನಾನ ಮಾಡಲೇಬೇಕಾ?" ಎನ್ನುತ್ತಾ ಒಂದು ಲುಕ್ ಕೊಡುತ್ತಿದ್ದರು. ಅವರ ಪ್ರಶ್ನೆ ಕೇಳಿ ನಾವೆಲ್ಲ ನಕ್ಕುಬಿಡುತ್ತಿದ್ದೆವು. ಆಗ ತಮ್ಮ ಮಾತನ್ನು ಮುಂದುವರೆಸಿ "ನಾನ್ಯಾಕೆ ದಿನಾ ಸ್ನಾನ ಮಾಡಲಿ? ನಾನು ಸ್ನಾನ ಮಾಡಿದರೆ ಈ ಶರ್ಟು ಮತ್ತು ಪಂಚೆಗೆ ತೊಂದರೆ. ಅದನ್ನು ನೀವು ತೆಗೆದು ಒಗೆಯಲು ಹಾಕುತ್ತೀರಾ. ನಮ್ಮ ಕೆಲಸದವಳು ಅದನ್ನು ಕಲ್ಲಿಗೆ ಗಟ್ಟಿಯಾಗಿ ಹೊಡೆಯುತ್ತಾಳೆ. ನನ್ನಿಂದಾಗಿ ನನ್ನ ಈ ಬಟ್ಟೆಗೆ ಯಾಕೆ ನೋವಾಗಬೇಕು?" ಎಂದು ಹೇಳುತ್ತಾ ಸ್ನಾನ ಮಾಡದೇ ಕುಳಿತುಬಿಡುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಅವರ ಮನಸ್ಸು ಮಗುವಿನ ಥರ ವರ್ತಿಸುತ್ತಿತ್ತು ಎಂದು ನಾನು ವಿಶೇಷವಾಗಿ ಹೇಳುವ ಅಗತ್ಯವೇ ಇಲ್ಲ. ನನ್ನ ಅಪ್ಪಾಜಿ ಈ ಥರ ವರ್ತಿಸಿದಾಗಲೆಲ್ಲ ನನ್ನ ಮನಸ್ಸು ಗಿಡ, ಮರ ನಮ್ಮ ಪರಿಸರದ ಕಡೆಗೆ ವಾಲುತ್ತಿತ್ತು. ನಮ್ಮ ಸ್ವಾರ್ಥಕ್ಕಾಗಿ ನಾವು ನಮ್ಮ ಸುತ್ತಲಿನ ಪ್ರಪಂಚವನ್ನು ಹೇಗೆ ನಾಶ ಮಾಡುತ್ತಿದ್ದೇವೆ ಅನ್ನಿಸುತ್ತಿತ್ತು.

ಅಪ್ಪಾಜಿ ಜಾಸ್ತಿ ಓದಿದವರಲ್ಲ, ಆದರೆ ಎಷ್ಟೋ ಜನ ಓದಿದವರಿಗಿಂತಲೂ ಹೆಚ್ಚು ಅವರು ಈ ಪ್ರಪಂಚದಲ್ಲಿರುವ ಜೀವ ಮತ್ತು ನಿರ್ಜೀವ ವಸ್ತುಗಳ ಬಗ್ಗೆ ಕಾಳಜಿಯನ್ನು ಪ್ರದರ್ಶಿಸುತ್ತಿದ್ದರು. ಒಬ್ಬ ತಂದೆ-ತಾಯಿ ಮನೆಯಲ್ಲಿ ವರ್ತಿಸುವುದರ ಮೇಲೆ ಅವರ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬುದಕ್ಕೆ ನನ್ನ ಅಪ್ಪಾಜಿಯೇ ಉತ್ತಮ ನಿದರ್ಶನ. ನಾನು ಶಾಲೆ-ಕಾಲೇಜುಗಳಲ್ಲಿ ಕಲಿತದ್ದಕ್ಕಿಂತಲೂ ಹೆಚ್ಚು ಜೀವನದ ಮೌಲ್ಯಗಳನ್ನು ಅಪ್ಪಾಜಿಯಿಂದ ಕಲಿತಿದ್ದೇನೆ. ಅವರು ಯಾವತ್ತೂ ನಮಗೆ ಹಾಗೆ ಮಾಡಿ... ಹೀಗೆ ಮಾಡಿ ಎಂದು ಉಪದೇಶ ನೀಡಿದವರೇ ಅಲ್ಲ. ಅವರನ್ನು ನೋಡಿ ಅನುಕರಿಸುವುದೇ ನಮಗೆ ಪಾಠವಾಗಿತ್ತು.


ಅಪ್ಪಾಜಿ ಬಗೆಗಿನ ಇಂತಹ ನೂರೆಂಟು ವಿಷಯಗಳನ್ನು ನಾನು ನಿಮ್ಮ ಮುಂದೆ ಇಡಲೇಬೇಕು. ಅಪ್ಪಾಜಿಯ ಜೀವನದ ಮೌಲ್ಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಈ ಸೌಭಾಗ್ಯವನ್ನು ನಾನೇಕೆ ಕಳೆದುಕೊಳ್ಳಲಿ. ಇನ್ನು ಮುಂದೆಯೂ ಅಪ್ಪಾಜಿ ವಿಷಯವನ್ನು ನಿಮ್ಮ ಮುಂದಿಡುತ್ತೇನೆ........

(ಮುಂದುವರೆಯುವುದು)

ಒಬ್ಬ ತಂದೆ-ತಾಯಿ ಮನೆಯಲ್ಲಿ ವರ್ತಿಸುವುದರ ಮೇಲೆ ಅವರ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬುದಕ್ಕೆ ನನ್ನ ಅಪ್ಪಾಜಿಯೇ ಉತ್ತಮ ನಿದರ್ಶನ. ನಾನು ಶಾಲೆ-ಕಾಲೇಜುಗಳಲ್ಲಿ ಕಲಿತದ್ದಕ್ಕಿಂತಲೂ ಹೆಚ್ಚು ಜೀವನದ ಮೌಲ್ಯಗಳನ್ನು ಅಪ್ಪಾಜಿಯಿಂದ ಕಲಿತಿದ್ದೇನೆ. ಅವರನ್ನು ನೋಡಿ ಅನುಕರಿಸುವುದೇ ನಮಗೆ ಪಾಠವಾಗಿತ್ತು.



ಗುಜರಾತಿನ ಕತೆ




ಗುಜರಾತಿನಲ್ಲಿ ಅಲ್ಪಸಂಖ್ಯಾತರ ನರಮೇಧ ನಡೆದು ನಾಲ್ಕು ವರ್ಷಗಳ ನಂತರ ಆ ಗಲಭೆಗಳನ್ನು ಕುರಿತು 'ಪರ್ಜಾನಿಯಾ' ಎಂಬ ಇಂಗ್ಲಿಷ್ ಚಿತ್ರ ಇದೀಗ ಬಿಡುಗಡೆಯಾಗಿದೆ. ನಿಜ ಜೀವನದ ಒಂದು ಘಟನೆಯನ್ನಾಧರಿಸಿ ತಯಾರಿಸಲಾಗಿರುವ ಈ ಚಿತ್ರದಲ್ಲಿ ಹೇಗೆ ಕೋಮು ಗಲಭೆಗಳಲ್ಲಿ ...ರು ಸಾವು, ನೋವು, ನಷ್ಟಗಳನ್ನು ಅನುಭವಿಸುತ್ತಾರೆ ಎಂಬುದನ್ನು ಮನಮುಟ್ಟುವಂತೆ ...ಲಾಗಿದೆ.

...ದ್ಧ ನಟ ನಾಸಿರುದ್ದೀನ್ ಶಾ ಮತ್ತು ..., ಮರು ಪ್ರವೇಶ ಮಾಡುತ್ತಿರುವ ನಟಿ ...ರುವ ಈ ಚಿತ್ರ ಜನರ ಪ್ರಶ್ನೆಯನ್ನು ... ಸಫಲವಾಗುತ್ತಿದೆ ಎಂಬುದರ ಬಗ್ಗೆ ...ಗಳಿಲ್ಲ.



ಎಂಟು ಕೋಟಿಯಲ್ಲಿ ಏಳು ವಂಡರ್ಸ್!



'ಪೂಜಾರಿ' ಚಿತ್ರದ ನಿರ್ದೇಶಕ ಶರಣ್ 'ಸೆವೆನ್ ವಂಡರ್ಸ್ ಆಫ್ ದಿ ವರ್ಲ್ಡ್' ಎಂಬ ಹೊಸ ಚಿತ್ರವನ್ನು ಎಂಟು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಹೊರಟಿದ್ದಾರೆ. ಹಿಂದೂ-ಮುಸ್ಲಿಂ ಪ್ರೇಮವಿವಾಹದ ಈ ಕತೆಯನ್ನು ಜಗತ್ತಿನ ಏಳು ಅದ್ಭುತ ಸ್ಥಳಗಳಲ್ಲಿ ಚಿತ್ರೀಕರಿಸುತ್ತಾರಂತೆ. ಆದರೆ ಚಿತ್ರದ ಕ್ಲೈಮ್ಯಾಕ್ಸ್ ತಾಜ್ ಮಹಲ್ ಅಂಗಳದಲ್ಲಿ ನಡೆಯುತ್ತದಂತೆ. ಇಷ್ಟು ಹೇಳಿದ ಮೇಲೆ ನಿಮಗೆ ನಾಗ್ತಿಹಳ್ಳಿ ನಿರ್ದೇಶನದ 'ಅಮೃತಧಾರೆ' ಚಿತ್ರ ನೆನಪಾದರೆ ಅದು ನಮ್ಮ ತಪ್ಪಲ್ಲ.

ವಾಸ್ತವವಾಗಿ ಇದು ರಮೇಶ್ ಅರವಿಂದ್ ನಾಗ್ತಿಹಳ್ಳಿಗೆ ಹೇಳಿದ್ದ ಕಥೆಯಂತೆ. ಆದರೆ ಬಜೆಟ್ ಸಮಸ್ಯೆಯಿಂದಾಗಿ ಆರು ಅದ್ಭುತಗಳಲ್ಲಿ ಚಿತ್ರೀಕರಣ ಮಾಡದೇ ಬರೀ ತಾಜ್ ಮಹಲ್ಲಿನಲ್ಲೇ ಚಿತ್ರ ಮುಗಿಸಿದ್ದರಂತೆ. ಈಗ ನಾಗ್ತಿ ಮಾಡಲಾಗದಿದ್ದನ್ನು ಶರಣ್ ಮಾಡಲು ಹೊರಟಿದ್ದಾರೆ.



ಎಂಟು ಕೋಟಿ ಚೆಲ್ಲಿ ಕನ್ನಡ ಸಿನಿಮಾ ಮಾಡಲು ಹೊರಟಿರುವವರ ಧೈರ್ಯವನ್ನು ಮೆಚ್ಚಬೇಕೋ ಅಥವಾ ಅವರಿಗೆ ಬುದ್ಧಿ ಹೇಳಬೇಕೋ ಗೊತ್ತಾಗುತ್ತಿಲ್ಲ!




ರಮೇಶ್‌ರಿಂದ ಮತ್ತೊಂದು 'ಕಮಾಲ್?'

'ರಾಮ, ಶಾಮ, ಭಾಮ' ಚಿತ್ರದ ಮೂಲಕ ನಿರ್ದೇಶಕರಾದ ನಟ ರಮೇಶ್ ಅರವಿಂದ್ ಈಗ ಎರಡನೆ ಚಿತ್ರ ನಿರ್ದೇಶಿಸುವ ತಯಾರಿಯಲ್ಲಿದ್ದಾರೆ. ನಾಲ್ಕು ಜನ ನಾಯಕ ನಟರು ಈ ಚಿತ್ರದಲ್ಲಿದ್ದು ಸದ್ಯದಲ್ಲಿಯೇ ಸೆಟ್ಟೇರುವ ಸುದ್ದಿ ಗಾಂಧಿನಗರದಿಂದ ಕೇಳಿಬರುತ್ತಿದೆ. ಆದರೆ ರಮೇಶ್ ಮಾತ್ರ ಈ ಬಗ್ಗೆ ಇನ್ನೂ ತುಟಿಪಿಟಿಕ್ ಎಂದಿಲ್ಲ.

ರಮೇಶ್‌ಗೆ ಹೀರೋ ಆಗಿ ಸಾತ್ ನೀಡಲು ಮೋಹನ್ ಮತ್ತು ಅನಿರುದ್ಧ್ ಈಗಾಗಲೇ ಆಯ್ಕೆಯಾಗಿದ್ದಾರೆ. ಹಂಸಲೇಖಾ ಸಂಗೀತ ಸಂಯೋಜಿಸಿದ್ದಾರೆ. ಮೊದಲ ಚಿತ್ರದಲ್ಲಿ ಕಮಲಹಾಸನ್‌ರನ್ನು ಹಾಕಿ ಪ್ರೇಕ್ಷಕರನ್ನು ಕಮಾಲ್ ಮಾಡಿದ್ದ ರಮೇಶ್ ಈ ಬಾರಿಯೂ ಸಕ್ಸಸ್ ಆಗುತ್ತಾರೆಯೇ ನೋಡೋಣ.

'ಸ್ಕೂಲ್ ಮಾಸ್ಟರ್'ರೋ, 'ಭಾಗ್‌ಬನ್'ನೋ?





ವಿಷ್ಣು ಮತ್ತು ದರ್ಶನ್ ಜೊತೆಯಾಗಿ ನಟಿಸಲು ಒಪ್ಪಿಕೊಂಡಿದ್ದಾರೆ. ಇವರನ್ನು ಮೊದಲ ಬಾರಿಗೆ ಒಟ್ಟಿಗೆ ಸೇರಿಸಿರುವುದು ಜೈಜಗದೀಶ್ ಮತ್ತು ವಿಜಯಲಕ್ಷ್ಮಿ ಸಿಂಗ್.

ಇವರಿಬ್ಬರು ನಟಿಸುತ್ತಿರುವ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲವಾದರೂ ಅದು ಅಮಿತಾಬ್ ಬಚ್ಚನ್ ಮತ್ತು ಹೇಮಾ ಮಾಲಿನಿ ನಟಿಸಿದ 'ಭಾಗ್‌ಬನ್' ಚಿತ್ರದ ರೀಮೇಕ್ ಎಂಬ ಸುದ್ದಿ ಇದೆ.

ವಿಚಿತ್ರವೆಂದರೆ, 'ಭಾಗ್‌ಬನ್' ಚಿತ್ರ ನಾಲ್ಕು ದಶಕಗಳ ಹಿಂದೆ ಪಂತುಲುರವರು ಮಾಡಿದ್ದ 'ಸ್ಕೂಲ್ ಮಾಸ್ಟರ್' ಎಂಬ ಕನ್ನಡ ಚಿತ್ರದ ರೀಮೇಕ್. ಈಗ ಅದನ್ನೇ ಹಿಂದಿಯವರಿಂದ ಕಾಪಿ ಮಾಡಿ ಕನ್ನಡಿಗರಿಗೆ ಬಡಿಸಲು ಈ ನಾಲ್ಕು ಜನರು ಹೊರಟಿದ್ದಾರೆ. ಇದಕ್ಕಿಂತ ದುರಂತ ಇನ್ನೊಂದಿರಲು ಸಾಧ್ಯವಾ?

ಆದರೆ ಗಾಂಧಿನಗರ ಹೇಗೆ ಲೆಕ್ಕ ಹಾಕುತ್ತದೆ ಎಂದರೆ, ವಿಷ್ಣು ಮತ್ತು ದರ್ಶನ್ ಕಾಂಬಿನೇಷನ್‌ನಿಂದ ಚಿತ್ರ ಬಾಕ್ಸ್ ಆಫೀಸಿನಲ್ಲಿ ಹಣ ಗಳಿಸುತ್ತದೆ ಎಂಬುದು ಅವರ ತರ್ಕ. ಆದರೆ, ಇತ್ತೀಚೆಗೆ ಈ ಇಬ್ಬರು ನಾಯಕ ನಟರ ಸಿನಿಮಾಗಳು ತುಂಬಾ ಯಶಸ್ಸನ್ನೇನು ಕಂಡಿಲ್ಲ ಎಂಬುದು ವಾಸ್ತವ.

ಏನೇ ಆಗಲಿ, ಮನೆಯ ನಾಯಕ ಆದಿತ್ಯನನ್ನು ಹಾಕಿ ಕೋಟ್ಯಾಂತರ ರೂಪಾಯಿ ನಷ್ಟಮಾಡಿಕೊಂಡ ಜೈಜಗದೀಶ್‌ಗೆ ಈ ಚಿತ್ರ ಲಾಭ ತಂದುಕೊಡುವಂತಾಗಲಿ.

ಕಂಡಕ್ಟರ್‌ಗಳ ಕಾಲ?



'ವಿಕದಂತ' ಚಿತ್ರದಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಕಂಡಕ್ಟರ್ ಪಾತ್ರದಲ್ಲಿ ನಟಿಸಿದ್ದಾರೆ. ಅಂದಹಾಗೆ 'ಗಂಡನ ಮನೆ' ಎಂಬ ಚಿತ್ರದಲ್ಲೂ ಶಿವರಾಜ್ ಕುಮಾರ್ ಕಂಡಕ್ಟರ್ ಪಾತ್ರದಲ್ಲಿ ನಟಿಸಿದ್ದಾರಂತೆ.

ಸಾಹಸಸಿಂಹ ಮತ್ತು ಹ್ಯಾಟ್ರಿಕ್ ಹೀರೋ ಇವರಿಬ್ಬರೂ ಒಂದೇ ಸಮಯದಲ್ಲಿ ಕಂಡಕ್ಟರ್ ಪಾತ್ರಗಳಲ್ಲಿ ನಟಿಸಿರುವುದನ್ನು ನೋಡಿ ಕನ್ನಡ ಚಿತ್ರರಂಗದಲ್ಲಿ ಕಂಡಕ್ಟರ್‌ಗಳ ಕಾಲ ಪ್ರಾರಂಭವಾಗಿದೆ... ಅನುಮಾನ ಶುರುವಾಗುತ್ತದೆ.

ಒಂದು ವಿಚಿತ್ರ ನೋಡಿ. ರಜನಿಕಾಂತ್ ಕಂಡಕ್ಟರ್ ... ಸೂಪರ್ ಸ್ಟಾರ್ ಪದವಿಗೇರಿದರು. ಕಮಲಹಾಸನ್ ಕೂಡ ... ಜೀವನದ ಆರಂಭದಲ್ಲಿ ಕಂಡಕ್ಟರ್ ಪಾತ್ರದಲ್ಲಿ ನಟಿಸಿದ್ದರು. ಆ... ಮತ್ತು ಶಿವಣ್ಣ ಸ್ಟಾರ್‌ಗಳಾಗಿ ಎಸ್ಟಾಬ್ಲಿಷ್ ಆದ ನಂತರ ... ಗಳಾಗುತ್ತಿದ್ದಾರೆ.

ಮ್ಯಾಕ್ಸಿಮಮ್ ಮಲ್ಲಿಕಾ



ಮಲ್ಲಿಕಾ ಶೆರಾವತ್‌ಳಿಗೂ ವಿವಾದಗಳಿಗೂ ಗಳಸ್ಯ-ಕಂಠಸ್ಯ ಸಂಬಂಧ! ಹೊಸ ವರ್ಷ 2007 ಶುರುವಾಗಿ ಇನ್ನೂ ಒಂದು ತಿಂಗಳೂ ಆಗಿಲ್ಲ, ಆದರೆ ಈ ಅಲ್ಪ ಅವಧಿಯಲ್ಲೇ 'ಗುರು' ಚಿತ್ರದಲ್ಲಿ ಮೋಹಕವಾಗಿ ನೃತ್ಯ ಮಾಡಿದ್ದ, ಹಾಗೆಯೇ ನ್ಯೂ ಇಯರ್ ದಿನ ಅಶ್ಲೀಲವಾಗಿ ಕುಣಿದಳೆಂದು ಆರೋಪ ಹೊತ್ತಿದ್ದ ಮಲ್ಲಿಕಾ ಶೆರಾವತ್ ಎಂಬ ಸೆಕ್ಸಿ ಬೇಬಿ ಈಗ ಮತ್ತೊಮ್ಮೆ ಬಾಂಬ್ ಒಂದನ್ನು ಸ್ಫೋಟಿಸಿದ್ದಾಳೆ. 'ಮ್ಯಾಕ್ಸಿಮ್' ಎಂಬ ಪತ್ರಿಕೆಯ ಮುಖಪುಟದಲ್ಲಿ ಕನಿಷ್ಠ ಬಟ್ಟೆ ತೊಟ್ಟಿರುವ ಮಲ್ಲಿಕಾಳ ... ಪ್ರಕಟಿಸಿ, ಅದಕ್ಕೆ 'ಮ್ಯಾಕ್ಸಿಮಮ್ ಮಲ್ಲಿಕಾ, ಮಿನಿಮಮ್ ಬ... ತಲೆಬರಹವನ್ನು ಕೊಡಲಾಗಿದೆ. ಮುಖಪುಟದ ಚಿತ್ರ... ಮಜಬೂತಾಗಿರುವಾಗ ಇನ್ನು ಒಳಪುಟಗಳಲ್ಲಿನ ಫೋ... ಹೇಗಿರಬಹುದೆಂದು ಪಡ್ಡೆಗಳು ಸಾಲುನಿಂತು ಖರೀದಿಸುತ್ತಿ...



ಕನ್ನಡ ಚಿತ್ರರಂಗದಲ್ಲಿ ಕಾಮಿಡಿ ನಟರ ಕೊರತೆ ಎದುರಾಗುವ ಲಕ್ಷಣಗಳು ಕಾಣಿಸುತ್ತಿವೆ.

'ಮುಂಗಾರು ಮಳೆ' ಸೂಪರ್‌ಹಿಟ್ ಆದ ನಂತರ 'ಕಾಮಿಡಿ' ಗಣೇಶ್ ಫುಲ್ ಟೈಂ ಹೀರೋ ಆಗಿ ನಾಲ್ಕೈದು ಚಿತ್ರಗಳಿಗೆ ಬುಕ್ ಆಗಿದ್ದಾರೆ. ಇದನ್ನು ನೋಡಿ ನವರಸನಾಯಕ ಜಗ್ಗೇಶರ ತಮ್ಮ ಕಾಮಿಡಿಯನ್ ಕೋಮಲ್ ಹೀರೋ ಆಗಲು ಹೊರಟಿದ್ದಾರೆ. "ಗಣೇಶ್ ಸಕ್ಸಸ್ ಆದರೆ ನಾನ್ಯಾಕಾಗಬಾರದು?" ಎಂಬುದು ಕೋಮಲ್‌ರವರ ತರ್ಕ.

ಅಂದಹಾಗೆ ಈ ಹಿಂದೆ ಕೋಮಲ್ 'ಮಿಲಿಟರಿ ಮಾವ' ಎಂಬ ಚಿತ್ರದ ಮುಖಾಂತರ ನಾಯಕನಟನಾಗಲು ಪ್ರಯತ್ನಿಸಿದ್ದರು. ಆಗ ಅವರ ಸಹೋದರ ಜಗ್ಗೇಶ್ ಆ ಚಿತ್ರದಲ್ಲಿ ಅತಿಥಿ ನಟರಾಗಿ ನಟಿಸಿ ತಮ್ಮನಿಗೆ ಸಪೋರ್ಟ್ ಮಾಡಿದ್ದರು. ಆದರೆ ಅವರ ಬ್ಯಾಡ್ ಲಕ್, ಪ್ರೇಕ್ಷಕ ಮಾತ್ರ ಸಪೋರ್ಟ್ ಮಾಡಿರಲಿಲ್ಲ.

'ತೆನಾಲಿರಾಮ' ಮತ್ತು 'ಹನಿಮೂನ್ ಎಕ್ಸ್‌ಪ್ರೆಸ್' ಚಿತ್ರ ನಿರ್ಮಿಸಿದ ಎಸ್.ವಿ. ಬಾಬು ಕೋಮಲ್‌ಗಾಗಿ ಚಿತ್ರ ನಿರ್ಮಿಸಲು ಮುಂದಾಗಿದ್ದಾರೆ. ಕೋಮಲ್ ತನ್ನ ದ್ವಿತೀಯ ಪ್ರಯತ್ನದಲ್ಲಿ ಹೀರೋ ಆಗುತ್ತಾರೆಯೇ? ಸ್ವತಃ ಕೋಮಲ್‌ಗೇ ಉತ್ತರಿಸಲಾಗದ ಪ್ರಶ್ನೆ ಇದಾಗಿದೆ.

ಕೋಕಿಲಾ ಎಂಬ 'ಡೇಂಜರ್'!



ಮೊನ್ನೆ ಎ.ಆರ್. ರೆಹಮಾನ್ ಮೊದಲ ಬಾರಿಗೆ ಕನ್ನಡ ಚಿತ್ರವೊಂದಕ್ಕೆ ಸಂಗೀತ ನಿರ್ದೇಶನ ನೀಡಿದ 'ಸಜನಿ' ಚಿತ್ರದ ಹಾಡುಗಳನ್ನು ಕೇಳಿದಾಗ ಸಾಧು ಕೋಕಿಲಾ ಎಂಬ ಕನ್ನಡದ 'ಕ್ರಿಯಾಶೀಲ' ಸಂಗೀತ ನಿರ್ದೇಶಕನ ನಿಜವಾದ ಬಣ್ಣ ಬಯಲಾಯಿತು.

ಈ ಚಿತ್ರದ ಒಂದು ಹಾಡು 'ರಕ್ತಕಣ್ಣೀರು' ಚಿತ್ರದ 'ಡೇಂಜರ್' ಹಾಡಿನ ಟ್ಯೂನ್‌ನ ಮಾದರಿಯಲ್ಲಿದೆ. ಇದರರ್ಥ ವಿಶ್ವವಿಖ್ಯಾತಿಯ ಎ.ಆರ್. ರೆಹಮಾನ್ ಸಾಧು ಕೋಕಿಲಾ ಹಾಡನ್ನು ಕದ್ದಿದ್ದಾರೆಂದಲ್ಲ, ವಾಸ್ತವವಾಗಿ ರೆಹಮಾನ್‌ರವರ ಸಂಗೀತವನ್ನು ಕೋಕಿಲಾ ಕದ್ದು ಮುಚ್ಚಿ ಕನ್ನಡಕ್ಕೆ ಇಳಿಸಿದ್ದಾರೆ.

ಆದರೆ 'ಸಜನಿ' ಚಿತ್ರದವರಿಗೆ ಈ ವಿಷಯವೇ ಗೊತ್ತಿಲ್ಲ. ಏಕೆಂದರೆ, ಅದರ ನಿರ್ಮಾಪಕ ಮಾಂಡ್ರೆ, ಸಂಗೀತ ನಿರ್ದೇಶಕ ರೆಹಮಾನ್, ನಾಯಕಿ ಶರ್ಮಿಳಾ... ಇವರೆಲ್ಲ ಹೊರಗಿನವರು ಮಾತ್ರವಲ್ಲ, ಅವರಿಗೆ ಕನ್ನಡ ಚಿತ್ರರಂಗದ ಗಂಧ ಗಾಳಿಯಾಗಲೀ ಇಲ್ಲಿನ ಕಪಟತನವಾಗಲೀ ಗೊತ್ತಿಲ್ಲ.


ಆದ್ದರಿಂದ ಅವರ ಚಿತ್ರದ ಹಾಡೊಂದು ಈಗಾಗಲೇ ಕನ್ನಡದಲ್ಲಿ ಕಾಪಿ ಆಗಿರುವುದು, ಅದು ಜನಪ್ರಿಯ ಕೂಡ ಆಗಿರುವುದು ಅವರ ಗಮನಕ್ಕೇ ಬಂದಿಲ್ಲ. ಹೀಗಾಗಿ ರೆಹಮಾನ್‌ರವರ ಈ ಹಾಡನ್ನು ಕೇಳಿದ ಕನ್ನಡಿಗರು "ಅಯ್ಯೋ, ಈತ ನಮ್ಮ ಸಾಧು ಕೋಕಿಲಾನ ಟ್ಯೂನ್ ಕದ್ದಿದಾನೆ" ಎಂದು ಭಾವಿಸಿದರೆ ಅಚ್ಚರಿ ಏನಿಲ್ಲ!

ರುಚಿ ಕಳೆದುಕೊಂಡ ಉಪ್ಪಿ



ಉಪೇಂದ್ರರ ವೃತ್ತಿಜೀವನ ಕವಲುದಾರಿಯಲ್ಲಿದೆ. ಈಗ ಕನ್ನಡ ಚಿತ್ರರಂಗಕ್ಕೆ ದಾಳಿ ಇಟ್ಟಿರುವ ಯುವ ನಟರಾದ ಗಣೇಶ್, ಪ್ರೇಮ್, ಪ್ರಜ್ವಲ್, ಆದಿ.... ಮೊದಲಾದವರ ಪ್ರವಾಹದಲ್ಲಿ ಉಪ್ಪಿ ಕೊಚ್ಚಿಹೋಗುವ ಎಲ್ಲ ಸಾಧ್ಯತೆಗಳಿವೆ. ಸದ್ಯಕ್ಕೆ 'ಮಸ್ತಿ' ಮತ್ತು 'ಪರೋಡಿ' ಎಂಬ ಎರಡು ಚಿತ್ರಗಳನ್ನು ಬಿಟ್ಟರೆ ಉಪ್ಪಿ ಕೈಯಲ್ಲಿ ಬೇರೆ ಯಾವ ಚಿತ್ರಗಳೂ ಇಲ್ಲ. ಈ ಮಧ್ಯೆ ಉಪ್ಪಿಯ ಅದೇ ಶೈಲಿಯ ಡೈಲಾಗ್‌ಗಳು ಪ್ರೇಕ್ಷಕರಿಗೆ ವಾಕರಿಕೆ ತರಿಸಿದೆಯಲ್ಲದೆ, ಇವತ್ತಿಗೂ ಉಪ್ಪಿಯ ಸಿನಿಮಾಗಳಿಂದ ಮಹಿಳೆಯರು ಬಲು ದೂರ. ಆದರೆ ಕೆಳಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂದು ವಾದಿಸುವ ಉಪ್ಪಿ ಈ ಬಾರಿಯೂ ಯಾವುದೋ ಗಿಮಿಕ್ ಮಾಡಿ ಎದ್ದುನಿಂತರೆ ಆಶ್ಚರ್ಯವಿಲ್ಲ.

'ಓಂ' ಚಿತ್ರದ ಐದನೇ ಜೆರ...



ಈ ವಾರ ಬಿಡುಗಡೆ ಆಗಿರುವ, ಆದಿ ಲೋಕೇಶ್ ನಾಯಕ ನಟನಾಗಿ ಪ್ರಥಮ ಬಾರಿಗೆ ನಟಿಸಿರುವ 'ಪೂಜಾರಿ' ಚಿತ್ರ 'ಓಂ' ಸಿನಿಮಾದ ಐದನೆಯ ಜೆರಾಕ್ಸ್ ಕಾಪಿ ಎಂದರೆ ತಪ್ಪಾಗಲಾರದು.

ಇದರ ಹೆಸರೇ ಸೂಚಿಸುವಂತೆ ಇದರಲ್ಲಿ ಆದಿ ಒಬ್ಬ ಪೂಜಾರಿ. ಆತನ ತಂದೆ ಮತ್ತು ತಂಗಿಯನ್ನು ದುಷ್ಕರ್ಮಿಗಳು ಕೊಂದ ನಂತರ ದೊಡ್ಡ ರೌಡಿಯಾಗುತ್ತಾನೆ. ಮಚ್ಚುಗಳ ಕರಾಮತ್ತಿನಿಂದ ಬಕೆಟ್ಟುಗಟ್ಟಲೆ ರಕ್ತ ಹರಿಯುವ ಈ ಚಿತ್ರ ಸಜ್ಜನರಿಗೆ ಇಷ್ಟವಾಗಲಾರದು. ಆದರೂ ತನ್ನ ಪಾತ್ರವನ್ನು ಚೆನ್ನಾಗಿ ನಿ... ಆದಿ ಲೋಕೇಶ್‌ಗೆ ಒಳ್ಳೊಳ್ಳೆಯ ನಿರ್ದೇಶಕರು ಸಿಕ್ಕಿದಲ್ಲಿ ಈತ ... ದಿನಗಳಲ್ಲಿ ನಾಯಕನಟನಾಗಿ ವಿಜೃಂಭಿಸಬಹುದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676...
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Banga...